

ಸಂಚಯ

ಸಂಚಯ

ಸಾಂಸ್ಕೃತಿಕ ಸಂಕಲನ
ದ್ವೈಮಾಸಿಕ

ಸಂಪುಟ : ೮
ಸಂಚಿಕೆ : ೩

ಜುಲೈ-ಆಗಸ್ಟ್ ೧೯೯೬

ಪ್ರಕಟಣೆ : ಸಂಚಯ ಬಳಗ

ಸಂಪಾದಕರು :
ಡಿ. ವಿ. ಪ್ರಹ್ಲಾದ್
ರವಿಕುಮಾರ ಕಾಶಿ

ಚಂದಾ ವಿವರ
ವಾರ್ಷಿಕ : ರೂ. ೫೦
ಸ್ಥಾಯಿ ನಿಧಿ : ರೂ. ೪೫೦

ಸಂಪರ್ಕ ವಿಳಾಸ :
೨೪/ಡಿ, ೧೭ನೇ ಮುಖ್ಯ ರಸ್ತೆ
ಮುನೇಶ್ವರ ಬ್ಲಾಕ್
ಜಿ. ಇ. ಎಫ್. ಅಂಚೆ
ಬೆಂಗಳೂರು-೫೬೦ ೦೨೬

ಫೋನ್ : ೬೨ ೫೬ ೬೦

ಪ್ರೀತಿ ಕಲಿಸು
ತಂದೆ ನಮ್ಮಲ್ಲಿ
ಕರುಣೆ ಗೌರವಗಳನು

ಭೂಮಿಯ ಪ್ರತಿ ಮನುಷ್ಯರ
ಗಾಯಗಳ ಮಾಯಿಸುವ ಪ್ರೇಮ ಕಲಿಸು

—ಒಹಬ್ವೆ ಪ್ರಾರ್ಥನೆ
ಅನು : ಎಲ್ಸಿ ನಾಗರಾಜು

ಮುಖಚಿತ್ರ : ರಘುರಾಯ್, ಕೃಪೆ : ಕೈ
ಕಾರಂತರ ರೇಖಾಚಿತ್ರ : ಎಂ. ಎಸ್. ಮೂರ್ತಿ

ನಿವೇದನೆ

ಪ್ರಿಯ ಓದುಗರೆ

ಮತ್ತೊಂದು ಮಳೆಗಾಲ; ಬೇಂದ್ರೆಯ ನೆನಪು ಹುಟ್ಟಿಸುವ ಶ್ರಾವಣ. ಇದರ ಜೊತೆಗೇ ಸುತ್ತುವ ಜಗತ್ತಿನ ಸುತ್ತ ಅನೇಕ ಬದಲಾವಣೆ, ಹುಲ್ಲುಗರಿಕೆಯಿಂದ ಬಾಂಬು ಬಿದ್ದ ಇರಾಕಿನವರೆಗೂ.

ನಾವೆಲ್ಲರೂ ಹೆಮ್ಮೆ ಪಡುವ ವಿಷಯ; ರಾಜಕುಮಾರ್ ತಮ್ಮ ನಟನೆಗಾಗಿ ಗಳಿಸಿದ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ಈ ನಾಡಿನ ಜನಗಳ ಬದುಕಲ್ಲಿ ಹಾಸುಹೊಕ್ಕಾಗಿರುವ ಅವರಿಗೆ ಈ ಪ್ರಶಸ್ತಿ ಸಂದಿರುವುದು ಅವರ ನಟನೆಗಷ್ಟೇ ಅಲ್ಲ ಅವರು ಸಮರ್ಥಿಸಿದ ಮೌಲ್ಯ ವಿನಯ ಸಜ್ಜನಿಕೆಗಳಿಗೆ.

ತಮ್ಮ ತೊಂಭತ್ತೈದಕ್ಕೆ ಅಡಿಯಿಡುತ್ತಿರುವ ಕಾರಂತರು ಕನ್ನಡದ ದೀಪಸ್ಥಂಬಗಳಲ್ಲೊಬ್ಬರು ಅವರ ಜೀವಂತಿಕೆ ಲವಲವಿಕೆ, ಸಿಟ್ಟು, ಹಠಮಾರಿತನಗಳೆಲ್ಲಾ ನಮ್ಮ ಸಾಂಸ್ಕೃತಿಕ ಬದುಕಿನ ದಾಖಲೆಗಳೇ. ಕೆಲವು ವರ್ಷಗಳ ಕೆಳಗೆ ಬೆಂಗಳೂರಿಗೆ ಬಂದಿದ್ದ ಕಾರಂತರನ್ನ ಗೆಳೆಯ ಶ್ರೀಧರ ಮತ್ತು ನ. ರವಿ ಸಂದರ್ಶಿಸಿದ್ದರು ಆ ಸಂದರ್ಶನವನ್ನ ಈ ಸಂಚಿಕೆಯಲ್ಲಿ ಕೊಡಲಾಗಿದೆ.

ರಾಮಚಂದ್ರ ಶರ್ಮರ ಕವಿತೆಯೊಂದರ ಸಾಲಿದೆ "ಒಂದೊಂದು ಕವನವೂ ಭರವಸೆಯ ವ್ಯವಸಾಯ ಅಜ್ಞಾತದ ತಳಕ್ಕಿಳಿದು ಬಂದವನ ಭಾಗ್ಯ" ಅಂತ, ನಮ್ಮ ಮಟ್ಟಿಗೆ ಒಂದೊಂದು ಸಂಚಿಕೆಯೂ ಭರವಸೆಯ ವ್ಯವಸಾಯ, ನಾವು ಎಷ್ಟೇ ಪ್ರಯತ್ನ ಪಟ್ಟರೂ ನಾವೆಲ್ಲರೂ ಪರಸ್ಪರ ಮನುಷ್ಯರ ಜೊತೆಗೆ ಈ ಎಲ್ಲ ಚಟುವಟಿಕೆ ನಡೆಸಬೇಕಾದ್ದರಿಂದ ಅಂದುಕೊಂಡಂತೆ ಆಗುವುದು ಕೆಲವು ಮಾತ್ರಾ.

ಮುಂದಿನ ವಿಶೇಷ ಸಂಚಿಕೆ ಸಿನಿಮಾ ಕುರಿತದ್ದಾಗಿರುತ್ತದೆ, ವಿ. ಶೈಲಜ ಇದರ ಅತಿಥಿ ಸಂಪಾದಕಿ. ಆದಷ್ಟು ಬೇಗ ನಿಮ್ಮ ಕೈಗೆ ಹೊಸ ಸಂಚಿಕೆಗಳನ್ನಿಡುವ ಉತ್ಸಾಹದಲ್ಲಿ

ನಿಮ್ಮ

ಸಂಪಾದಕ

ಎರಡು ಕವಿತೆಗಳು

○○

● ಜಿ. ಕೆ. ರವೀಂದ್ರಕುಮಾರ್

೧. ತೆನೆಗಳು ತಲೆ ತಗ್ಗಿಸದಿರಲಿ

ತಲೆ ತಗ್ಗಿಸಿದ ಬಯಕೆಗಳು
ಏಕಾಂತದ ನೊಣಗಳಾಗಿ ಕಾಡಿ
ಹರಿಬಿಟ್ಟ ಕೈಗಳು ಚದುರಿಸಲು ಓಡಿ
ಮತ್ತೆ ಕಾಡುವಾಗ ಹುಟ್ಟಿಸಿದ ತಂದೆಯೇ ಪರದಾಡಿ

ಸಂತಾನದ ಮುಂದೆ ಸಲುವ ಸಂತಾಪಕೆ ಎರಡು ಮುಖ
ಹುಟ್ಟಿಸಿದ ದೇವ ಹುಲ್ಲು ಮೇಯಿಸಿದ್ದೊಂದು
ಹುಟ್ಟಿದಾಸೆಗಳು ತೆವಲಿಲ್ಲದೆ ಬೆಳೆದದ್ದು ಇನ್ನೊಂದು

ಅರ್ಥವಾದ ಮೇಲೆ ಬಾಳುವುದು ಕಠಿಣ
ಆಸೆಗಳಿಗೆ ಹಾಕಿ ಕಡಿವಾಣ
ಹೆಜ್ಜೆಯ ಮೇಲೊಂದು ಹೆಜ್ಜೆಯನಿಕ್ಕುವ ಜಾಣಪಯಣ

ಹುಡುಗಿಯ ಕಂಡೊಡನೆ ಮಕ್ಕಳಾಗದಂತೆ
ಕಂಡ ಕಂಡವರ ಗಂಡನಾಗದಂತೆ
ಲಾಟರಿ ಟಿಕೇಟು ಹಾಸಿ ದೇಶವನೆ ಸುಖಿಸದಂತೆ
ಸಾವರಿಸಿಕೊಳ್ಳುವ ಯಾನ

ಮೊಳೆಯೊಡೆವ ಬೀಜಕ್ಕಿರಲಿ ನನ್ನ ಪ್ರಣಾಮ
ನೀರು ಗೊಬ್ಬರವಿರಲಿ
ಹಾಕುವ ಸಾವಯವ ಬುದ್ಧಿಗೆ ಬರಗಾಲ ಬರದಿರಲಿ

ತೆನೆಗಳು ತಲೆ ತಗ್ಗಿಸದಿರಲಿ

೨. ತೂಕದವರು

ತಳ್ಳಿಸಿಕೊಂಡು ಸರಿದು ಮುಗ್ಗರಿಸಿ ಬಿದ್ದ ಮೇಲೂ
ಒಂದೇ ಸಮಾಧಾನ
ತಳ್ಳಿದವನ ಬಲ ನನ್ನ ಬಿದ್ದ ಹಲ್ಲಿಗೆ ಸಮ

ಬಲವನಳಿಯಲು ಬಿದ್ದ ಹಲ್ಲೇ ತೂಕದ ಬಟ್ಟು
ದಾಮಾಶಯ ಗುಟ್ಟು
ಬಲವನಳಿಯುವಾಗೆಲ್ಲ ಹಲ್ಲು ಬೀಳುವುದೆಂದರೆ
ಮೂವತ್ತೆರಡೇ ದಿನ
ಚಿಮ್ಮುವ ರಕ್ತವೂ ಹರಿವನರವೂ ಮಾನಕಗಳಾದಲ್ಲಿ
ಮತ್ತಷ್ಟು ದಿನ

ಬಲವನಳಿಸಿಕೊಂಡರೂ ಅವನು ದಯಾಮಯಿ
ಕಟ್ಟಿಸಿಕೊಟ್ಟ ಹಲ್ಲು
ಜೋಡಿಸಿದ ಕಾಲು
ಆಸರೆಗೆ ಕೋಲು

ಅಪ್ಪನನ್ನು ಉಳಿಸಿಕೊಟ್ಟಿದ್ದಕ್ಕೆ
ಮಗ ಕೃತಜ್ಞ
ಬಾಗಿಸಿದ್ದಾನೆ ಬೆನ್ನು
ನೆರವಾದವರಿಗೆಲ್ಲ ತೂಕದ ಪಾತ್ರೆ

ಬಲವನಳಿದ ಹಲ್ಲು
ಬಲವ ಹೊತ್ತ ಬೆನ್ನು
ತೃಪ್ತಿಯಿಂದ ಇಡುವ ಹೆಜ್ಜೆ ಹೆಜ್ಜೆಗೂ
ಕುಸಿವ ನೆಲ

ಈ ಬಲವಂತರನ್ನಳಿಯಲು
ಇನ್ನು ಮಣ್ಣಿನ ಕಲ್ಲು

ಬರೆದದ್ದರ ಪ್ರಭಾವ ಸಾವಿರ ಜನರಲ್ಲಿ ಒಬ್ಬನಮೇಲೆ
ಬದುಕಿನ ಪ್ರಭಾವ ಹತ್ತರಲ್ಲಿ ಒಬ್ಬನಮೇಲೆ

ಶಿವರಾಮಕಾರಂತ

ಮುಸ್ಸಂಜೆಯಲ್ಲಿ ಮುಂಜಾವಿನ ಮಾತು

○○

● ಸರಸ್ವತಿ ಗಂಗೊಳ್ಳಿ

ಗೆಳೆಯಾ, ಆಷಾಢದ ತುಂತುರು ಮಳೆಯಲ್ಲಿ
ನಡೆದಲ್ಲೆಲ್ಲ ಹೆಜ್ಜೆ ಗುರುತುಗಳು
ಕಾಣುವುದೇ ಇಲ್ಲ
ಕಳೆದ ಆಷಾಢದಲ್ಲೂ
ಹೀಗೆಯೇ ಅಲ್ಲವೆ ನಾವು ನಡೆದಿದ್ದು
ಜಿನುಗು ಮಳೆಯಲ್ಲಿ ಚೆಲ್ಲಾಟವಾಡಿದ್ದು
ಮುನಿಸಿಗೆ ಮುತ್ತುಕೊಟ್ಟು ಕನಸ ಹೆಣೆದಿದ್ದು
ನಡುಗುವ ಕೈಯ್ಯಲ್ಲಿ ಕೈಯಿಕ್ಕಿ ಬೆಚ್ಚಗಾಗಿದ್ದು
ಆಗ ನಾನೋ ಕೆಂಪುಕೆನ್ನೆಯ ಹುಡುಗಿ
ತುಂಟ ಕಣ್ಣಿನ ಹುಡುಗ ನೀನು

ಬಚ್ಚಲಿನ ಅಡ್ಡಗೋಡೆಯ ಆಚೆ
ನೇತಾಡುತ್ತಿದ್ದ ಅಮ್ಮನ ಹರಿದ ಸೀರೆಯಲ್ಲಿ
ವಾಸ್ತವದ ಕತೆಯಿತ್ತು
ಅವಳು ತುಂಬಿದ ಮಮತೆ
ಬುಟ್ಟಿಯ ಲೆಕ್ಕವಿಡಲಿಲ್ಲ
ತುಂಡು ಪಂಚೆಯುಟ್ಟ ಅಪ್ಪನ ಉರಿಗಣ್ಣಿನಲ್ಲಿ
ಬದುಕಿನ ವಿಷಮತೆಗೆ ಹೊಗೆಯಾಡುವ ಕ್ರೋಧವಿತ್ತು
ಅವನ ಗುಡುಗಿನ ನಾವು
ನಡುಗಲಿಲ್ಲ
ಎಲ್ಲಕ್ಕೂ ಬೆನ್ನುಕೊಟ್ಟು ನಡೆದು
ಬಂದದ್ದೆಷ್ಟು ದೂರ?

ಗೆಳೆಯಾ, ಯಾಕೋ ನಿಂತುಬಿಟ್ಟೆ ಅಲ್ಲೆ?
ಕತ್ತಲಾಗುತ್ತಿದೆ, ಚಳಿಹೆಚ್ಚು
ಹೆಜ್ಜೆ ಭಾರ – ಎನ್ನುತ್ತೀಯಾ?
ಎಣ್ಣೆ ಇನ್ನೂ ಮುಗಿದಿಲ್ಲ
ಕಡ್ಡಿಗೀರಿ ದೀಪ ಹೊತ್ತಿಸುವೆ
ನನ್ನೆಡೆಗೆ ಕೊಂಚ ತಿರುಗು
ಬೆಚ್ಚಗಿನ ತೋಳಲ್ಲಿ ನಿನ್ನ ಬಂಧಿಸುವೆ
ಇಗೋ ಹೀಗೆ ಎತ್ತಿಡು ಹೆಜ್ಜೆ
ಕೈಗೋಲು ನಾನಿರುವೆ.

ಮುಸ್ಸಂಜೆ ಇನ್ನೂ ಕಳೆದಿಲ್ಲ
ಬಾ, ಹೀಗೇ ನಡೆಯುತ್ತ
ಒಂದಿಷ್ಟು ಮಾತಾಡೋಣ
ಅಂದು ಅವಸರದಲ್ಲಿ ಕಟ್ಟಿಟ್ಟ
ಅನುಭವಗಳ ಬುತ್ತಿ ಬಿಚ್ಚಿ

ಹೀಗೆ ವಿರಾಮದಲ್ಲಿ ಕುಳಿತು
ಕೊಡುವ ಕಳೆಯುವ ಲೆಕ್ಕವಿಡಲು
ಆಗ ನಮಗೆಲ್ಲಿತ್ತು ಪುರುಸೊತ್ತು
ರಂಗೋಲಿ ಬಿಡಿಸಿ ರಂಗು ತುಂಬಲು
ಕಡಿಮೆಯೇ ನಾವು ನಡೆಸಿದ ಕಸರತ್ತು?
ಈಗಲೋ ಬಿಳಿಗೂದಲಲ್ಲಿ ಕೈಯಾಡಿಸಿ
ಹೇನು ಹೆಕ್ಕುವೆ ನಾನು
ಕನ್ನಡಕ ಮೂಗಿಗೇರಿಸಿ
ವಾಕಿಂಗ್‌ಸ್ಟಿಕ್ ಹುಡುಕುವೆ ನೀನು
ಗೆಳೆಯಾ,
ಬಾ ನಡೆಯೋಣ ಹಾಗೆ – ಅಂದಿನಂತೆ
ಮುಸ್ಸಂಜೆಯಲ್ಲಿ ನಿತ್ಯಮಲ್ಲಿಗೆ ಅರಳುವಂತೆ.

ಉಪಗುಪ್ತ

೦೦

ಮೂಲ– ರವೀಂದ್ರನಾಥ ಠಾಕೂರರ 'UPAGUPTA'.

ಭಾವನುವಾದ– **ಬಿ. ಆರ್. ಪೋಲೀಸ್‌ಪಾಟೀಲ.**

I

ಬುದ್ಧನಂತರಂಗದ ಶಿಷ್ಯ ಉಪಗುಪ್ತ ಮಲಗಿದ್ದ
ಮಥುರೆಯ ಕೋಟೆ ಬದಿ ಮಣ್ಣ ಹಾಸಿಗೆಯಲ್ಲಿ
ಶ್ರಾವಣದ ಆ ರಾತ್ರಿ ಶಬ್ದಗಳ ಸದ್ದಿಲ್ಲ.
ಮನೆಯ ದೀಪಗಳಿಲ್ಲ, ಮೇಲೆ ಚುಕ್ಕಿಗಳಿಲ್ಲ
ಯಾರ ಹೆಜ್ಜೆಗಳವು ಏನದು ಝುಣಝುಣ?
ಎದೆ ತಟ್ಟಿದಾ ಸದ್ದಿಗಚ್ಚರಿದು, ಎಚ್ಚತ್ತು ಎದ್ದು ಕುಳಿತ.
ಕ್ಷಮೆಯ ಸೂಸುವ ಕಣ್ಣು ಕುಕ್ಕಿತಾ ದೀಪಕ್ಕೆ
ನಾರಿಯೊಬ್ಬಳು ಹಿಡಿದು ಬಂದ ಆ ರಾತ್ರಿ!
ಹರೆಯ ಸುರೆ ಕುಡಿದು ಮತ್ತಳಾಗಿಹ ಬೆಡಗಿ
ತಿಳಿನೀಲಿ ಸೀರೆ, ವಜ್ರದುಡುಗೆಗಳೆಷ್ಟೋ?
ಯಾರಾಕೆ?
ಓ ಈಕೆ ದೇವದಾಸಿ.
ಮತ್ತಳಿನ್ನೂ ಈಕೆ, ಮತ್ತೆ ಮತ್ತೆ ನೋಡಿ
ದೀಪವನು ಸಮ್ಮುಖದ ಬಳಿಸರಿಸಿ ನೋಡಿದಳು,
ನೋಡಿದಳು ಆ ಮುಖವ ಮತ್ತೆ ಮತ್ತೆ ಆ ಮದೋನ್ಮತ್ತೆ!
ಕಳೆಯೆ ತಾ ಮೈವೆತ್ತ; ಸತ್ಕಳೆಯ ಆ ಚಿತ್ತ
ಕುಕ್ಕಿಸಿದೆ ಒಂದು ಕ್ಷಣ ಕ್ಷಮಿಸು, ಓ ಪುರುಷಾ,
ತರವೆ ಮಲಗುವುದಿಲ್ಲಿ ಮಣ್ಣ ಹಾಸಿಗೆಯಲ್ಲಿ?
ಬಂದಿರುವೆ, ಕರೆದೊಯ್ವೆ ಬಂದು 'ಮಲಗು,
ನನ್ನ ಸಿರಿಮನೆಗೆಲ್ಲ ದೊರೆಯೆ ನೀನಾಗು."
ಉಪಗುಪ್ತ ನಸುನಕ್ಕ, ಎಲ್ಲೆಡೆಗೆ ಬೆಳಕಾಯ್ತು.
"ಆ ಕಾಲ ಬಂದಿಲ್ಲ. ಬಂದಾಗ ಇವನಿಲ್ಲ
ಬಂದೆ ಬರುವೆನು ಈಗ ಹೋಗು ಹುಡುಗಿ"
ಮನ ಮುರಿದ ಆ ಮಾತ ಬೆನ್ನೇರಿ ಗುಡ್ರೆಂಬ
ಬಿರುಗಾಳಿ, ಬಿರುಮಳೆ – ಗುಡುಗು–ಸಿಡಿಲು.
ಕರಿ ರಾತ್ರಿಯಾ ಹಲ್ಲು ಕಂಡು ನಡುಗಿದ ಬೆಡಗಿ
ಕಂಪಿಸಿತು ಅವಳೆದೆ, ನಡುಗಿತು ಅವಳಧರ
ಶಾಂತನೀ ಶಾಂತಿಧರ ಕದಲಲಿಲ್ಲ –
ಬೆದರಿದಾ ಅವಳಲ್ಲಿ ನಿಲಲೇಇಲ್ಲ.

II

ಸರಿದೆ ಸರಿಯಿತು ಕಾಲ, ಬಂತು ಮರು ಕೈ–ಬಾಯಿ
ಸೃಷ್ಟಿಗೆ ಪಿಸುಮಾತು – ಬಿಡುವಿಲ್ಲ ಒಂದಿನಿತು,
ರೆಂಬೆ–ಕೊಂಬೆಗಳಲ್ಲಿ ಹೊಸಜೀವ, ಹೊಸಭಾವ,
ದಿಟ್ಟಿ ಸಾಗಿದರತ್ತ ಮೊಗ್ಗುಗಳು – ಹೂವುಗಳು,
ಹೂ ಹೊತ್ತ ಬಾಹುಗಳು ನೋಯುತಿರಲು
ಕೊರಳೆ ಕೊಳಲಾಗಿತ್ತು, ಅಹ್ಲಾದ ಸೂಸಿತ್ತು.
ನಿಲ್ಲಲೇನುಂಟಲ್ಲಿ, ಯಾರಲ್ಲಿ ಊರಲ್ಲಿ?
ಎಲ್ಲರೂ ನಿಮಗ್ನ ಹೂಹಬ್ಬದಲ್ಲಿ.
ಹುಣ್ಣಿಮೆಯ ಆ ರಾತ್ರಿ ದಿಟ್ಟಿಸಿದ ಚಂದಿರನು
ಬೆಳಕಲ್ಲೂ ಕತ್ತಲೆಯ ಕೋಟೆ–ಬದಿಗೆ.
ಹಾದಿಯಲಿ ಯಾರಿಲ್ಲ, ಕರ್ತವ್ಯ ನಿಲಲಿಲ್ಲ
ಉಪಗುಪ್ತ ಸಾಗಿದನೂರ ದ್ವಾರದಾಚೆ.
ಹೊತ್ತು – ಗೊತ್ತೇ ಇಲ್ಲ, ನಿದ್ರೆಯರಿಯದ ದೂರು
ತೂರಿಬಂತದೊ ಕೋಕಿಲದ ಹಾಡಿನಲ್ಲಿ.
ನೋವು ತುಂಬಿದ ದನಿಯ, ನೋವೆ ನೋವಿನ ದನಿಯ
ತಿಳಿದಾತ ಹೋದಾನು ಹೇಗೆ ಮುಂದೆ?
ನಿಂತನುಪಗುಪ್ತ, ನಿಟ್ಟಿಸಿದ, ಆಲಿಸಿದ.
"ಯಾರಲ್ಲಿ? ಕೋಟೆ ಸೃಷ್ಟಿಪ ಕಾಳ್ಗತ್ತಲಲ್ಲಿ?"
ಹೆಂಗೂಸು ಒಬ್ಬಳೆ ನರಳುತ್ತಾಬಿದ್ದಿಹಳು?
ಎಲ್ಲರಿಗು ಬೇಕಿದ್ದ ಬೇಡದಾ ಈ ಇವಳು
ರೋಗಪೀಡಿತಳಾಗಿ ನಲುಗಿ ಹೋಗಿಹಳಲ್ಲ!
ಎಲ್ಲರಿಗೂ ಬೇಕಾದ ಎಲ್ಲವೂ ಹೀಗೆಯೆ. ನುಗ್ಗು ನುಗ್ಗು
ತೊರೆದದನು ಹಿಡಿವರು ಬೇರೆದಾರಿ.
ಧಾವಿಸಿದ ಆ ಕಡೆಗೆ ನಿಡುಸುಯ್ದು ಬಳಿಸಾಗಿ
ಅತಿಭೋಗದಾ ರೋಗ, ಕೀವು ತುಂಬಿದ ದೇಹ
ಎತ್ತಿ ತೊಡೆ ಮೇಲೆ ಶಿರವಿರಿಸಿಕೊಂಡ.
ಒಣಗಿದ್ದ ನೀರೆಯ ತುಟಿಗಳಿಗೆ ನೀರಿತ್ತ
ಗಾಯಗಳ ಕೀವೊರೆಸಿ, ಮದ್ದು ತಾ ಸವರುತ್ತ
ತನ್ನೆ ತಾ ಮರೆತಿರಲು ಸೇವೆಯಲಿ ಉಪಗುಪ್ತ

ಕೇಳಿದಳು ಆ ನೀರೆ, ಜರ್ಜರಿಪ ದನಿಯಲ್ಲಿ.
"ಓ ಕರುಣೆಯೆ, ಕರುಣಾಳು, ಯಾರು ನೀನು,
ಜಗವೆಲ್ಲ ತೊರೆದವಳನೆತ್ತಿಕೊಳಲು?"
"ಕಾಲ ಬಂದಿಹುದೀಗ, ಬಂದೆ, ಬಂದಿಹೆ ನಾನು
ಯಾರಿಲ್ಲ ಎನ್ನದಿರು, ಇರುವೆ ನಾನು
ಇರುವೆ
ನಾನು.

ವಿಶ್ವಾಸ

ಭಗವತಿ ಎಂ. ಆರ್.

ಆಗೀಗೊಮ್ಮೆ ಕೆದಕಿದ ನೆನಪು:
ಕವನಗೊಡ್ಡು ಎಂದೆಲ್ಲಾ ತಳಮಳ
ಅಸಹಾಯಕತೆ, ರೋಷ, ಚಡಪಡಿಕೆ


ಮತ್ತದೇ ಬೇಸರದ ಪದಗಳು
ಕಡಿದಷ್ಟೂ ಬರಲಾಗದ ಮತ್ತಷ್ಟು
ಸರಕುಗಳು; ಬತ್ತಲಾರದ ಬಯಲು

ಹರಿಯುವಷ್ಟು ಕೋಪ;
ಹಸುಕಂದನಂತೆ ಕವನಗಳು ಬಿಚ್ಚಿಕೊಳ್ಳುವಾಗ
ವಾತ್ಸಲ್ಯದಿ ತಲೆನೇವರಿಸಿ
ಕಣ್ಣುಮುಚ್ಚುತ್ತೇನೆ!

ಏನಂತೆ ಬಾರದಿರೆ, ಕಾಯುತ್ತೇನೆ
ಬೇಸರವ ಈ ಮಣ್ಣಲ್ಲೇ ಹೂತು.

ನಾ ಬೇರಿಳಿಸಿದ ಹಾದಿಯಲ್ಲೇ
ಹೊಸಶತಮಾನ ಬೆಳೆಯುವಷ್ಟು ಕಾತುರ!
ಪಿಸುಗುಡುವ ಅಂತರದಲ್ಲಿ
ಒಂದು ಗಿಡಕ್ಕೆ ತುಸುಗೊಬ್ಬರ
ಆಗುವಷ್ಟಾದರೂ ಸೈ.

ಸಂದರ್ಶನ



ಹುಚ್ಚು ಮನಸ್ಸಿನ ಇನ್ನೊಂದು ಮುಖ

– ಎನ್. ಎಸ್. ಶ್ರೀಧರಮೂರ್ತಿ
ಸಹಾಯ : ನ. ರವಿಕುಮಾರ್

ಡಾ. ಕೆ. ಶಿವರಾಮಕಾರಂತರು ಕನ್ನಡದಲ್ಲಿ ಮೇರು ಪರ್ವತದಂತೆ. ಸಾಹಿತ್ಯ, ವಿಜ್ಞಾನ, ಯಕ್ಷಗಾನ, ಪರಿಸರ ಎಲ್ಲವೂ ಅವರಿಗೆ ಪ್ರಿಯವಾದ ವಿಷಯಗಳೇ ಯಾವುದರಲ್ಲಿನ ಅವರ ಸಾಧನೆಯು ನಗಣ್ಯವಲ್ಲ, ತಮ್ಮ ದಿಟ್ಟ ನಿಲುವಿನಿಂದ ಸ್ಪಷ್ಟ ಮಾತುಗಳಿಂದ, ನಿಜದ ನಿಚ್ಚಳತೆಗೆಂದೆಂದು ಬಾಗದ ವ್ಯಕ್ತಿತ್ವದಿಂದ, ನಮ್ಮ ಪೀಳಿಗೆಗೆ ಅವರು "ಭೀಷ್ಮ ಸ್ವರೂಪ'ರು, ಅವರ ಮಾತನ್ನು ಅಲ್ಲಗೆಳೆದವರೂ ಅವರ ಕಾಳಜಿಯನ್ನು ಪ್ರಶ್ನಿಸಲಾರರು, ತಮ್ಮ ಸೃಜನಾತ್ಮಕ ಚಟುವಟಿಕೆಗಳನ್ನು ಹುಚ್ಚು ಮನಸ್ಸಿನ ಹತ್ತು ಮುಖಗಳೆಂದು ಕರೆದುಕೊಂಡ ಅವರ ವ್ಯಕ್ತಿತ್ವದ ಇನ್ನೊಂದು ಮುಖ ಅವರೊಡನೆ ನೆಡೆಸಿದ ಈ ಮಾತು ಕತೆಯಲ್ಲಿದೆ, ಅದು ಹತ್ತು ಮುಖಗಳ ಅನಾವರಣವೂ ಹೌದು, ಹನ್ನೊಂದರ ಸೂಚಕವೂ ಅಷ್ಟೇ ನಿಜ.

★ ನಮ್ಮ ದೇಶದಲ್ಲಿ ಸೃಜನಾತ್ಮಕ ಚಟುವಟಿಕೆಯಲ್ಲಿ ತೊಡಗಿರುವವರ ಸೂಚಿತ ಕಾಳಜಿ ಶಬ್ದಗಳಲ್ಲೇ ಉಳಿದು, ಗೊಂದಲದ ಪರಿಸ್ಥಿತಿ ನಿರ್ಮಾಣವಾಗಿದೆ, ಇದಕ್ಕೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?

–"ಸೂಚಿತ ಕಾಳಜಿ" ಎನ್ನುವುದನ್ನೆಲ್ಲ ಯಾವುದಕ್ಕೆ ಬಳಸುತ್ತೀರಿ? ನೀವು ಹೀಗೆ ಹೇಳುವಾಗ ಲೋಕೋದ್ಧಾರದ ಪ್ರಶ್ನೆ ಕೇಳಬೇಡಿ, ಅನುಭವಕ್ಕೆ ಸಂಬಂಧಪಟ್ಟಿದ್ದನ್ನು ಹೇಳಿ, ಯಾರಾದರೂ ಅನ್ಯಾಯ ಮಾಡುವುದನ್ನು ನೀವು ತಡೆದಿದ್ದೀರಾ ಇಲ್ಲದಿದ್ದರೆ ಇನ್ನೊಬ್ಬರ ಸೂಚಿತ ಕಾಳಜಿ ಬಗ್ಗೆ ಮಾತಾಡಲು ನಿಮಗೇನು ಹಕ್ಕಿದೆ? ಇದು ಕಲ್ಪನೆಯ ಪ್ರಶ್ನೆ, ನಿಮ್ಮ ಸಮಾಜ ಯಾವುದು ನಿಮ್ಮ ಸಮಸ್ಯೆ ಯಾವುದು ಇದರ ಉದಾಹರಣೆ ಸ್ಪಷ್ಟ ಇರಬೇಕು ಇಲ್ಲದಿದ್ದರೆ ಸಾಹಿತ್ಯದಲ್ಲಿ ಬರೆದು ಉತ್ತರ ಕೊಡುತ್ತೇನೆ ಎಂಬ ಅಹಂಕಾರ ಬರುತ್ತದೆ ಸಾಹಿತ್ಯದಿಂದ ಲೋಕೋದ್ಧಾರ ಆಗಿಲ್ಲ.

★ ಪರಿಸರ ಚಳುವಳಿಗಳ ಕುರಿತು ನೀವೇನು ಹೇಳುತ್ತೀರಿ?

–ಚಳುವಳಿ ಮಾತು ಬಿಡಿ, ಪರಿಸರ ಯಾವುದು ಕೆಟ್ಟಿದೆ ಅಂತ ನಿಮ್ಮ ಅಭಿಪ್ರಾಯ, ಸರ್ಕಾರಕ್ಕೆ ಉಪದೇಶ ಕೊಡುವ ಬದಲು ನೀವು ಏನು ಮಾಡಿದ್ದೀರಿ, ನಿಮ್ಮ ಊರಿನ ಪರಿಸರ ಎಲ್ಲಿ ಕೆಟ್ಟಿದೆ, ಅದಕ್ಕೆ ಕಾರಣ ಕಂಡು ಹಿಡಿದಿದ್ದೀರ? ಚಳುವಳಿ ಎಲ್ಲದಕ್ಕೂ ಮಾಡಲು ಬರುತ್ತದೆ. ಆಯುಷ್ಯ ಹೆಚ್ಚಾಗಿದ್ದರೆ ಪೇಪರ್‌ನಲ್ಲಿ ಹೆಸರೂ ಬರಬಹುದು. ಪರಿಸರ ಪ್ರಶ್ನೆ ಅದಲ್ಲ, ನೀವು ಕುಡಿಯುವ ನೀರು, ಈಗ ಬಾಗಿಲು ಹಾಕಿ ಕೊಂಡಿದ್ದೀವಿ ಆದರೆ ಶಬ್ದ ಕೇಳುತ್ತಿದೆ, ಇದು ಶಬ್ದ ಮಾಲಿನ್ಯ ಇದರ ಬಗ್ಗೆ ಯೋಚನೆ ಮಾಡಿದ್ದೀರ? ನಿಮ್ಮ ಮೇಲೆ ಬಿದ್ದ ಕಚಡಾ ನೀವೆ ತೆಗೆಯಬೇಕು, ಇದೆಲ್ಲ ಮಾತಿನಿಂದ ಆಗುವ ಕೆಲಸವಲ್ಲ.

★ ವೈಯಕ್ತಿಕವಾಗಿ ಇಂತಹ ಸಮಸ್ಯೆಗಳಿಗೆ ಸ್ಪಂದಿಸುವುದು ಒಂಟಿ ಧ್ವನಿಯಾಗಿ ಬಿಡುವ ಅಪಾಯವಿದೆಯಲ್ಲವೆ?

–ನಿಮ್ಮ ಸಂವೇದನೆ ಜಡವಾಗಿದೆ, ಬಾಗಿಲು ಹಾಕಿದ್ದೇವೆ, ಉಸಿರಾಡಲು ಕಷ್ಟವಾಗುತ್ತಿದೆ, ಬಾಗಿಲು ತೆಗೆಯಬೇಕು, ಇದಕ್ಕೆ ವೇದಿಕೆ ಬೇಕಾ? ನಿಮ್ಮ ಮನೆ ಚರಂಡಿ ಕ್ಲೀನ್ ಮಾಡಿ, ಇದಕ್ಕೆ ನೀವು ಸ್ಪಂದಿಸದಿದ್ದರೆ ಇನ್ನಾರು ಸ್ಪಂದಿಸುತ್ತಾರೆ? ಇದನ್ನು ಬಿಟ್ಟು ದಪ್ಪ ದಪ್ಪ ಪುಸ್ತಕ ಬರೆದರೆ ಏನು ಪ್ರಯೋಜನ? ನೀವು ಇದನ್ನು ಕೊಳಚೆಯಲ್ಲೇ ಈಜಾಡಿದರೆ ಅದೇ ಅಭ್ಯಾಸವಾಗಿ ಬಿಡುತ್ತದೆ, ಇದನ್ನು ಮೀರಬೇಕು, ಬರೀ ಪೇಪರ್ ತುಂಬಿಸಬೇಡಿ

★ ನಿಮ್ಮೆಲ್ಲ ಪರಿಸರ ಚಟುವಟಿಕೆಗಳ ಜೊತೆ ಸಾಹಿತ್ಯಕ ಪ್ರಯೋಗಗಳಲ್ಲಿ ತೊಡಗಿಸಿಕೊಂಡಿದ್ದೀರಲ್ಲ?

–ನೀವು ಎಷ್ಟು ಕಾದಂಬರಿ ಓದಿದ್ದೀರಿ ಎನ್ನುವ ಪ್ರಶ್ನೆ ಬರುತ್ತದೆ, ಯಾಕೆಂದರೆ ಫೋಲಿಂದ ಮೇಲೆ ಪ್ರಕಟಿಸಿದ್ದರೆ ದುಡ್ಡು ಖರ್ಚಾಗುತ್ತದೆ. ಪ್ರಿಂಟ್ ಮಾಡುವವರು ಹಣ ಬರುವುದಿದ್ದರೆ ಮಾತ್ರ ಪ್ರಕಟಿಸುತ್ತಾರೆ, ಇವೆಲ್ಲ ಮುಖ್ಯ ಅಲ್ಲ ನನಗೆ ಮುಖ್ಯವಾದದ್ದು ಹೇಳುವುದಕ್ಕೆ ಕಾದಂಬರಿ ಬಳಸಿದೆ. ನಿಮ್ಮನ್ನು ತಟ್ಟದಿದ್ದರೆ ಅದೊಂದು ಮಿತಿ ಅಷ್ಟೆ.

★ ಹಾಗಾದರೆ ನೀವು ಸಾಹಿತ್ಯವನ್ನು ಯಾವ ದೃಷ್ಟಿಕೋನದಲ್ಲಿ ನೋಡುತ್ತೀರಿ?

–ನನ್ನ ಜೀವನದ ಅನುಭವ ನಾನು ಕೊಟ್ಟೆ. ಅದರ ಬಗ್ಗೆ ಈಗ ಏನಾಗಬೇಕಿದೆ, ಕಾದಂಬರಿಯಲ್ಲಿ ನೂರು ವಿಷಯ ಬಂದು ಹೋಗುತ್ತೆ, ಅದಕ್ಕೆ ನೂರು ತರಹ ವ್ಯಾಖ್ಯಾನ ಬರುತ್ತದೆ, ಒಂದು ಕಾದಂಬರಿ ತಿರುಗಿ ಓದಬೇಕು ಅನ್ನಿಸಿದೆ, ಚೆನ್ನಾಗಿದೆ ಅಂತ ಶಿಫಾರಸ್ ಮಾಡಿದಿರಿ ಅದಲ್ಲ ಮುಖ್ಯ, ನಿಮ್ಮ ಜೀವನಕ್ಕೆ ಏನಾದರೂ ಅದರಿಂದ ಸಿಕ್ಕಿದೆಯೇ ಅನ್ನುವುದು ಮುಖ್ಯ.

★ ನಿಮ್ಮ ಕಾದಂಬರಿಗಳಲ್ಲಿ ತಂತ್ರಗಾರಿಕೆ ಕೊರತೆ ಇದೆ, ಭಾಷೆ ಸಪ್ಪೆಯಾಗಿದೆ ಎನ್ನುವ ಆಕ್ಷೇಪಣೆ ಇದೆ.

–ಅದೆಲ್ಲ ನನಗೆ ಬೇಕಿಲ್ಲ, ನನ್ನ ಕಾದಂಬರಿ ವೈಯಕ್ತಿಕವೇ, ನಿಮ್ಮನ್ನು ಕೇಳಿ ಬರೆದಿದ್ದಲ್ಲ, ಬರೆಯುವುದನ್ನು ನನ್ನ ಅನುಭವಕ್ಕೆ ಸಂಬಂಧಪಟ್ಟ ಹಾಗೆ ಬರೆಯುತ್ತೇನೆ, ಅಂತಹ ಅನುಭವ ನಿಮಗೆ ಬಂದಾಗ ಇವನು ಹೇಳುತ್ತಿರುವುದು ನಿಜ ಅನ್ನಿಸಬಹುದು, ಹೀಗೆ ಯಾರಿಗೆ ಬೇಕಾದರೂ ಪ್ರಚೋದನೆಯಾಗಬಹುದು, ನಾನೊಬ್ಬನೆ ಕಾದಂಬರಿ ಬರೆಯುವವನಲ್ಲ, ನೂರು ಜನರ ನಡುವೆ ನನ್ನ ಧ್ವನಿಯೂ ಕೇಳಬೇಕು, ಲೋಕೋದ್ಧಾರಕ್ಕೆ ಸಾಹಿತ್ಯ ಹುಟ್ಟಿದ್ದಲ್ಲ, ಹುಟ್ಟುವುದಕ್ಕೆ ಸಾಧ್ಯವೂ ಇಲ್ಲ, ನಾವು ಪ್ರಾಮಾಣಿಕವಾಗಿದ್ದರೆ ಹೇಳುವುದಕ್ಕೂ ಅರ್ಥ ಬರುತ್ತದೆ. ನಮ್ಮಲ್ಲಿ ಪೆನ್ನಿನಿಂದ ಜಗವನ್ನೇ ನಡುಗಿಸಬಲ್ಲೆ ಎನ್ನುವಂತಹ ಸಾಹಿತಿಗಳಿದ್ದಾರೆ, ಚಳಿಗಾಲದಲ್ಲಿ ಅವರೇ ನಡುಗಬೇಕಷ್ಟೇ ಓದಿದವರು ನಡುಗಲ್ಲ, ಓದುಗರಿಗೆ ಎಷ್ಟು ತಟ್ಟಿದೆ ಅಂತ ಅಳೆಯಲು ಬರುತ್ತದಾ?, ಕೆಟ್ಟವನಾದರೆ ಹೇಗೆ ಅಂತ ಹೇಳ್ಲಿಕ್ಕೆ ಬರುತ್ತದಾ?,

★ ಯಕ್ಷಗಾನದಂತಹ ಕಲೆಗೆ ಆಧುನಿಕ ಸ್ವರೂಪ ನೀಡಲು ಹೋಗಿದ್ದು ಅದರ ಮೂಲ ನೆಲೆಯನ್ನೇ ವ್ಯತ್ಯಯಗೊಳಿಸದಂತೆ ಎಂಬ ಮಾತಿದೆ, ನಿಮ್ಮ ಪ್ರಯೋಗಗಳ ಹಿನ್ನೆಲೆಯಲ್ಲಿ

–ಯಾವುದು ಏನು ಮಾಡಬಲ್ಲದು ಅಂತ ಅಧ್ಯಯನ ಮಾಡಬೇಕು, ಪುರಾಣ ಅಂದರೆ ಏನು ಅಂತ ತಿಳಿದುಕೊಳ್ಳಬೇಕು, ಈ ವಿಲಾಯಿತಿ ಹೆಣ್ಣುಗಳು, ಗಂಡುಗಳು, ಸೀರೆ ಕೂಡ ಇಲ್ಲ ಎಲ್ಲಾ ಲಂಗಾಲುಂಗಿ, ಫಿಲಂ ನೋಡುತ್ತೀರಾ ಬರೀ ಎಲ್ಲಾ ತೋರಿಸುವ ಕುಣಿತ, ಆಧುನಿಕ ಎಂದರೆ ನಾನು ಅದನ್ನು ಮಾಡಿದೆನಾ? ಯಕ್ಷಗಾನ ಕೂಡ ಒಂದು ಅನುಭವ ಹೇಳುವ ಸಾಧನ, ಪುರಾಣ ಇಲ್ಲದ ದೇಶವೇ

ಇಲ್ಲ, ನಮ್ಮ ಅವಶ್ಯಕತೆಗೆ ತಕ್ಕಂತೆ ಒಂದು ಶಕ್ತಿಗೆ ಸ್ವರೂಪ ನೀಡಿದ್ದೇವೆ, ಅದರ ಸುತ್ತ ಕತೆ ಕಟ್ಟಿದ್ದೇವೆ ಅದೂ ಎಂತಹ ಕತೆ, ಸತ್ಯ ಗೆಲ್ಲುತ್ತದೆ, ಪಾಪ ಮಾಡಬಾರದು, ಇವೆಲ್ಲ ಕೆಟ್ಟದಾ, ಅದನ್ನು ಹೇಳುವಾಗ ಅರ್ಥವಾಗುವ ವಿನ್ಯಾಸ ಕೊಟ್ಟರೆ ಅದು ತಪ್ಪಾ, ಆಧುನಿಕರು ನೀವು ಯಾವ ಭಾಷೆ ಮಾತಾಡುತ್ತೀರಿ ಸ್ವಾಮಿ, ನಿಮ್ಮ ಅಜ್ಜ ಮುತ್ತಜ್ಜನದೋ ನಿಮ್ಮದೊ ನೀವು ಬಳಸುವಾಗ ಅಜ್ಜ ಮುತ್ತಜ್ಜನ ತರಹವೇ ಬಳಸುತ್ತಿದ್ದೀರ? ಅದೇ ವ್ಯತ್ಯಾಸ ನಾನು ಮಾಡಿದ್ದು.

★ ಆ ಮಾಧ್ಯಮ ಮೂಲ ಸ್ವರೂಪದಲ್ಲೇ ಜನರಿಗೆ ತಲುಪುತ್ತಿತ್ತಲ್ಲ?

–ತಲುಪಿಸುವುದು ಅಂದರೆ ಏನು ಸ್ವಾಮಿ, ಟಪಾಲಿನಲ್ಲಿ ಕಳಿಸುವುದಾ? ನಿಮ್ಮ ಮಾತು ಇನ್ನೊಬ್ಬರಿಗೆ ಒಪ್ಪುವ ರೀತಿಯಲ್ಲಿ ಹೇಳಿದರೆ ತಲುಪುತ್ತದೆ, ಇಲ್ಲದಿದ್ದರೆ ಇಲ್ಲ. ಅಷ್ಟಕ್ಕು ಈ ತಲುಪಿಸುವ ಕಷ್ಟ ನಿಮಗೇಕೆ? ನಾವು ಸುಪೀರಿಯರ್ ಎಂಬ ಚಿತ್ರವೇ ನಿಮ್ಮ ತಲೆಯಲ್ಲಿದೆ, ತಲುಪಬೇಕಾದ್ದು ಮೊದಲು ನಮಗೆ, ಆಗ ಬೇರೆಯವರೂ ನಿಮ್ಮ ಉಪದೇಶ ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ ಕಾದಂಬರಿ ಬರೆದು ಕೂಡಲೇ ರಸಋಷಿ ಆದ ಇನ್ನೊಂದು ಅದ, ಇದೆಲ್ಲ ಊಹಾಬದ್ಧ, ಅವನು ಎಷ್ಟು ಸತ್ಯ ಹೇಳುತ್ತಾನೆ ತಿಳಿಕೋಬೇಕು, ನಮ್ಮಲ್ಲಿ ಅನೇಕರಿಗೆ ಕೊಡುವ ಬೆಲೆ ಕೊಡಬಾರದ ಬೆಲೆಯಾಗುತ್ತದೆ, ನನ್ನ ಮಾತು ನಿಮಗಲ್ಲ ಜಗತ್ತಿನ ಉದ್ಧಾರಕ್ಕೆ ಎಂದು ತಿಳಿದುಕೊಂಡವರು ಇವರು, ತಾನು ಏನು ಹೇಳುತ್ತೇನೆ ಎನ್ನುವುದು ಮುಖ್ಯ, ಇವನು ಹೇಗೆ ಮಾತಾಡಲು ಕಲಿತ ಓಡಾಡಲು ಕಲಿತ, ನೀವು ನಡೆದು ತೋರಿಸಿದರೆ ಮಾತ್ರ ಪ್ರಭಾವ ಬೀರುತ್ತೆ ಇಲ್ಲದಿದ್ದರೆ ಭಾಷಣವಾಗುತ್ತದೆ.

★ ಇವತ್ತಿನ ಪ್ರಶಸ್ತಿಗಳ ಮಾನದಂಡದ ಬಗ್ಗೆ ಆಕ್ಷೇಪಣೆ ಏಳುತ್ತಿರುವ ಹಿನ್ನೆಲೆಯಲ್ಲಿ ನೀವು ಏನು ಹೇಳುತ್ತೀರಿ?

–ಮಾನದಂಡ ಕೊಡುವವರಿಗೆ ಗೊತ್ತಿರಬೇಕು, ಅವರ ಮಾನದಂಡ ಸರಿ ಇರದಿದ್ದರೆ ಏನು ಮಾಡಬೇಕು ಹೇಳಿ, ನಿಮ್ಮದೇ ಮಾನದಂಡದಲ್ಲಿ ತೂಗುವುದು? ಯಾವುದೇ ಪ್ರಶಸ್ತಿ ಇರಬಹುದು, ಅದಕ್ಕೊಂದು ಕಮಿಟಿ ಇರುತ್ತೆ, ಕಮಿಟಿಯವರು, ಚೆನ್ನಾಗಿರುವುದಕ್ಕೆ ಕೊಡ್ತಾರೆ. ಜಾತಿ ನೋಡಿ ಕೊಡ್ತಾರೆ, ದಾಕ್ಷಿಣ್ಯಕ್ಕೂ ಕೊಡುವವರಿದ್ದಾರೆ, ಇದಕ್ಕೆ ಏನು ಮಾಡಬೇಕು ಹೇಳಿ.

★ ನೀವು ಎಮರ್ಜನ್ಸಿ ವಿರೋಧಿಸಿ ಪದ್ಮಭೂಷಣ ವಾಪಸ್ ನೀಡಿದ್ದರ ಹಿನ್ನೆಲೆಯಲ್ಲಿ ಈ ಪ್ರಶ್ನೆ?

–ಎಮರ್ಜನ್ಸಿಯಲ್ಲಿ ಪ್ರಜೆಯಲ್ಲಿ ಅಧಿಕಾರ ಇದೆಯಾ ಆಳುವವರಲ್ಲಿ ಇದೆಯಾ ಅನ್ನುವ ಪ್ರಶ್ನೆ ಬಂತು, ಪಾರ್ಲಿಮೆಂಟ್ ನಾವು ಆರಿಸಿದ್ದು ಅನ್ನುವುದನ್ನು ಮರೆತು ಮಾತಾಡಿತು, ಅದಕ್ಕೆ ವಾಪಸ್ ಮಾಡಿದೆ, ಕೆಲವರಿಗೆ ಸರ್ಕಾರ ಹಿಡಿಸಿದೆ ಸುಮ್ಮನಾದರು, ಬಹಳ ಒಳ್ಳೆಯವರು ಸ್ವಾಮಿ, ಇವನು ನನ್ನ ಸ್ನೇಹಿತ ಅವನಿಗೆ

ಪ್ರಶಸ್ತಿ ಕೊಟ್ಟರೆ ನನಗೆ ಸಮಾಧಾನ, ಅವನಿಗೂ ಸಮಾಧಾನ, ಇಂತಹ ಐವತ್ತು ಜನ ಇದ್ದರೆ, ಪ್ರಶಸ್ತಿಗಳಿಗೆ ಬಹಳ ಒಳ್ಳೆಯ ಬೆಲೆ ಬರುತ್ತೆ.

★ ಸಾಹಿತ್ಯದಲ್ಲಿ ಬಳಸಬೇಕಾದ ಭಾಷೆ ಬಗ್ಗೆ ನಿಮ್ಮ ಅಭಿಪ್ರಾಯ

–ದೈನಂದಿನ ಭಾಷೆ ಬಳಸಿ, ಕರ್ನಾಟಕದ ಒಂದೊಂದು ಭಾಗದಲ್ಲಿ ಒಂದೊಂದು ಕನ್ನಡ. ನಿಮ್ಮ ಊರಿನಲ್ಲಿ ನಿಮ್ಮ ಭಾಷೆ. ಹೋತ, ಕಾಣೆ, ಕುಂದ್ರು, ಕುಕ್ಕರ್ನಿ ಯಾವ್ದಾದ್ರು ಆಗಬಹುದು. ನಿಮ್ಮ ದೋಸ್ತಿಗಳ ಹತ್ತಿರ ಮಾತನಾಡಿದಂತೆ. ನಮ್ಮ ಯಾವ ಅಭ್ಯಂತರವೂ ಇಲ್ಲ, ನಿಮ್ಮ ಹಕ್ಕು ನಿಮಗಿಲ್ಲವೆ, ನಿಮ್ಮ ಶುದ್ಧವಾದ ಗ್ರಾಮ್ಯ ಕನ್ನಡ ಚಲಾಯಿಸಿ.

★ ಒಬ್ಬ ಲೇಖಕ ತನ್ನ ಸೂಕ್ಷ್ಮಾತಿಸೂಕ್ಷ್ಮ ಅನುಭವಗಳನ್ನು ಹೇಳುತ್ತ ಹೋಗುವ ಮೂಲಕ ಭಾಷೆಯನ್ನು ವಿಸ್ತರಿಸುತ್ತಾನೆ ಅನ್ನುವುದರಲ್ಲಿ ನಿಮಗೆ ನಂಬಿಕೆ ಇದೆಯೆ?

–ಯಾವ ಲೇಖಕ? ಒಬ್ಬ ಲೇಖಕ ಅಂತಲ್ಲ, ಎಲ್ಲಾ ಲೇಖಕರು ಬರೆಯೋದು ಭಾಷೆಯಲ್ಲೇ..... ಇಲ್ಲದಿದ್ರೆ ಚಿತ್ರ ಬಿಡಿಸಬೇಕು, ಬರವಣಿಗೆ ತಿಳಿಯುವುದು ಭಾಷೆಯಿಂದ, ಹಿಂದೂ ಹಾಗೆ ಮುಂದೂ ಹಾಗೆ, ಅದು ಬದಲಾಗುವುದಿಲ್ಲ ನಿಮಗೆ ಬಂದ ಕಷ್ಟ ಯಾವುದು?

★ ಲೇಖಕನ ನೈಜ ಭಾವನೆಗಳಿಗೆ ಭಾಷೆ ಕೃತಕವಾಗುತ್ತೆ ಅನ್ನುವ ಅಭಿಪ್ರಾಯದ ಹಿನ್ನೆಲೆಯಲ್ಲಿ..

–ಸ್ವಾಮೀ, ನನಗೆ ಕುಣಿಯಬೇಕು ಅಂತ ಮನಸ್ಸಿದೆ, ಆದರೆ ಕುಣಿಯುವುದಕ್ಕೆ ಕಷ್ಟವಾಗುತ್ತೆ, ಕುಣಿಯಬೇಡಿ, ಹೇಳಬೇಕಾದ್ದು ಏನಿದೆ? ನಿಮ್ಮ ಮನೆಯಲ್ಲಿ ಮಾತನಾಡುವುದಿಲ್ಲವೆ? ಹೆಂಡತಿ ಮಕ್ಕಳಿಗೆ ಹೇಳುವುದಿಲ್ಲವಾ? .. ಭಾಷೆ ಗೊತ್ತಿದೆ, ಕಷ್ಟವಾಗುವುದು ಯಾವುದಕ್ಕೆ?

★ ನೈಜ ಭಾವನೆಗಳ ಸ್ತರಕ್ಕೆ ಓದುಗನ್ನು ಕೊಂಡ್ಯೊಯುವುದು ಭಾಷೆ. ಗೊತ್ತಿಲ್ಲದಾಗ ಕಷ್ಟವಾಗಬಹುದು.

–ನೀವೇನು ಹೇಳ್ತೀರಾ, ಅದು ಲೋಕದ ಪ್ರತಿಯೊಬ್ಬರಿಗೂ ಅರ್ಥವಾಗಲಿಕ್ಕೆ ಸಾಧ್ಯವಿಲ್ಲ, ಓದಬಲ್ಲವರು ಲಕ್ಷ ಇಲ್ಲ, ಎಲ್ಲರ ಅಭಿಪ್ರಾಯ ನಿಮಗೆ ತಿಳಿಯಲು ಸಾಧ್ಯವೆ?, ನನ್ನ ಕಾದಂಬರಿ ಓದಿದವರ ಪಟ್ಟಿ ನನ್ನ ಹತ್ತಿರ ಇಲ್ಲ ನಿಮ್ಮ ಹತ್ತಿರ ಉಂಟಾ? ಬರವಣಿಗೆಯ ಮಿತಿ ಅದು, ಓದುವವನಿಗೆ ಅರ್ಥವಾದರೆ ಓದುತ್ತಾನೆ ಇಲ್ಲವಾದರೆ ಸುಮ್ಮನಾಗುತ್ತಾನೆ.

ಕಥೆ

ಬೋಳು ಗುಡ್ಡ ಮತ್ತು ಅವನು

ಂಂ·

● ಬಿ. ಜಿ. ಕೃಷ್ಣಮೂರ್ತಿ

ಒಂದು ದಿನ.

ಸೂರ್ಯ ಇನ್ನೂ ಎದ್ದಿರಲಿಲ್ಲ.

ಗಾಳಿ ಮಾತ್ರಾ ಎಡೆಬಿಡದೆ ಪ್ರಪಂಚವನ್ನು ಮಾತಾಡಿಸುತ್ತಿತ್ತು.

ನನಗೆ ಎಚ್ಚರವಾಗಿದ್ದೇ ದೇವರಿಂದ. ಮನುಷ್ಯರನ್ನು ಪ್ರೀತಿಸುವ ಪ್ರಯತ್ನದಲ್ಲಿದ್ದ ನಾನು ಅದನ್ನೇ ಯೋಚಿಸುತ್ತಾ ಮಲಗಿ ನಿದ್ದೆಮಾಡಿದ್ದೆ.

ನೀವೂ ಸಹ ಬೇಕಾದರೆ ಪ್ರಯತ್ನಿಸಿ ನೋಡಿ. ಕಣ್ಣು ಮುಚ್ಚಿಕೊಂಡು ಕತ್ತಲನ್ನು ದಿಟ್ಟಿಸಿನೋಡಿ. ಕಪ್ಪು ನೀಲಿ ಚುಕ್ಕೆಗಳು ಭಯಂಕರವಾಗಿ ಸುತ್ತುತ್ತಾ ಒಂದು ನೀರಿಲ್ಲದ ಬಾವಿಯನ್ನು ಸೃಷ್ಟಿಸುತ್ತವೆ. ಆ ಬಾವಿಗೆ ತಳ ಇಲ್ಲ. ದಿಟ್ಟಿಸಿದಷ್ಟೂ ಆಳವಾಗಿರುವ ಬಾವಿ ಅದು. ನಾನು ಮನುಷ್ಯನನ್ನು ಪ್ರೀತಿಸುವುದು ಹೇಗೆ ಎಂದು ಯೋಚಿಸುತ್ತಿದ್ದುದರಿಂದಲೇ ಇರಬೇಕು. ಆ ಬಾವಿ ಇದ್ದಕ್ಕಿದ್ದಂತೆ ಮನುಷ್ಯನಾಗಿ ಬಿಟ್ಟಿತು. ನಾನು ಬೆರಗಾಗಿ ನೋಡುತ್ತಿದ್ದಂತೆ ಅದು ಅನಾಯಾಸವಾಗಿ ನಕ್ಕಿತು. ನಾನೂ ಸಹ ನಕ್ಕೆ ಕಷ್ಟಪಟ್ಟು. ಯಾರೋ – 'ಪ್ರೀತಿ ಹುಟ್ಟುವುದು ಹೃದಯದಲ್ಲಿ' ಎಂದು ಹೇಳಿದ ನೆನಪಿದ್ದುದರಿಂದ ಆ ಹೃದಯಕ್ಕಾಗಿ ಬಗ್ಗಿ ನೋಡಿದೆ. ಆಶ್ಚರ್ಯ! ಒಂದು ಹಣದ ಕುಡಿಕೆಯಿತ್ತು. ಆ ಹೃದಯ ನೋಡುವ ತವಕದಲ್ಲಿ ನನಗೆ ಆ ಮನುಷ್ಯ ಮತ್ತೆ ಬಾವಿಯಾಗಿದ್ದುದು ನೆನಪೇ ಆಗಲಿಲ್ಲ.

ಅದಿರಲಿ ನನಗೆ ಆ ದಿನ ಎಚ್ಚರವಾದ ರೀತಿ ಮಾತ್ರಾ ಭಯಂಕರ. ಯಾಕೆಂದರೆ ಏನು ಅಷ್ಟು ಕಷ್ಟಪಟ್ಟು ಹುಡುಕುತ್ತಿದ್ದ ಪ್ರೀತಿಯನ್ನು 'ದೇವರು ಪ್ರತಿ ಮಾನವನಿಗೂ ಹಾಲಿನಂತೆ ಸ್ವಲ್ಪ ಸ್ವಲ್ಪ ಹಂಚಿರುತ್ತಾನೆ' ಎಂದು ನನ್ನ ಹೆತ್ತವರು ಹೇಳುತ್ತಿದ್ದರು. ಅದಕ್ಕೇ ನಾನು ಪ್ರೀತಿಯನ್ನು ಪ್ರೀತಿಸುತ್ತಿದ್ದಷ್ಟೇ ಪ್ರೀತಿಯ ಕೆರೆಯನ್ನೇ ಹೊಂದಿರುವ ದೇವರನ್ನು ಪ್ರೀತಿಸುವುದು ಅನಿವಾರ್ಯವಾಗಿತ್ತು. ಒಂದು ವೇಳೆ ನೀವು ವಿಮರ್ಶಾ ಮನೋಭಾವದವರಾಗಿದ್ದರೆ 'ನೀನು ಪ್ರೀತಿಯನ್ನು ಹುಡುಕುವುದರ ಜೊತೆಗೆ ದೇವರನ್ನೂ ಹುಡುಕುತ್ತಿದ್ದೀ' ಎಂದು ವಿಮರ್ಶಿಸಬಹುದು. ನಾನು ಬಹಳ ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ.

ನನಗೆ ಆ ಭಯಂಕರ ರಾತ್ರಿ ಎಚ್ಚರವಾಗಿದ್ದೇ ದೇವರಿಂದ. ಏನೋ ನನ್ನ ಹಣೆಗೆ ಲೋಲಕದಂತೆ ತಾಕೀ ತಾಕಿ ಹೋಗುತ್ತಿದ್ದ ಅನುಭವವಾಗುತ್ತಿತ್ತು. ಏನೆಂದು ನೋಡಿದರೆ ಒಂದು ಮನುಷ್ಯಾಕೃತಿ ಕುಣಿಕೆಗೆ ಕೊರಳೊಡ್ಡಿ ನೇತಾಡುತ್ತಿದೆ! ಅದರ

ಮೃದುವಾದ ಕಾಲಿನ ಹೆಬ್ಬೆರಳು ನನಗೆ ತೂಗುವಾಗ ತಾಗುತ್ತಿದೆ. ಮುಖವೆತ್ತಿ ನೋಡಿದೆ. ಬರೀ ಮೈ- ಬಟ್ಟೆ ಏನೂ ಇಲ್ಲ. ತಲೆಗೆ ಮಾತ್ರಾ ಒಂದು ಕಿರೀಟವಿದೆ. ಸೌಮ್ಯ ದೃಷ್ಟಿಯಿಂದಲೇ ಅದು ನನ್ನನ್ನು ನೋಡುತ್ತಿತ್ತು. ನನಗೆ ಹೇಳಿತದು – 'ನಾನು ಸೃಷ್ಟಿಕರ್ತ.....ನಾನು ದೇವರು...'. ಪ್ರಶ್ನಾರ್ಥಕವಾಗಿ ನೋಡುತ್ತಿದ್ದೆ. ನನಗೆ ವರ ನೆನಪಾಗಲಿಲ್ಲ. ನನಗೆ ಹಾಲಿನ ಕೊಳ ಸಹ ನೆನಪಾಗಲಿಲ್ಲ. ದೇವರು ಪ್ರತ್ಯಕ್ಷವಾಗಿದ್ದ ಈ ಸ್ಥಿತಿಯನ್ನು ನೋಡಿದರೆ ಯಾವುದೂ ನೆನಪಾಗದು. ಯಾವ ಬೆಳಕೂ ಕಾಣದ ನಾನು ಮಾಂಸದ ಮುದ್ದೆಯಂತಿದ್ದೆ.

ಅದು ಮುಂದುವರಿಸಿತು – 'ನಾನು ಸಾಯುವುದರಲ್ಲಿದ್ದೇನೆ. ನನ್ನ ಕೊರಳಲ್ಲಿರುವ ಕುಣಿಕೆ ನಿನ್ನಂಥವರೇ ನಿರ್ಮಿಸಿದ್ದು. ಇನ್ನು ಕೆಲವೇ ಗಳಿಗೆಗಳಲ್ಲಿ ಸಾಯಲಿದ್ದೇನೆ....' – ದೇವರಿಗೂ ಸಾವುಂಟೆ? ದೇವರ ಒಂದು ಗಳಿಗೆ ಮನುಷ್ಯನ ಎಷ್ಟು ಕಾಲಕ್ಕೆ ಸಮ? ಇತ್ಯಾದಿ ಯೋಚಿಸುತ್ತಿದ್ದೆ.

'ನಾನು ನನಗೆ ಸೇರಿದ ಪ್ರಪಂಚವನ್ನು ಮನುಷ್ಯನಿಗೆ ವಿಲ್ ಬರೆದಿದ್ದೇನೆ. ನನ್ನ ಆತ್ಮರಕ್ಷಣೆಗೋಸ್ಕರ ನಾನು ಬಡವ-ಶ್ರೀಮಂತ ಇತ್ಯಾದಿ ಅಸಮಾನತೆಗಳನ್ನು ಸೃಷ್ಟಿಸಿದ್ದು ತಪ್ಪೇ?. ದಯಪಿಟ್ಟು ಅದಕ್ಕಾಗಿ ಬೇಸರ ಮಾಡಿಕೊಳ್ಳಬೇಡ. ನೀವು ಇನ್ನಾದರೂ ಸರಿಯಾಗಿ ಬಾಳಿರಿ-' ಎಂದಿತು.

ಮುಂದುವರಿಸಿ – 'ನೀನು ....' ಹೇಳಿತು.

*

ನನಗೆ ತಟ್ಟನೆ ಎಚ್ಚರಾಯಿತು. ಒಮ್ಮೆಲೇ ಚಿಟ್ಟನೆ ಚೀರಿಕೊಂಡು ಎದ್ದೆ. ಸೀದಾ ನಮ್ಮ ಮನೆಯ ಹಿತ್ತಲಲ್ಲಿರುವ ಕೋಳಿಗೂಡಿನ ಬಳಿ ನಡೆದೆ ಕೋಳಿಯನ್ನು ತಂತಿಯಿಂದ ನೇಯ್ದು ಬುಟ್ಟಿಯಲ್ಲಿ ಮುಚ್ಚಿಟ್ಟಿದ್ದೆ. ಹತ್ತಿರ ಹೋದ ಕೂಡಲೇ ಅದು ಕತ್ತು ಮತ್ತು ಕೊಕ್ಕನ್ನು ತಿರುಗಿಸಿ ಓರೆಗಣ್ಣಿನಿಂದ ನೋಡಿತು.

ಅಲ್ಲಿಂದ ಅಂಗಳದ ತುದಿಗೆ ಬಂದೆ. ಕತ್ತಲಗರ್ಭದಿಂದ ಹಕ್ಕಿಯೊಂದು ಹಾರಿ ನನ್ನ ತಲೆಯ ಹತ್ತಿರ ಹೋಯಿತು. ಚಂದ್ರನ ಬೆಳಕು ಇದ್ದುದರಿಂದ ಅದು ಗುಡ್ಡದ ಕಡೆಗೆ ಹೋಗುವುದು ಕಂಡಿತು. ಅದು ರಣಹದ್ದು. ಆಕಾಶದಲ್ಲಿ ವೃತ್ತಾಕಾರವಾಗಿ ತಿರುಗಿ ತಿರುಗಿ ಮಾಂಸ ಸಿಕ್ಕಿಯೋ-ಸಿಕ್ಕದೆ ಸುಸ್ತಾಗಿಯೋ ನೆಲದಲ್ಲಿ ಕುಳಿತಿದ್ದಿರಬೇಕು. ಕಾಲಿಗೆ ಇರುವೆ ಕಚ್ಚಿ ಹಾರಿದ್ದಿರಬೇಕು. ಅದು ಎಲ್ಲಿಗೆ ಹೋಗುತ್ತದೆ ಎನ್ನುವುದು ನನಗೆ ಕುತೂಹಲದ ಅಂಶ. ಯಾಕೆಂದರೆ ಅದು ಹೋದಲ್ಲಿಗೆ ನಾನು ಕಾಲುನಡಿಗೆಯಲ್ಲಿ ಹೋಗಬೇಕು.

ನಮ್ಮ ಮನೆಗೆ ಎದುರಾದ ಒಂದು ಬೋಳುಗುಡ್ಡ. ಹಗಲಾದರೆ

ಬೋಳುತಲೆಯ ಮೇಲೆ ಕುಟ್ಟೆ ಹರಿದಾಡಿದಂತೆ ದನಗಳು ಮೇಯುತ್ತಿರುತ್ತವೆ. ಬೋಳುತಲೆಯ ಸುತ್ತಾ ನುಸಿ ಹಾರಾಡುತ್ತಿರುವಂತೆ ಹಕ್ಕಿಗಳು ಹಾರುತ್ತಿರುತ್ತವೆ. ಸ್ಮಶಾನದಲ್ಲಿ ಗಸ್ತು ತಿರುಗಿದಂತೆ ಬೇಟೆಗಾರರು ಪಕ್ಕದ ಕಾಡಿನ ಕಡೆಗೆ ನಡೆಯುತ್ತಾರೆ. ರಾಕ್ಷಸನೊಬ್ಬ ನಾಲಿಗೆ ಚಾಚಿದಂತೆ ಇತ್ತೀಚೆಗೆ ಒಂದು ರಸ್ತೆ ಕಡಿದು ಕೆಂಪು ಮಾಡಲಾಗಿದೆ. ಇಂಥ ಗುಡ್ಡದಲ್ಲಿ ಗಡ್ಡ ಹೆರೆದು ಕೂದಲೊಂದು ಬಿಟ್ಟಂತೆ ಒಂದು ಮರವಿದೆ. ಹುಲು ಮಾನವನೊಬ್ಬ ಯೋಚಿಸುತ್ತಾ ಕುಕ್ಕುರುಗಾಲಲ್ಲಿ ಕುಳಿತಂತೆ ಆ ಮರ ದೂರಕ್ಕೆ ಕಾಣುತ್ತದೆ. ನಾನು ಚಿಕ್ಕವನಿದ್ದಾಗ ಅದನ್ನು ತೋರಿಸಿಯೋ ಅಮ್ಮ ನನಗೆ ಊಟ ಮಾಡಿಸುತ್ತಿದ್ದ ನೆನಪು.

ರಣಹದ್ದು ಹಾರಿದ್ದು ಅಲ್ಲಿಗೇ ಹೋಯಿತು. ಮರಕ್ಕೆ ಎರಡು ಸುತ್ತು ಬಂದಿದ್ದು ಮತ್ತೆ ಕಾಣಲಿಲ್ಲ. ನಾನು ಈಗ ಅಲ್ಲಿಗೆ ಹೋಗಬೇಕು. ಮನೆಯ ಕಡೆ ಮತ್ತೆ ತಿರುಗಿ ನೋಡದೆ ಹೊರಟೇ ಬಿಟ್ಟೆ. ಆ ಗುಡ್ಡದ ಪಾದದ ಬುಡಕ್ಕೆ ತಲುಪುವವರೆಗೂ ಸಂಪೂರ್ಣ ಕಾಡಿನಿಂದಾವೃತವಾದ ದಾರಿ. ಕಲ್ಲು ಮುಳ್ಳುಗಳು ದಾರಿಯಲ್ಲಿ ಲೆಕ್ಕವಿಲ್ಲ. ಅಂತೂ ಇಂತೂ ಆ ಮರದ ಸಮೀಪ ಬಂದೆ ಯಾವ್ಯಾವೋ ಹಕ್ಕಿಗಳು ಕೂಗುತ್ತಿದ್ದವು. ಇನ್ನೂ ಸಹ ಸೂರ್ಯ ಎದ್ದಿರಲಿಲ್ಲ. ಇಬ್ಬನಿಯ ಪರದೆ ಸರಿದಿರಲಿಲ್ಲ. ಬೆಳದಿಂಗಳು ಆವಿಯಾಗಿರಲಿಲ್ಲ. ನನಗೆ ತಕ್ಷಣ 'ಬುದ್ಧ'ನ ನೆನಪಾಯಿತು – ನನ್ನ ಕಣ್ಣೇ ನಂಬಲಾಗದಂಥದ್ದನ್ನು ನಾನು ನೋಡಿದ್ದೆ. ಏನೆಂದರೆ ಆ ಬೋಳುಗುಡ್ಡದ ಒಂಟಿಮರದ ಬುಡದಲ್ಲಿ ಒಬ್ಬ ಗಡ್ಡ ಇಳಿಬಿಟ್ಟುಕೊಂಡು ಸುತ್ತಾ ನಾಲ್ಕು ತರಕಾರಿ, ಭತ್ತ ಬೆಳೆದುಕೊಂಡು, ನೇಗಿಲನ್ನೇ ಕುರ್ಚಿ ಮಾಡಿಕೊಂಡು ಕುಳಿತಿದ್ದಾನೆ. ಸುತ್ತಾ ಹಾರೆ, ಪಿಕಾಸಿ, ಕತ್ತಿಗಳು. ಎದುರಿಗೊಂದಿಷ್ಟು ಮೊಲದ ಮಾಂಸ, ಕುಂಡಲಿನಿ, ವೇಷ ಕಣ್ಣುಮುಚ್ಚಿಕೊಂಡು ಧ್ಯಾನ ಇವೆಲ್ಲವೂ ಈತ ಸನ್ಯಾಸಿಯೆಂಬ ಅನುಮಾನವನ್ನು ಗಟ್ಟಿಗೊಳಿಸುತ್ತವೆ.

ಈತ ಯಾರು? ಹೀಗೇಕೆ ಇಲ್ಲಿಗೆ ಬಂದ? ಈ ಕಲಿಯುಗದಲ್ಲಿ ಋಷಿಯೆ? ಅಲ್ಲ. ಈತ ರೈತನಿರಬಹುದು. ಏಕೆಂದರೆ ನೀರೇ ಇಲ್ಲದ ಜಾಗದಲ್ಲಿ ಸುತ್ತಾ ಬೆಳೆ ಬೆಳೆದಿದ್ದಾನೆ. ನೇಗಿಲು ಹಾರೆ ಮುಂತಾದ ಪರಿಕರಗಳಿವೆ. ಸದೃಢನಾಗಿದ್ದಾನೆ. ಈತ ರೈತನಾಗಿರದೆ ಬೇಟೆಗಾರನಾಗಿದ್ದರೂ ಇರಬಹುದು. ಮಾಂಸದ ಊಟಕ್ಕೆ ತಯಾರಿ ನಡೆಸಿದ್ದಾನೆ. ಆದ್ದರಿಂದ ಬೇಟೆಗಾರನಾಗಿರಲೇ ಬೇಕಲ್ಲಾ!

ಅಥವಾ ಪೂರ್ಣಾವಧಿ ಸನ್ಯಾಸಿಯೇ ಇರಬಹುದೆ?

ಯಾರಾದರೂ ಆಗಲಿ ಮಾತನಾಡಿಸಿದರೆ ವಿಷಯ ತಿಳಿಯಬಹುದೆಂದು ಮುಂದಡಿಯಿಟ್ಟೆ. ಹಕ್ಕಿಗಳು ಇನ್ನೂ ಕೂಗುವುದಕ್ಕೆ ಪ್ರಾರಂಭಿಸಿರಲಿಲ್ಲ. ಇಲ್ಲಿಗೆ ಸಮುದ್ರ ಕಾಣಿಸುವುದಿಲ್ಲ. ಅದರ ಅಲೆಗಳ ಭೋರ್ಗರೆತ ಕೇಳುವುದಿಲ್ಲ. ಅದರಲ್ಲಿ

ಮೀನು ಹಿಡಿಯಲು ಹೆಣಗಾಡುವ ಸಾವಿರಾರು ದೋಣಿಗಳಲ್ಲಿನ ಜನರ ಸಂಕಷ್ಟಗಳು ಕಾಣುವುದಿಲ್ಲ. ದಿನನಿತ್ಯ ಓಡಾಡುವ ಹಡಗುಗಳ ರಹಸ್ಯ ತಿಳಿಯುವುದಿಲ್ಲ. ಸಮುದ್ರದ ದಂಡೆಯಲ್ಲಿನ ಪಂಚತಾರಾ ಹೋಟೆಲಿನ ಕರಿದ ಸೀಗಡಿ ಮೀನಿನ ಪರಿಮಳ ಇತ್ತ ಬರುವುದಿಲ್ಲ. ಕಡಲ ಹಕ್ಕಿಗಳಂತೆ ವಿಮಾನಗಳು ಹಾರಿಹೋಗುತ್ತವೆ.

ಆಚೆ ಪಕ್ಕದ ಒಂದು ಕಾಡನ್ನು ಗುಡ್ಡಮಾಡಿ, ಅಲ್ಲಿರುವ ಕಬ್ಬಿಣವನ್ನು ಯಾರೋ ಎತ್ತಲೋ ಸಾಗಿಸುತ್ತಿದ್ದಾರೆ. ಆ ಕಬ್ಬಿಣವನ್ನು ಹದಮಾಡುವ ಕಾರ್ಖಾನೆಯೊಳಗೆ ಸಿಕ್ಕಿ ಕಾರ್ಮಿಕನೊಬ್ಬನ ಮೂಳೆಗಳು, ಮೆದುಳು, ಗೋಧಿಹಿಟ್ಟಿನಂತಾಗಿ ಅನಾಮಿಕನಾಗಿದ್ದಾನೆ. ನೂರಾರು ಕಾರ್ಮಿಕರ ಮೂಳೆ ನಿಧಾನವಾಗಿ, ಯಾರಿಗೂ ಗೊತ್ತಿಲ್ಲದಂತೆ ಸವೆಯುತ್ತಿದೆ. ಅಲ್ಲಿ ಕಾಡಿದ್ದಾಗ ಈ ಸಂನ್ಯಾಸಿ (?) ಅಲ್ಲಿದ್ದಿರಬೇಕು ಕಾಡು ಬಯಲಾಗುತ್ತಾ ಬಂದಂತೆ ಅಲ್ಲಿಂದ ಕಾಲ್ಕೆಗೆದಿರಬೇಕು.

ಗುಡ್ಡದ ತಳಭಾಗದಲ್ಲಿ ಹರಿಯುತ್ತಿರುವ ನದಿಪಕ್ಕದಲ್ಲಿ ಒಂದು ಪಟ್ಟಣವಿದೆ. ಮರಗಳನ್ನು ಕಡಿಯುತ್ತಾ ಕಡಿಯುತ್ತಾ ಬಂದ ಮನುಷ್ಯರು. ದೇವಸ್ಥಾನ, ಮನೆ, ಹೊಲಗದ್ದೆಗಳನ್ನು ಮಾಡುತ್ತಾ ಈಗೀಗ ಮರಗಳಿದ್ದಲ್ಲಿ ಎತ್ತರದ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಮೊನ್ನೆ ಗ್ಯಾಟ್ ಒಪ್ಪಂದಗಳನ್ನು ಮಾಡಿಕೊಂಡು ಅವಕ್ಕೆ ಕೆಂಪುದೀಪಗಳನ್ನು ಹಾಕಿಸಿದ್ದಾರೆ. ಅವಿಶ್ರಾಂತವಾಗಿ ನಗರಗಳು ದುಡಿಯುತ್ತಿವೆ–ಸೂಳೆಗಳಂತೆ. ನನಗೆ ಈಗ ಒಂದು ಅನುಮಾನ ಕಾಡುತ್ತಿದೆ. ಈ ಸಂನ್ಯಾಸಿ(?)ಗೆ ಹೆಂಡತಿ ಮಕ್ಕಳಿರಲಿಲ್ಲವೇಕೆ? ಬಹುಶಃ ಈತ ಆ ನಗರದಿಂದ ಬಂದಿರಬೇಕು.

ಅವನನ್ನು ಮಾತನಾಡಿಸುವುದು ಹೇಗೆಂದು ಯೋಚನೆ. ಒಮ್ಮೆ ಕೆಮ್ಮಿದೆ. 'ನೀನು ಯಾರು?' – ಎಂದ. 'ನಾನು.... ನಾನು...... ಕರ್ನಾಟಕ'.....? ಎಂದೆ. 'ಆss ಯಾರೆಂದು ಗೊತ್ತಾಗಲಿಲ್ಲ' ಎಂದ. ತಕ್ಷಣ ನಾನು ತಿರುಗಿ ಅವನಿಗೆ ಕೇಳಿದೆ. 'ನೀನು ಯಾರು?' ಎಂದೆ. 'ನಾನು ಬೋಳುಗುಡ್ಡ' – ಎಂದು ಗಟ್ಟಿಯಾಗಿ ಗುಡ್ಡಗಳು ಮಾರ್ದನಿಸುವಂತೆ ನಕ್ಕ ನನಗೆ ಎದೆಯೆಲ್ಲಾ ನಡುಗಲಾರಂಭಿಸಿತು. ಆತನ ಕಡೆಗೆ ನೋಡುತ್ತೇನೆ.... ಆತ ಬಾಯಿಯನ್ನೇ ತೆರೆದಿರಲಿಲ್ಲ. ಅರ್ಥವಾಗದಂತೆ ಆತನ ಕಡೆಗೆ ನೋಡಿದೆ.

ಒಂದು ಕಥೆಯನ್ನು ಹೇಳಲು ಪ್ರಾರಂಭಿಸಿದ.

'ಫಲವತ್ತಾದ ಗದ್ದೆಯಲ್ಲಿ ಒಂದು ಇರುವೆಗೂಡು ಇತ್ತು. ದೇವಸ್ಥಾನದ ಶಿಖರದಂತೆ ಕೆಂಪುಮಣ್ಣಿನಲ್ಲಿ ಕಟ್ಟಿದ ಗೂಡು ಅದು. ಕೆಲವೊಮ್ಮೆ ಆ ಗದ್ದೆಗೆ ಮೇಯಲು ಬಂದ ದನಗಳು ಕೋಡು ತುರಿಕೆಯಾದರೆ ಆ ಶಿಖರಕ್ಕೆ ಕೋಡು ತಿಕ್ಕುತ್ತಿದ್ದವು. ಮತ್ತೆ ಬೆಳಗಾಗುವುದರೊಳಗೆ ಇರುವೆಗಳು ಶಿಖರ ಏರಿಸಿರುತ್ತಿದ್ದವು.

ಒಂದು ಸಾರಿ ಗದ್ದೆಯ ಯಜಮಾನ ಜ್ಯೋತಿಷ್ಯನನ್ನು ಕೇಳಿದ, ಆ ಜ್ಯೋತಿಷ್ಯ 'ಇರುವೆಗೂಡಿನಲ್ಲಿ ಹೊನ್ನಿದೆ' ಎಂದು ಹೇಳಿದ. ಈತ ಒಂದು ಪಿಕಾಸ ತಂದುಕೊಂಡು ಆಳುಗಳನ್ನು ಬಿಟ್ಟು ಆ ಗೂಡನ್ನು ಅಗೆಸಲು ಪ್ರಾರಂಭಿಸಿದ. ಎರಡು–ಮೂರು ಶಿಖರಗಳನ್ನು ಕಿತ್ತು ಆಳಕ್ಕೆ ಕೈ ಹಾಕುವುದರೊಳಗೆ ಭೂಮಿ ಮರಿಗಳನ್ನು ಹಡೆದಂತೆ ಇರುವೆಗಳೆಲ್ಲಾ ಹೊರಬಂದು ಎಲ್ಲೆಂದರಲ್ಲಿ ಕಚ್ಚಲಾರಂಭಿಸಿದವು. ಲಕ್ಷಗಟ್ಟಲೆ ಇರುವೆಗಳ ಮುತ್ತಿಗೆಯಲ್ಲಿ ನಿಲ್ಲಲಾಗದೆ ಆತ ಕಾಲುಕಿತ್ತ.

ಸ್ವಲ್ಪ ದಿನಗಳ ನಂತರ ನಿಧಾನವಾಗಿ ಒಂದು ಹಾವು ಗೊತ್ತಿಲ್ಲದಂತೆ ಅದರೊಳಗೆ ಸೇರಿಕೊಂಡು ಬಿಟ್ಟಿತು. ಇರುವೆಗಳು ಮಳೆಗಾಲಕ್ಕೆ ಕೂಡಿಡುತ್ತಿದ್ದ ಆಹಾರವೆಲ್ಲಾ ಅವಕ್ಕೆ ಗೊತ್ತಿಲ್ಲದಂತೆ ಕಾಣೆಯಾಗುತ್ತಿತ್ತು. ಅದನ್ನು ಪರೀಕ್ಷಿಸಿದಾಗ ಆ ಹಾವು ತಿನ್ನುತ್ತಿತ್ತೆಂದು ಗೊತ್ತಾಯಿತು ಅವುಗಳಿಗೆ. ಹಾವಿನ ಬಾಲಕ್ಕೆ ಕಚ್ಚಲಾರಂಭಿಸಿದವು. ಹಾವು ಬುಸ್ಸೆಂದು ಉಸಿರುಬಿಟ್ಟಿತು. ಇರುವೆಗಳೆಲ್ಲಾ ಹಾರಿ ದೂರಬಿದ್ದವು. ಮತ್ತೆ ಹತ್ತಿರ ಹೋಗುವುದು ಬಿಟ್ಟು ಅವುಗಳೊಳಗೇ ಕಚ್ಚಿಕೊಳ್ಳಲಾರಂಭಿಸಿದವು.

ಒಮ್ಮೆ ಇರುವೆಗಳು ತಮ್ಮ ಉಡುಪಿಗೆಂದು ನೇಯುತ್ತಿದ್ದ ನೂಲನ್ನು ತನಗೇ ಕೊಡಲು ಹಾವು ಆಜ್ಞಾಪಿಸಿತು. ಆ ನೂಲನ್ನು ಒಟ್ಟು ಮಾಡಿ ಹಾವು ಧರಿಸಲಾರಂಭಿಸಿತು. ಹೀಗೆ ಇರುವೆಗಳೆಲ್ಲಾ ಹಾವುಗಳ ಸೇವಕರಾದವು. ಹಾವು ಮೊಟ್ಟೆ ಇಟ್ಟಿತು. ಇರುವೆಗಳೂ ಮೊಟ್ಟೆ ಇಟ್ಟವು! ಆ ಸಮಯದಲ್ಲಿ ಹೊಟ್ಟೆಗಿಲ್ಲದೆ ಇದ್ದ ಇರುವೆಗಳೆಲ್ಲಾ ಒಟ್ಟಾಗಿ ಹಾವನ್ನು ಕಚ್ಚಿ ಓಡಿಸಿಯೇ ಬಿಟ್ಟವು. ಸಿಕ್ಕಿದಷ್ಟನ್ನು ಬಾಚಿ ಕೆಲ ಇರುವೆಗಳು ತಿಂದವು. ಒಟ್ಟಾಗಿ ಶಿಖರವನ್ನು ಏರಿಸಲು ಮಾತಾಡಿಕೊಂಡವು. ಇದ್ದಕ್ಕಿದ್ದಂತೆ ಕೆಲದಿನಗಳಲ್ಲಿ ಹಾವಿನ ಮೊಟ್ಟೆ ಮರಿಯಾಯಿತು. ಆಶ್ಚರ್ಯ! ಇರುವೆಗಳ ಮೊಟ್ಟೆಗಳೂ ಹಾವಿನ ಮರಿಗಳಾದವು!

ಇಷ್ಟೆಲ್ಲಾ ಆಗುವುದರೊಳಗೆ ಈ ಸಣ್ಣ ಸಣ್ಣ ಹಾವುಗಳೂ ಮತ್ತು ಇರುವೆಗಳ ರಾಣಿ ಬೇರೆ ಕೆಲವು ಹಾವುಗಳೊಂದಿಗೆ ಒಂದು ಒಪ್ಪಂದ ಮಾಡಿಕೊಂಡವು. ಅದೇನೆಂದರೆ ಇವುಗಳ ಶಿಖರದಲ್ಲಿರುವ ತೇವವಾದ ಮಣ್ಣಿನಿಂದ ಇಟ್ಟಿಗೆಗಳನ್ನು ಮಾಡುವುದು. ಅದಕ್ಕೆ ಕೆಲಸಗಳು ಅಚಾನಕ್ಕಾಗಿ ಹಂಚಲ್ಪಟ್ಟವು.

ಕೆಲಸಗಾರ ಇರುವೆಗಳು ಮಣ್ಣು ಹೊತ್ತು ಶಿಖರವನ್ನು ಕಟ್ಟುವುದು, ಸಣ್ಣ ಸಣ್ಣ ಹಾವಾದ ಇರುವೆ ಮರಿಗಳು ನಿಂತು ಇನ್ನುಳಿದ ಕೆಲವು ಕೆಲಸಗಾರ ಇರುವೆಗಳಿಂದ ಕಟ್ಟಿದ ಶಿಖರ ಕಿತ್ತು ಇಟ್ಟಿಗೆಗಳನ್ನು ಮಾಡಿಸುವುದು, ದೊಡ್ಡ ಹಾವುಗಳು ಆ ಇಟ್ಟಿಗೆಗಳನ್ನು ತರಿಸಿ ಮತ್ತೆ ಕೆಲವು ಕೆಲಸಗಾರ ಇರುವೆಗಳಿಂದ ತಮಗೆ ಬೇಕಾದಂತೆ ಮನೆಗಳನ್ನು ನಿರ್ಮಿಸಿಕೊಳ್ಳುವುದು. ಹೀಗೆ ಕೆಲಸಗಳು ನಡೆಯಲಾರಂಭಿಸಿದವು.

ಸಣ್ಣ ಇರುವೆಗಳು ಎಷ್ಟು ಶಿಬಿರಗಳನ್ನು ಕಟ್ಟಿದರೂ ಬಿಸಿಲು ಮಾತ್ರಾ ನೇರವಾಗಿ ಅವುಗಳ ಮೇಲೇ ಬೀಳುತ್ತಿತ್ತು. ಆದ್ದರಿಂದ ಕೆಲವು ಸತ್ತವು ಮತ್ತೆ ಕೆಲವು ನಿಶ್ಶಕ್ತವಾದವು. ನಿರಂತರವಾಗಿ ಶಿಬಿರಗಳನ್ನು ಕಟ್ಟಿ ಕೊಡುತ್ತಲೇ ಇದ್ದುದರಿಂದ ಆಹಾರ ಕೂಡ ಸಿಗದೇ ಹೋಯಿತು....'ಎಂದು ಹೇಳುವುದನ್ನು ನಿಲ್ಲಿಸಿದ.

ಇದು ಜನಪದ ಕತೆಯಲ್ಲ. ಇದು ಪೌರಾಣಿಕ ಕತೆಯಲ್ಲ. ಇದು ಕಟ್ಟು ಕತೆಯೂ ಅಲ್ಲ ಅಥವ ಇದು ಕತೆಯೇ ಅಲ್ಲ ಎಂದು ನನಗನಿಸುತ್ತಿದ್ದಂತೆ, ಆ ಒಂಟಿ ಮರದ ಮೇಲೆ ಎಲೆಯಿಂದ ಜಾರಿ ಮರ ಅತ್ತಂತೆ ಕೆಳಗೆ ಆತನ ತಲೆಯ ಮೇಲೆ ಬಿದ್ದಿತು. ಯಾವುದೋ ಪಕ್ಕಿ ಹಿಕ್ಕೆ ಹಾಕಿತು.

ನಾನು 'ನೀನು ಯಾರು?' – ಎಂದೆ.

ಆತ ಜಟೆಯನ್ನು ಬಿಚ್ಚಿ ತಲೆ ಕೊಡಹಿದ. ಆ ಜಟೆಯ ಕೂದಲು ಹಾರಾಡುವ ಧ್ವಜದಾಕಾರವಾಗಿ ಮತ್ತೆ ಕುದುರೆ ಬಾಲದಂತೆ ಜೋತು ಬಿದ್ದಿತು. ಅದನ್ನು ಕಟ್ಟಿಕೊಳ್ಳುತ್ತಾ ಹೇಳಿದ.

'ನಾನು– ಹೊಟ್ಟೆಗೆ ಆಹಾರವಿಲ್ಲದೆ ಬಿಸಿಲಿನಿಂದ ಬೆಂದುಹೋಗುವ ಭಯದಿಂದ ಗೂಡಿನಿಂದ ಹೊರಬಂದ ಇರುವೆ – ಆಮೇಲೆ ನಾನು ಮನುಷ್ಯನಾಗಿದ್ದೇನೆ. ನಾನು ರೈತ. ನಾನು ಕಾರ್ಮಿಕ, ನಾನು ಬೇಟೆಗಾರ. ಆದರೆ ನಾನು ಅವೆಲ್ಲವೂ ಮಡುಗಟ್ಟಿದ ಸನ್ಯಾಸಿ. ಈ ಒಂಟಿಮರ ನನ್ನ ಸಂಗಾತಿ. ಈ ಬೋಳುಗುಡ್ಡ ನನ್ನ ಮನೆ. ಆಕಾಶ ನನ್ನ ಗುರಿ. ಭೂಮಿ ನನ್ನ ಸಾಧನೆ. ಬೆಳಗು ನನ್ನ ನಿರೀಕ್ಷೆ'.

'ಕಾಲೇನು ಗಾಯ?' – ಕೇಳಿದೆ.

ಅಷ್ಟು ಹೊತ್ತಿಗೆ ಅಲ್ಲೇ ಮರದಲ್ಲಿ ಕುಳಿತುಕೊಂಡಿದ್ದ ರಣಹದ್ದು ಘರ್ಜಿಸಿತು. 'ಏಯ್, ಹೊರಟುಹೋಗು! ನಾನು ಅವನಿಗೆ ಹಾರುವುದಕ್ಕೆ ಕಲಿಸುತ್ತಿದ್ದೇನೆ. ಇಲ್ಲವಾದರೆ ನೀನೂ ಸಹ ಕಲಿ.' -

ಮುಖವೆತ್ತಿ ನೋಡುತ್ತೇವೆ. ಮರದ ಸುತ್ತಾ ರಣಹದ್ದುಗಳು. ರೆಕ್ಕೆ ಪಟಪಟ ಬಡಿಯುತ್ತಿವೆ. ಬೋಳುಗುಡ್ಡ ಸಿಡಿದುಹೋಗುತ್ತಿರುವಂತೆ ಆ ಶಬ್ದ ಕೇಳಿಸುತ್ತಿದೆ. ಕೆಲವು ಕೊಕ್ಕನ್ನು ಮಸೆಯುತ್ತಿವೆ. ಕ್ರೂರತೆಯ ಪರಮಾವಧಿಯಾಗಿ ಅದು ಭಯ ಹುಟ್ಟಿಸುತ್ತಿದೆ. ತಲೆಜುಟ್ಟನ್ನು ಹಿಡಿದು ಎತ್ತಿಕೊಂಡು ಹೋಗುವಂತೆ ಕಾಲುಗಳನ್ನು ತಿರುಗಿಸುತ್ತಾ ಹತ್ತಿರ ಹತ್ತಿರ ಅವು ಸುಳಿದಾಡುತ್ತಿವೆ. ಕಣ್ಣುಗಳು ಬೂದಿಹಾರಿಸಿದ ಕೆಂಡದಂತೆ ನಿಗಿನಿಗಿ ಎನ್ನುತ್ತಿವೆ.

ಅವುಗಳ ಭಾಷೆಗಳನ್ನು ಆಡುತ್ತಾ ಅವು ಹಾರಿದಂತೆ ಹಾರುವ ಕನಸು ಕಾಣುತ್ತಿದ್ದ ಸಂನ್ಯಾಸಿಗೆ ದಿಗಿಲು ಹುಟ್ಟಿದಂತೆ ಕಾಣುತ್ತಿತ್ತು. ಒಮ್ಮೆಲೇ ತನ್ನ ಸ್ಥಿತಿಯನ್ನು ನೆನೆದು ಕೋಪ ಉಕ್ಕೇರಿರಬಹುದು ಅವನಿಗೆ.

'ಈ ಒಂಟಿಮರವನ್ನೂ ಸಹ ಹದ್ದುಗಳು ಆಕ್ರಮಿಸಿವೆ. ಬೋಳುಗುಡ್ಡಕ್ಕೂ ಸಹ ಪಹರೆ ಹಾಕಿದಂತೆ ಹಾರುತ್ತಿವೆ.' – ಎಂದು ಕೋಪದಿಂದ ಕಿರುಚುತ್ತಾ ಒಂದು ಕತ್ತಿ ತೆಗೆದುಕೊಂಡು ಆ ಒಂಟಿ ಮರವನ್ನು ಕತ್ತಿಯಿಂದ ಕಡಿದು ಹಾಕಿದ. ಹದ್ದುಗಳೆಡೆಗೆ ಕತ್ತಿ ಬೀಸಿದ.

ಆ ಮನುಷ್ಯನ ಮೇಲೆ ಯಾಕೋ ಪ್ರೀತಿ ಹುಟ್ಟಿತು ನನಗೆ. ಕೈಯಲ್ಲಿ ಕೈ ಹಿಡಿದುಕೊಂಡು, ಬೋಳುಗುಡ್ಡ ಇಳಿದು ನಿಧಾನವಾಗಿ ಬೆಳಗಿಗೆ ಮುಖ ಮಾಡಿಕೊಂಡು ಹೊರಟೆವು.

(೯೫ರ ಸಂಚಯ ಸಾಹಿತ್ಯಸ್ಪರ್ಧೆ ಬಹುಮಾನಿತ ಕಥೆ)

ಅಹಮಿನ ನಮ್ಮ
ಗಾಜಿನ ಸೀಸೆಗಳಿಂದ ಹೊರಬಂದು
ನಮ್ಮ ವ್ಯಕ್ತಿತ್ವದ ಪಂಜರಗಳಿಂದ
ಅಳಿಲುಗಳಂತೆ ತಪ್ಪಿಸಿಕೊಂಡು
ಕಾಡುಹೊಕ್ಕಾಗ

ಕಂಪಿಸಿಬಿಡಬಹುದು
ಚಳಿಯಿಂದ ಭಯದಿಂದ
ನಮಗೆ ಅರಿವಿಲ್ಲದಂತೆ
ಸಂಭವಿಸುವ ಘಟನೆಗಳು
ತಣ್ಣಗಿನ ವಿರಾಮದ ಬದುಕು
ಮತ್ತು ಭಾವಗಳು ಚಿಗಿಸುವವು
ನಮ್ಮ ದೇಹವನು ಚೈತನ್ಯದಿಂದ

ಚೈತನ್ಯದ ದೃಢ ಹೆಜ್ಜೆಗಳನಿಡುತ
ಹಳೆಯದೆಂಬುದನ್ನು ಕಳಚಿಕೊಳ್ಳುವುದು
ನಕ್ಕುಬಿಡಬಹುದು ನಾವು
ಆಗ ನಕ್ಕು ನಿರಳವಾಗಿಬಿಡಬಹುದು ನಾವು

ಡಿ. ಹೆಚ್. ಲಾರೆನ್ಸ್
ಕನ್ನಡಕ್ಕೆ : ಎಲ್ಸಿ ನಾಗರಾಜು
(ಕೃಪೆ : ಗಾಳಿಯ ದೈವಿಕ ಹಾದಿಗಳು)

ವಾಸ್ತು ಕಲೆ – ನಿನ್ನೆ ಇಂದು ಮತ್ತು ನಾಳೆ

○ ○

● ಕೆ. ಆರ್. ಗಣೇಶ್

ನಿನ್ನೆಯ ನೆನಪು ಕಾಲದ ನಿರಂತರ ಗತಿಯಲ್ಲಿ, ಸದಾ ಸರ್ವದಾ ಮಧುರ ಸ್ಮೃತಿಗಳನ್ನೊಳಗೊಂಡಿದ್ದು, ಚರಿತ್ರೆಯ ಪುನರಾವೃತ್ತಿ ಕೆಲವು ಅಂಶಗಳಲ್ಲಾಗಲೀ ಅಥವಾ ಪೂರ್ಣವಾಗಿ ಆಗಲಿ, ಸಾಂಕೇತಿಕವಾಗಿಯೇ ಆಗಿರಲೀ ಸತತ ನಡೆದೇ ಇರುತ್ತದೆ. ಈ ಪ್ರವೃತ್ತಿ ಪ್ರಮುಖವಾಗಿ ಎರಡು ಎಳೆಗಳಿಂದ ಕೂಡಿದ್ದು ಒಂದು 'ಭೂತದ' ಹಿರಿಮೆಯಾದರೆ ಇನ್ನೊಂದು ಅಸಾಂದರ್ಭಿಕ ಪುನರಾವರ್ತನೆ. ಸಾಮಾಜಿಕ ಆರ್ಥಿಕ ಮತ್ತು ಅಧಿಕಾರ ಸತ್ತೆಯ ಪರಿಣಾಮ ಪ್ರಭಾವಗಳು ಎಲ್ಲ ಕಾಲದ ವಾಸ್ತುಕಲೆಯಲ್ಲಿ ಕಂಡುಬರುತ್ತದೆ.

ರೆನೈಸಾನ್ಸ್ ನಂತರದ ಕಾಲಾವಧಿಯು ತಂದ ಕ್ಷಿಪ್ರಕ್ರಾಂತಿ ಉಜ್ವಲ ಔದ್ಯೋಗೀಕರಣ ವಾಸ್ತುಕಲೆಯಲ್ಲಿ ನವ್ಯ–ಮಾಡರ್ನ್ ಶೈಲಿಯ ಉಗಮಕ್ಕೆ ಕಾರಣಗಳಾದವು, ಇತರ ಕಲಾ ಪ್ರಕಾರಗಳಲ್ಲಿ ಬೆಳೆದ ಹಾಗೆ ವಾಸ್ತು ಕಲೆಯಲ್ಲೂ 'ನವ್ಯ' ಶೈಲಿಯು ರೂಪುಗೊಂಡು ತನ್ನದೇ ಆದ ಸ್ವಂತಿಕೆ ಹಾಗೂ ನಿರ್ದಿಷ್ಟ ಸ್ಥಾನಮಾನ ಪಡೆದು ವಿಶ್ವದಾದ್ಯಂತ ವಾಸ್ತುಕಲೆಗೆ ಔದ್ಯೋಗಿಕ ಮಾನ್ಯತೆ ವೃತ್ತಿಪರ ಸ್ವಂತಿಕೆ (Professional Identity) ಯನ್ನು ತಂದುಕೊಟ್ಟಿದೆ. ಈ ಸ್ವಂತಿಕೆಯು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಬುನಾದಿಯ ಮೇಲೆ ನಿಂತಿದ್ದು, ಶುದ್ಧ ವೈಚಾರಿಕತೆಯಿಂದ ಕೂಡಿದೆ, ಇದರ ಫಲವಾಗಿ ಪ್ರಾಯಶಃ ಸಾಂದರ್ಭಿಕ ಸಾಂಗತ್ಯಗಳನ್ನು Relativity ಕಡೆಗಣಿಸಿ ಕೆಲವು ವೇಳೆ ಪ್ರಾದೇಶಿಕ ಸಂಸ್ಕೃತಿ ಮತ್ತು ಜನಗಳನ್ನ ಮುಟ್ಟುವಲ್ಲಿ ವಿಫಲವಾಗಿದೆ. ನವ್ಯವನ್ನು ನಿನ್ನೆಯದೆಂದು ಕರೆಯಬಹುದಾದರೆ ಅದಕ್ಕಿಂತಲೂ ಹಿಂದಿನ ರೆನೈಸಾನ್ಸ್ ಕ್ಲಾಸಿಕಲ್ ಇತ್ಯಾದಿ ಶೈಲಿಗಳನ್ನು ಮೊನ್ನೆಯದೆಂದು ಹೆಸರಿಸಬಹುದು. "ನಿನ್ನೆಯದನ್ನು ಉಪಯೋಗಿಸಲಸಾಧ್ಯವಾದರೆ ಮೊನ್ನೆಯದು ಮತ್ತು ಮಧುರತಮ ಹಾಗೂ ಪುನರ್ಬಳಕೆ ಸುಲಭ ಸಾಧ್ಯ" ಎನ್ನುವ ಕ್ಲೀಷೆ ಇಂದಿನ ಪ್ರವೃತ್ತಿಗಳಲ್ಲೊಂದಾಗಿದೆ.

"ಯಾವುದು ಅನಾವಶ್ಯಕವೋ ಅದು ಖಂಡಿತಾ ಬೇಡವೇ ಬೇಡ" ಎಂಬವಾದ, Space (ಸ್ಥಳಾವಕಾಶ)ನ್ನು ಎರಡರಿಂದ ಮೂರನೇ ಆಯಾಮದವರೆಗೆ (ಥರ್ಡ್‌ಡೈಮೆನ್‌ಶನ್) ವರೆಗೆ ಕೊಂಡೊಯ್ಯುವ ಪ್ರಕ್ರಿಯೆ ಮತ್ತು ಗೋಡೆ ಛಾವಣಿ ಮತ್ತಿತರ ಸಾಮಗ್ರಿ, (Material) ಗಳ ಗುಣಮಟ್ಟಕ್ಕೆ ಅನುಸಾರವಾಗಿ ಗಿಲಾವು ಸಾರಣೆ (ಪ್ಲಾಸ್ಟರಿಂಗ್) ಇತ್ಯಾದಿ ಅಂದಕಾರಕ ವಿಶೇಷಣಗಳ ನಿರಾಕರಣೆ ಇವೆಲ್ಲವೂ

ನವ್ಯಶೈಲಿಯ ಪ್ರಮುಖ ಸೂತ್ರಗಳೆನ್ನಬಹುದು. ಈ ಶೈಲಿಯಲ್ಲಿನ ಅತೀವ ವೈಚಾರಿಕತೆ ಮತ್ತು ಸಾಂದರ್ಭಿಕ ನಿರ್ಲಕ್ಷ್ಯಗಳು ಬಹುಶಃ ಏಕತಾನತೆಗೆ (Monotoney) ಎಡೆಮಾಡಿಕೊಟ್ಟದ್ದು. ದೃಶ್ಯ ಪರಿಣಾಮಗಳನ್ನು ಮೆತುಗೊಳಿಸುವ ಸಲುವಾಗಿ, 'ನವ್ಯೋತ್ತರ' ಶೈಲಿಯ ಉಗಮವಾಯಿತು ಎನ್ನಬಹುದು. ಕಲೆಯ ಬೇರೆ ಬೇರೆ ವಿಭಾಗಗಳ Abstract (ಅಮೂರ್ತ) ಅಭಿವ್ಯಕ್ತಿಗೆ ನವ್ಯೋತ್ತರದ ವಾಸ್ತುಕಲೆಯಲ್ಲಿ ಹೇರಳವಾದ ಅವಕಾಶಗಳು ದೊರಕಿವೆ. ಚರಿತ್ರೆಯ ಭಾಗವಾದ ಗ್ರೀಕ್, ರೋಮನ್, ರೆನೈಸಾನ್ಸ್, ಗೋಥಿಕ್, ಕೊಲೋನಿಯಲ್ ಇತ್ಯಾದಿ ಗುರುತಿಸಲ್ಪಟ್ಟ ಶೈಲಿಗಳ ಪರಂಪರೆಯ ಪ್ರಭಾವ ಅನೇಕ ಕಡೆಗಳಲ್ಲಿ ಅಂಶಿಕವಾಗಿ ಅಥವಾ ವಿವಿಧ ಪ್ರಮಾಣಗಳಲ್ಲಿ, ದಟ್ಟವಾಗಿ ಉಳಿದಿರುವುದು ಕಂಡುಬರುತ್ತದೆ. ಉದಾಹರಣೆಗೆ ಪೆಡಿಮೆಂಟ್‌ಗಳು, ಕೆತ್ತನೆಯ ಚಿತ್ತಾರದ ಕಂಭಗಳು, ಆಧಾರ–ಬೇಸ್‌ಗಳು ಬ್ರಾಕೆಟ್ಟುಗಳು ಮತ್ತಿತರ ಅಸಂಖ್ಯಾತ ವಿವರಗಳು ಭಾಗಗಳು ಮತ್ತೆ ಮತ್ತೆ ಮರುಹುಟ್ಟು ಪಡೆದಿದೆ. ಈ ನವ್ಯೋತ್ತರ ಶೈಲಿಯ ಇತರೆ ಮುಖ್ಯ ಅಂಶಗಳೆಂದರೆ Focal Point ಬಿಂದುಗಳು, Axis – ದೃಶ್ಯರೇಖೆ, ಸಸ್ಯಾಚ್ಛಾದಿತ ಲ್ಯಾಂಡ್‌ಸ್ಕೇಪ್ ಕೋರ್ಟ್‌ಗಳು ಜಲ ಕುಂಡಗಳು ಮುಂತಾದವು

ಪರಂಪರೆಯ ಪುನರಾವೃತ್ತಿಯಾಗುವ, ತಂತಮ್ಮ ಮೂಲ ನೆಲೆ ಹಿನ್ನೆಲೆಗಳಿಗೆ ಮರಳುವ ಆತುರದಲ್ಲಿ ಇಂದಿನ ವಿಜ್ಞಾನ ಮತ್ತು ತಾಂತ್ರಿಕತೆಯನ್ನು ಮರೆಯದೆ ಅಳವಡಿಸಿಕೊಳ್ಳುವ ಪರಿಭಾಷೆ ಇವತ್ತಿನ ಅತಿಮುಖ್ಯ ಅವಶ್ಯಕತೆ. ನಾವು ನಾಳೆಗೆ ಸ್ಫೂರ್ತಿ ಪಡೆಯುವ ಯತ್ನದ ಹಾದಿಯಲ್ಲಿ 'ನಿನ್ನೆ'ಯ ಹಿರಿಮೆ ಮುಳ್ಳಾಗದಂತೆ ಎಚ್ಚರವಹಿಸಬೇಕಾಗಿದೆ, ಪ್ರಾಯಶಃ ಇಂದಿನ ಇಬ್ಬಂದಿತನದ ಗೊಂದಲಮಯ ಪರಿಸ್ಥಿತಿಯಲ್ಲಿ ನಿನ್ನೆಯ ಯಾವ್ಯಾವುದು ಉಪಯುಕ್ತ, ಯಾವುದು ನಿರುಪಯುಕ್ತ ಯಾವುದು ಸಂರಕ್ಷಿಸಲರ್ಹ ಯಾವುದು ನಿರಾಕರಿಸಲು ಅರ್ಹ, ಮತ್ತು ನಾಳೆಗೆ ಸ್ಫೂರ್ತಿಯ ಮೂಲಯಾವುದು, ಯಾವುದು ನಿರ್ಲಕ್ಷಿಸಲಾರದವು ಎಂಬ ಆತ್ಯಮೂಲ್ಯ ವಿವೇಚನೆ ಹಿಂದೆಂದಿಗಿಂತಲೂ ಬಲು ತೀಕ್ಷ್ಣವಾಗಿ ಅವಶ್ಯಕವಾಗಿದೆ.

ಕಳೆದ ಕೆಲವು ದಶಕಗಳಿಂದಲೂ, ಹಲವಾರು ವಿದೇಶೀಯ ಮತ್ತು ದೇಶೀಯ ಪ್ರಸಂಗಗಳಲ್ಲಿ ಪೋಷಿಸಲ್ಪಟ್ಟ ನವ್ಯ, ನವ್ಯೋತ್ತರ ಶೈಲಿಗಳಲ್ಲದೆ ಇತ್ತೀಚೆಗೆ ಬಲಗೊಳ್ಳುತ್ತಿರುವ ಪ್ರವೃತ್ತಿಗಳೆಂದರೆ ಸಾಂದರ್ಭಿಕ (ವರ್ನಾಕ್ಯುಲರ್) ಪ್ರಾದೇಶಿಕ ಮತ್ತು ಕಡಿಮೆ ವೆಚ್ಚದ ತಾಂತ್ರಿಕತೆ (Cost effective Technology). ವಸ್ತುಸ್ಥಿತಿಯನ್ನನುಸರಿಸಿ ಹೇಳಬೇಕೆಂದರೆ ವರ್ನಾಕ್ಯುಲರ್ ನಿಜವಾಗಿಯೂ ವಾಸ್ತುಶಿಲ್ಪಗಳಿಲ್ಲದ ವಾಸ್ತುಕಲೆ. ನಮ್ಮ ಗ್ರಾಮೀಣ ಪರಿಸರದಲ್ಲಿನ ಉಪಭೋಗಿ ತನಗೆ ಅಗತ್ಯವಿರುವ ಸ್ಥಳಾವಕಾಶದ ಬಗ್ಗೆ, ತಲೆ ತಲಾಂತರದಿಂದ, ಹರಿದು ಬಂದಿರುವ ಅನುಭವದ ಬಲದಿಂದ ತನಗೆ ಸೂಕ್ತವಾದ ಕಟ್ಟಡ ಸಾಮಗ್ರಿಗಳೊಂದಿಗೆ

ಯೋಜನಾತಯಾರಿ ನಡೆಸಿ, ಅಲ್ಲಲ್ಲಿ ಲಭ್ಯವಿರುವ ಕುಶಲ ಕರ್ಮಿ, ಅನುಭವಿ ಅನನುಭವಿ ಕೆಲಸಗಾರರಿಗನುಗುಣವಾಗಿ ಆಯಾ ಪ್ರದೇಶದ ಪರಿಸರ ಹವಾಮಾನಕ್ಕೆ ಅನುಗುಣವಾಗಿ ಛಾವಣಿ, ಗೋಡೆ, ಕಿಟಕಿ ಇತ್ಯಾದಿಗಳ ಆಕಾರ ಅಳತೆ ಸಂಯೋಜನೆಯ ಬಗ್ಗೆ ಯಾವುದೇ ಹೊರಗಿನ ವಾಸ್ತುಶಿಲ್ಪಿಗಿಂತಾ ಪರಿಣಾಮಕಾರಿಯಾಗಿ ಉಪಭೋಕ್ತನು ತನ್ನ ತೀರ್ಮಾನಗಳನ್ನು ತಾನೇ ತೆಗೆದುಕೊಳ್ಳುವ 'ಚಿಂತನಶೀಲ' ವ್ಯಕ್ತಿಯಾಗಿರುತ್ತಾನೆ. ಅವನಿಗೆ ಸಲ್ಲತಕ್ಕ ಅರ್ಹಗೌರವ ಅವನಿಗೇ ಸಲ್ಲಬೇಕು ಆದರೆ ಸಲ್ಲುತ್ತಿಲ್ಲ ಅಷ್ಟೆ. ವಾಸ್ತುಶಿಲ್ಪಿಗಳಾದರೂ ಸಹ ಹೊಸ ಗ್ರಾಮ ನಿರ್ಮಾಣ ಪುನರ್ವಸತಿ ನಿರ್ಮಾಣದ ಸಂದರ್ಭಗಳಲ್ಲಿ ನಿಜಗ್ರಾಮ ಪರಿಸರವನ್ನು ಅಲ್ಲಲ್ಲಿನ ಸಾಂಧರ್ಬಿಕ ವರ್ನಾಕ್ಯುಲರ್‌ಗೆ ತಕ್ಕಂತೆ ನಿರ್ಮಿಸುವಲ್ಲಿ ಪುನರ್ ನಿರ್ಮಿಸುವಲ್ಲಿ ಹಿಂದೆ ಬೀಳದೆ ಅಲ್ಲೊಂದು ಇಲ್ಲೊಂದು ಎಂದು ಉದಾಹರಿಸುವ ಮಟ್ಟಕ್ಕಿಂತಾ ದಿನೇ ದಿನೇ ಮೇಲೇರುತ್ತಿದ್ದಾರೆನ್ನಬಹುದು.

ಕಡಿಮೆ ವೆಚ್ಚದ ತಾಂತ್ರಿಕತೆಯ ಉಪಯೋಗ ಗ್ರಾಮಗಳ ಮಟ್ಟದಲ್ಲಿ ಆಗಬೇಕಾಗಿದ್ದು, ಅದಕ್ಕೆ ವಿರುದ್ಧವೆಂಬಂತೆ ನಗರ ಪರಿಸರದಲ್ಲೇ ಅದರ ಉಪಯುಕ್ತತೆಯು ಹೆಚ್ಚಾಗಿದೆ. ಇದಕ್ಕೆ ಪ್ರಾಯಶಃ ಕೆಲವು ವಾಸ್ತುಶಿಲ್ಪಿಗಳ ಹಾಗೂ ವಾಸ್ತು ಸಂಸ್ಥೆಗಳ ಸಾಮಾಜಿಕ ಬದ್ಧತೆಯ ಪರಿಕಲ್ಪನೆ ಕಾರಣವಾಗಿರಬಹುದು. ಪ್ರಾದೇಶಿಕ ಸಾಮಗ್ರಿಗಳ ಬಳಕೆ, ವಿಶೇಷ ತಾಂತ್ರಿಕತೆ ಅನ್ವೇಷಣೆಗಳ ಸೂಕ್ತ ಬಳಕೆ ಅನವಶ್ಯಕವಾದದ್ದನ್ನೆಲ್ಲಾ ನಿರಾಕರಿಸುವುದು ಇದೆಲ್ಲಕ್ಕೂ ಮಿಗಿಲಾಗಿ ಉಪಭೋಕ್ತನ ಪಾಲ್ಗೊಳ್ಳುವಿಕೆ ಮನೆಯಲ್ಲಿರಬೇಕಾದ ಜನ ಅದರ ಅಗತ್ಯಗಳ ಬಗ್ಗೆ ಅದನ್ನು ನಿರ್ಮಿಸುವ ಪ್ರತಿಹಂತದಲ್ಲೂ ಜೊತೆಗೂಡಿಕೊಂಡು ಅವರ ಶಾಂತಿ ನೆಮ್ಮದಿಗಳು ಈ ಕಡಿಮೆ ವೆಚ್ಚದ ವಾಸ್ತುಶೈಲಿಯ ಮುಖ್ಯ ಗುರಿಯಾಗಿದೆ. ನಮ್ಮ ಅನೇಕ ಸರಾಸರಿ ಮತ್ತು ಭಾರಿ ಪ್ರಮಾಣದ ಯೋಜನೆಗಳ ಕಟ್ಟಡಗಳ ವಿಫಲತೆಗೆ ಮುಖ್ಯ ಕಾರಣ ಅದನ್ನು ಉಪಯೋಗಿಸುವ ಉಪಭೋಕ್ತ ಅದರಲ್ಲಿ ವಿನ್ಯಾಸದ ಕಲ್ಪನೆಯಲ್ಲಿ ಕಟ್ಟುವಿಕೆಯಲ್ಲಿ ಪಾಲ್ಗೊಳ್ಳದಿರುವುದು. ಅದೇ ಕಾರಣಕ್ಕೆ ನಮ್ಮ ಸರ್ಕಾರಿ ಕಟ್ಟಡಗಳು ಬೃಹತ್ತಾದರೂ ನಿರ್ಜೀವ ನಿರುಪಯುಕ್ತವಾಗಿ ಕಂಡುಬರುತ್ತದೆ. ಇದಕ್ಕೆ ಪ್ರತಿಯಾಗಿ ಸ್ವಂತ ಮನೆಗಳು, ಖಾಸಗಿ ಸಮುಚ್ಚಯಗಳು ಮತ್ತು ಸಣ್ಣ ಪ್ರಮಾಣದ ಸಂಘ ಸಂಸ್ಥೆಗಳ ಪರಿಧಿಯಲ್ಲಿ ಈ ಶೈಲಿಯು ಪ್ರಭಾವಿಯಾಗಿ ಯಶಸ್ವಿಯಾಗುತ್ತಲಿದೆ.

ಮಾನವನ ಸ್ಪರ್ಧಾಭಾವನೆ, ಸಾಧಿಸುವ ಉತ್ಕಟ ಇಚ್ಛೆ. ಪ್ರತಿಷ್ಠಿತನಾಗಬೇಕೆಂಬ ಹಂಬಲ, ಸಮಾಜದಲ್ಲಿ ಬೆರೆತು ಮೆರೆದು ತಾನು ಮತ್ತು ತನ್ನ ಸ್ವಂತಿಕೆಗಳು ಗೌರವಿಸಲ್ಪಡಬೇಕೆಂಬ ಅತ್ಯಾಕಾಂಕ್ಷೆ ಇಂದು ಎಲ್ಲೆ ಮೀರುತ್ತಿರುವ ಪರಿಣಾಮ ದೊಡ್ಡ ಪ್ರಮಾಣದಲ್ಲಿ ಸ್ಟೇಡಿಯಂಗಳು, ಕಮರ್ಶಿಯಲ್ ಕಾಂಪ್ಲೆಕ್ಸ್‌ಗಳು, ಮತ್ತು ಸೆಮಿನಾರ್

ಹಾಲ್‌ಗಳು, ಕ್ಲಬ್‌ಗಳು ಅಣಬೆಗಳಂತೆ ಹರಡುತ್ತಿರಬಹುದೆ? ಬಹುಮಹಡಿ ಸಮುಚ್ಚಯಗಳು ಕಾಂಕ್ರೀಟ್‌ನಲ್ಲಿನ ಎಳೆತ ಬಿಗಿತ Tension ಮತ್ತು Compression ಸೂಕ್ತಗಳನ್ನಾಧರಿಸಿ ರೂಪುರೇಖೆಗೊಂಡ ಆಕಾರಗಳು, ಆಧುನಿಕ ತಂತ್ರಜ್ಞಾನದ ಪರಿಣಿತಿಯ ಸೌಲಭ್ಯಗಳು ಸ್ಟ್ರಕ್ಚರಲ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ತಂತ್ರಜ್ಞಾನ ಕ್ಯಾಪ್ಸೂಲ್ ಲಿಫ್ಟ್‌ಗಳು, ಎಸ್ಕಲೇಟರ್‌ಗಳು ಕೃತಕ ವೆಂಟಿಲೇಷನ್ ತಂತ್ರಗಳು, ಪ್ರಿ ಫ್ಯಾಬ್ರಿಕೇಟೆಡ್ ಕಟ್ಟಡಾಂಶಗಳು ಮುಂತಾದವುಗಳನ್ನು ಇಂದಿನ ನಗರ – ನಗರವಾಸಿ ನಾಗರೀಕರ ವಾಸ್ತುಶಿಲ್ಪಿಗಳ ಮೂಲಾಧಾರವೆಂದೇ ಹೇಳಬಹುದು. ಆದರೆ ಒಂದುಕಡೆ ಈ ಎಲ್ಲ ಸಾರ್ವಜನಿಕ ಕಟ್ಟಡಗಳ ಸ್ಥಳಾವಕಾಶಗಳು ತಾತ್ಕಾಲಿಕ ಚಟುವಟಿಕೆಗಳಿಗೆ ಮೀಸಲಾಗಿವೆ. ತಾತ್ಕಾಲಿಕತೆ ಹಗಲಲ್ಲಿ ಮಾತ್ರ, ಕೆಲವು ವಾರಗಳ ಮಟ್ಟಿಗೆ ಅಥವಾ ವರ್ಷದ ಬರಿಯ ಕೆಲವು ತಿಂಗಳುಗಳ ಮಟ್ಟಿಗೆ ಮಾತ್ರ ಉಪಯುಕ್ತಗೊಳ್ಳುತ್ತಿರುವ ಸಂದರ್ಭಗಳಿವೆ. ಮತ್ತೊಂದು ಕಡೆ ಅತಿ ಸೂಕ್ಷ್ಮವಾದ ವಸತಿಪೂರೈಕೆ ಎಂಬ ತೂಗು ಕತ್ತಿ ಬಲು ಅಪಾಯಕಾರಿಯಾಗಿ ತೂಗುತ್ತಿರುವ ಸಂದರ್ಭದಲ್ಲಿ ಸ್ಥಳಾವಕಾಶಗಳ ಪರಿಪೂರ್ಣ ಬಳಕೆ (Optimum Utelisation) ಈವರೆಗೂ ಒಂದು ಸವಾಲಾಗಿಯೇ ಉಳಿದಿದೆ. ಅದರ ಬಗ್ಗೆ ವಾಸ್ತುಶಿಲ್ಪಿಗಳಷ್ಟೇ ಅಲ್ಲದೇ ಸಾಮಾಜಿಕ ಪ್ರಜ್ಞಾವಂತರು ಚಿಂತನಶೀಲರು ಗಮನಹರಿಸಬೇಕಾಗಿದೆ. ಮಾಲೀಕರು ಸಾಮಗ್ರಿ ಸರಬರಾಜುದಾರರು ವಾಣಿಜ್ಯ ವರ್ತಕರು ಮೇಲ್ವಿಚಾರಕರು ಕೆಲಸಗಾರರು ಪ್ರತಿಯೊಬ್ಬರೂ ತಮ್ಮ ತಮ್ಮ ದೃಷ್ಟಿಯನ್ನು ಸಫಲತೆಯನ್ನು ಮೆರೆಸುವ ಸ್ವಂತಿಕೆ ತೋರಿಸುವಲ್ಲಿ ಮಗ್ನರಾಗಿರುತ್ತಾರೆ, ಇಂತಹ ಪರಿಸ್ಥಿತಿಯಲ್ಲಿ ಇವರೆಲ್ಲರ ಕೈಗೊಂಬೆಯ ಹಾಗಿರುವ ವಾಸ್ತುಶಿಲ್ಪಿ ಅಸಹಾಯಕ ಕೆಲವು ನೆಲೆಗಳಲ್ಲಿ. ಅವನೂ ಸಹ ಇಂದು ಎಲ್ಲವನ್ನೂ ಬಲ್ಲ ಸರ್ವಜ್ಞನೇನಲ್ಲವಲ್ಲ!

ಈಚೆಗೆ ವಾಸ್ತುಶಿಲ್ಪ ವೃತ್ತಿಯಲ್ಲಿ 'ವಾಸ್ತು ಶಾಸ್ತ್ರ' ಅಥವಾ 'ವಾಸ್ತು' ಸಾಂಕ್ರಾಮಿಕದ ಹಾಗೆ ಹರಡುತ್ತಿದೆ, ತಾಂತ್ರಿಕವಾಗಿ ವಿಜ್ಞಾನಿಗಳಲ್ಲದ ಕೆಲವು ಪಂಡಿತರು ದೈಹಿಕ ಖಾಯಿಲೆ ಕಸಾಲೆ, ಮಾನಸಿಕ ಖಿನ್ನತೆ ಅಸ್ವಸ್ಥತೆ ಹಣಕಾಸಿನ ಲಾಭ ನಷ್ಟ ನೆಮ್ಮದಿ ಸುಖ ಸಂತೋಷಗಳಿಗೆ ಅರ್ಥ ಸಂಬಂಧ ಕಲ್ಪಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಪ್ರಕಾಂಡ ಸಂಶೋಧಕ ಪ್ರಚಂಡರು ಭೂಸೂತ್ರ ಅಂತರ್ಭೂಮಿ, ಸೌರಶಕ್ತಿ ಕಾಸ್ಮಿಕ್‌ಬ್ಯಾಲೆನ್ಸ್, ಮಂಡಲ, ಫೆಂಗ್‌ಶುಯ್ ಮುಂತಾದ ವಿಚಾರಗಳಿಂದ ಶ್ರೀಸಾಮಾನ್ಯನ ತಲೆ ಕೆಟ್ಟುಗೊಬ್ಬರವಾಗುವ ಸ್ಥಿತಿ ಮುಟ್ಟಿದೆ. ಈ ಮಧ್ಯೆ ಕೆಲವು ವಿಚಾರವಂತರು ಎಲ್ಲದಕ್ಕೂ ಕಾರಣ ಮನಸ್ಸು ಆದ್ದರಿಂದ ಯಾವುದೇ ನಂಬಿಕೆಗೆ ಮೂಲ ಕಾರಣಗಳು ಅಜ್ಞಾನ ಭಯ ದುರಾಸೆ ಮತ್ತು ಅತಿಯಾದ ಗೌರವ ಎನ್ನುವ ನಿಜದ ಚಿಂತನೆಗಳಿಂದ, ಸಣ್ಣದಾಗಿ ವೈಯಕ್ತಿಕ ನೆಲೆಯಲ್ಲಿ ಮನೆಗಳ

ಮಾಲೀಕರಿಗೆ ಉಪಯೋಗಿಕರಿಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ಇದೊಂದು ಕ್ಷೀಣ ಯತ್ನ ಮಾತ್ರಾ.

ಆಧುನಿಕ ಬ್ರಹ್ಮನೆಂದು ಕರೆಯಲ್ಪಡುವ ವಾಸ್ತುಶಿಲ್ಪಿಗೆ ಅವನ ಧ್ಯೇಯ ಆದರ್ಶ ಕರ್ತವ್ಯಗಳು ಪ್ರಮುಖವಾದರೂ ಕಂಡದ್ದು ಕಾಣದ್ದು ಎಲ್ಲವೂ ಬೇಕೆನ್ನುವ ಕ್ಲೈಂಟ್–ಮಾಲಿಕ–ಗಿರಾಕಿಗಳು–ಹೊಟ್ಟೆಬಾಕ ಪ್ರವೃತ್ತಿಯ (consumeristic users) ವ್ಯಾವಹಾರಿಕವಾಗೇ ಬದುಕುವ ಉಪಯೋಗಿಕರ ನಡುವೆ ವಾಸ್ತುಶಿಲ್ಪಿಯು ಸೃಷ್ಟಿ ಕಲೆ ಶೈಲಿ ನಾವೀನ್ಯಗಳಿಗೆ ತಲೆ ಕೆಡಿಸಿಕೊಳ್ಳಲು ಹೋಗದೆ ಅವರು ಬಯಸಿದ್ದನ್ನ ಪೂರೈಸುವ ಮತ್ತೊಂದು ಹಾದಿಕಲ್ಲಾಗಿದ್ದಾನೆ, ಪಾತಾಳಕ್ಕೆ ಕುಸಿದ ಮೌಲ್ಯವ್ಯವಸ್ಥೆಯ ಪ್ರಪಾತದತ್ತ ಧುಮುಕುತ್ತಿರುವ ಭ್ರಷ್ಟ ಸಮಾಜದ ನೆಯ್ಗೆಯಲ್ಲಿ ಕಲಾವಿದ ವಾಸ್ತುಶಿಲ್ಪಿ ಇತ್ಯಾದಿ ಒಂದು ಅವಿಭಾಜ್ಯ ನೂಲಿನ ಎಳೆಯೇ ಹೊರತು ನವ ನೂತನ ಸೃಷ್ಟಿ ಬ್ರಹ್ಮನೂ ಅಲ್ಲ ತಾಂಡವ ರುದ್ರನಂತೂ ಅಲ್ಲವೇ ಅಲ್ಲ.

ಕಳೆದು ಹೋದ ನಿನ್ನೆ 'ಸ್ಪಷ್ಟ'ವಾಗಿದೆಯಾದರೆ, ಸುಸ್ಪಷ್ಟವಾದದು ಇಂದಿನ ಅನುಭವ. ಆದರೆ ಬರಲಿರುವ ನಾಳೆಯ ಬಗ್ಗೆ ನಿನ್ನೆ ಮತ್ತು ಇಂದಿನ ಅನುಭವದ ಮೂಲಕ ಅರಿಯಬಹುದೆ? ಕಳೆದು ಹೋದದ್ದರ ಬಗ್ಗೆ ಕಿಂಚಿತ್ತೂ ಹಿಡಿತವಿಲ್ಲವಾದರೆ, ನಾಳೆಯನ್ನು ರೂಪಿಸುವ ಬಗ್ಗೆ ಹತೋಟಿ ಮತ್ತು ಸಂಪೂರ್ಣ ಸ್ವಾತಂತ್ರ್ಯಗಳಿವೆ.

ನಿನ್ನೆಯ ಸಾಂಪ್ರದಾಯಿಕ ಮರದ ಪೆನ್ಸಿಲ್ ಇಂಡಿಯನ್ ಇಂಕಿನ ಬಳಕೆ ಇಂದಿಗೆ ಹಳತಾಗಿದೆ. ಬ್ಲೂಪ್ರಿಂಟ್, ರೋಟ್ರಿಂಗ್ ಪೆನ್ನು ಇತ್ಯಾದಿಗಳ ಬಳಕೆ ಇವತ್ತಿನದಾದರೆ ಆಗಲೇ ಕಂಪ್ಯೂಟರ್ ಬಳಸಿ ರೂಪಿಸುತ್ತಿರುವ ನಕಾಶೆಗಳು ಕದ ತಟ್ಟುತ್ತಿವೆ ತಾಂತ್ರಿಕತೆಯು ಬೆಳೆಯ ತೊಡಗಿದ ಹಾಗೆಲ್ಲ ಅವುಗಳು ತಂದುಕೊಡುವ ಸೌಲಭ್ಯ ಕಲ್ಪನೆಗೆ ರೂಪು ನೀಡುವಲ್ಲಿನ ಸುಲಭ ಸರಳತೆ ತೃಪ್ತಿ ಸಂತೋಷಗಳನ್ನ ತಮ್ಮದೇ ರೀತಿಯಲ್ಲಿ ನೀಡುತ್ತಿವೆ.

ಪರಿಣಾಮಗಳತ್ತ ಲಕ್ಷ ಹೊಂದಿದ್ದು (Process) ಪ್ರಕ್ರಿಯೆಯ ಆನಂದ ಅನುಭವಗಳು ಸೃಜಿಸುವ ತೃಪ್ತಿ ನೀಡುವ ತಾಂತ್ರಿಕತೆಯ ಜೊತೆಗೆ ನಾವು ಬಯಸಲಿ ಬಯಸದೇ ಉಳಿಯಲಿ ನಾಳೆ ಬಂದೇ ಬರುತ್ತದೆ ಅದನ್ನ ನಾವು ಸ್ವಾಗತಿಸಬೇಕಾಗಿದೆ.

ಕಲೆ ಮಾತನಾಡಬೇಕು ಕಲಾವಿದನಲ್ಲ!

○○

● ಶಂಕರ ಪಾಟೀಲ

ನಮ್ಮ ನವ್ಯದ ಈ ಸಂದರ್ಭದಲ್ಲಿ 'ಚಿತ್ರ ಮಾತನಾಡಬೇಕು ಕಲಾವಿದನಲ್ಲ' ಎಂದು ಕಲೆಯ ಬಗ್ಗೆ ಬಹುತೇಕ ಕಲಾವಿದರು ಹೇಳುವುದನ್ನು ನಾವು ಕೇಳುತ್ತೇವೆ. ಈ ಮಾತು ಮೇಲು ನೋಟಕ್ಕೆ ಒಪ್ಪಿಕೊಳ್ಳುವಂತೆ ಮಾಡುತ್ತದೆ ಎನ್ನುವದೇನೋ ನಿಜ. ಆದರೆ ವಿಚಾರವನ್ನು ಒಪ್ಪಿಕೊಳ್ಳದೇ ಇರಲು ಕಾರಣಗಳೂ ಇವೆ.

ಈ ಮಾತುಗಳು ನಮಗೆ ಮೊದಲು ಕೇಳಿಬಂದದ್ದು ಪಾಶ್ಚಾತ್ಯರಲ್ಲಿ. ಹೌದು, ಇದು ಸತ್ಯ, ಎಂದು ಬಹುಜನರು ನಮ್ಮವರು ಈ ವಿಚಾರವನ್ನು ಒಪ್ಪಿಕೊಂಡರು. ಚಿತ್ರಕಲೆಯ ಸಂದರ್ಭದಲ್ಲಿ ಅನುಕರಣೆ ನಮ್ಮ ಭಾರತೀಯರ ಮೂಲ ಗುಣ. ಹಾಗೇ ವಿಚಾರಗಳಲ್ಲೂ ಎಂದುಕೊಳ್ಳಬಹುದು. ಚಿತ್ರ ಮಾತನಾಡಬೇಕು ಎಂದರೆ ಚಿತ್ರ ವೀಕ್ಷಕನನ್ನು ಮಾತನಾಡಿಸುವ ಗುಣ ಹೊಂದಿರಬೇಕು ಎಂಬ ಅರ್ಥದಲ್ಲಿ ಚಿತ್ರಕ್ಕಿರಬೇಕಾದ ಹಿರಿಮೆಯನ್ನು ಸಮರ್ಥಿಸುತ್ತದೆ. ಈ ವಿಚಾರ ಕೇವಲ ನವ್ಯದ ಸಂದರ್ಭದಲ್ಲಿ ಅಷ್ಟೇ ಏಕೆ ಸುಮಾರು ಸಾವಿರ ವರ್ಷಗಳ ಹಿಂದೇ ನಮ್ಮ ಪೂರ್ವಿಕರು ಕಲಾಚಿಂತನೆಯ ಸಂದರ್ಭಗಳಲ್ಲಿ ಈ ಮಾತನ್ನು ಹೇಳಿದ್ದಾರೆ.

ಆದರೆ ಪಾಶ್ಚಾತ್ಯರಲ್ಲಿ ನವ್ಯದ ಸಂದರ್ಭದಲ್ಲಿ ಸಂವಹನದ ಸಮಸ್ಯೆಗಳು ಉದ್ಭವಿಸಿದಾಗ ಅವರು ಈ ದಿಶೆಯಲ್ಲಿ ಚಿಂತನೆ ಮಾಡಿದರು ಎನ್ನಬಹುದು. ಸಾಮಾನ್ಯವಾಗಿ ತಂದೆ ಮಗನನ್ನು ಪರಿಚಯಿಸುತ್ತಾನೆ. ಮಗನು ತಂದೆಯನ್ನಲ್ಲ. ಅಂದರೆ ಪರಿಚಿತದಿಂದ ಅಪರಿಚಿತದ ಪರಿಚಯ ಮಾಡಿಕೊಳ್ಳುವುದು ಸುಲಭ. ದೃಶ್ಯ ಮಾಧ್ಯಮದ ಚಿತ್ರ ತನ್ನನ್ನು ತಾನೇ ವಿವರಿಸಿಕೊಳ್ಳಬೇಕು. ಕಲಾವಿದ ಮಾತಿನಲ್ಲಿ ತನ್ನ ಚಿತ್ರವನ್ನು ವರ್ಣಿಸುವಂತೆ ಆಗಬಾರದು. ಇದು ಕೇವಲ ಚಿತ್ರದ ಗುಣವನ್ನು ತೋರಲು ಹೇಳಿದ ಮಾತಾಗಿರದೆ ಇದರ ಹಿಂದೆ ಅನೇಕ ವಿಷಯಗಳು ಅಡಕವಾಗಿವೆ.

ಕಲಾವಿದನಿಗೆ ತನ್ನ ಅನುಭವಗಳನ್ನು ಮಾತಿನಲ್ಲಿ ಹಂಚಿಕೊಂಡು ಸಮಾಧಾನ ಸಿಗುವದಾಗಿದ್ದರೆ ಅವನು ಚಿತ್ರ ರಚಿಸುವ ಗೋಜಿಗೇ ಹೋಗುತ್ತಿರಲಿಲ್ಲ. ಕಲಾವಿದ ಚಿತ್ರ ರಚಿಸಲು ಮುಂದಾದಂತೆ ಕವಿ ಕವನ ರಚಿಸುವನು. ಕಥೆಗಾರ ಕಥೆ, ಕಾದಂಬರಿಕಾರ ಕಾದಂಬರಿ ಬರೆಯುವನು. ಹಾಗೇ ಸಂಗೀತಗಾರ ಒಂದು ರಾಗವನ್ನೋ, ನೃತ್ಯಗಾರ್ತಿ ಒಂದು ರೂಪಕವನ್ನೋ ಪ್ರಸ್ತುತ ಪಡಿಸುತ್ತಾಳೆ. ಮಾತು

ಮುಂದುವರೆದು ಸಾಹಿತ್ಯವಾಗುವದಾದರೆ, ಚಿತ್ರರಚನೆ ಆಗುವುದು ಮಾತು ಮೌನವಾದಾಗ. ಆದ್ದರಿಂದ ಮೌನ ಚಿತ್ರದಲ್ಲಿ ರೂಪ ಪಡೆಯುತ್ತದೆ ಎನ್ನಬಹುದು. ಮಾತು ಮೌನವಾಗಿ, ಮೌನ ಚಿತ್ರವಾಗಿ, ಚಿತ್ರ ಮಾತಾಗಿ; ಹೀಗೆ ಮೋಡ ಮಳೆಯಾಗಿ, ಮಳೆ ನೀರಾಗಿ ಮತ್ತೆ ನೀರು ಮೋಡವಾಗುವ ಒಂದು ಕ್ರಿಯಾತ್ಮಕ ಸೃಜನಾತ್ಮಕ ಸೃಷ್ಟಿಯ ವರ್ತುಳ. ಪಾಶ್ಚಾತ್ಯರ ಸಂದರ್ಭದಲ್ಲಿ ಈ ವರ್ತುಳ ಪೂರ್ಣವಾಗಲು ಶ್ರಮಿಸಿರುವುದನ್ನು ನಾವು ಕಾಣುತ್ತೇವೆ. ಆದರೆ ನಮ್ಮದ ಸಂದರ್ಭದಲ್ಲಿ ನಮ್ಮ ಈ ದೇಶದಲ್ಲಿ ಈ ವರ್ತುಳ ಪೂರ್ಣವಾಗಲು ನಾವು ಅಷ್ಟಾಗಿ ಪ್ರಯತ್ನಿಸಿಲ್ಲ ಎನ್ನುವುದನ್ನು ಗಮನಿಸಬಹುದಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಸಾಮಾನ್ಯವಾಗಿ ಪ್ರತಿ ಊರಲ್ಲೂ ಆರ್ಟ ಗ್ಯಾಲರಿಗಳು ಮ್ಯುಜಿಯಂಗಳು ಇರುವುದನ್ನು ನಾವು ನೋಡುತ್ತೇವೆ. ನಾವು ಸಿನೆಮಾ ನಾಟಕಗಳಿಗೆ, ಸಂಗೀತ ಕಚೇರಿಗಳಿಗೆ, ಹೋಟೇಲಗಳಿಗೆ ಹೋಗುವಂತೆ ಲೈಬ್ರರಿ ರೀಡಿಂಗ್ ರೂಮ್‌ಗಳಿಗೆ ಹೋಗುವಂತೆ ಅಲ್ಲಿ ಚಿತ್ರಗಳನ್ನು ನೋಡಲು ಆರ್ಟ ಗ್ಯಾಲರಿಗಳಿಗೆ ಮ್ಯೂಜಿಯಂಗಳಿಗೆ ಜನ ಹೋಗುವದನ್ನು ನೋಡಬಹುದು. ಅಲ್ಲಿನ ಪ್ರತಿಯೊಂದು ಶಾಲೆಗಳಲ್ಲಿ ಕಲೆಯನ್ನು ಕಡ್ಡಾಯವಾಗಿ ಕಲಿಸಲಾಗುತ್ತದೆ. ಅಲ್ಲಿನ ಶಾಲಾ ಮಕ್ಕಳು ತಮ್ಮ ಹನ್ನೆರಡು ವರ್ಷಗಳ ಕಲಿಕೆಯ ಅವಧಿಯಲ್ಲಿ ವಿಜ್ಞಾನ, ಗಣಿತ, ಇತಿಹಾಸ, ಭೂಗೋಲ, ಸಮಾಜಶಾಸ್ತ್ರ ಹಾಗೂ ಭಾಷಾಜ್ಞಾನದ ಜೊತೆಗೆ ಕಲಾ ವಿಷಯವಾಗಿಯೂ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳುತ್ತಾರೆ. ನಮ್ಮಲ್ಲಿಯ ಕಲಾಶಿಕ್ಷಣ ಕಾಲೇಜಿನಲ್ಲಿ ಪಡೆಯುವ ಕಲಾಜ್ಞಾನಕ್ಕಿಂತ ಹೆಚ್ಚಾಗಿಯೇ ಅಲ್ಲಿನ ಮಕ್ಕಳ ಕಲಾಜ್ಞಾನ ಇರುತ್ತದೆ ಎಂದು ಹೇಳಿದರೆ ಅತಿಶಯೋಕ್ತಿ ಎಂದೇನೂ ತಿಳಿದುಕೊಳ್ಳುವ ಹಾಗೂ ಹುಬ್ಬು ಮೇಲೇರಿಸುವ ಅವಶ್ಯಕತೆ ಇಲ್ಲ. ಪಾಶ್ಚಾತ್ಯರ ಹನ್ನೆರಡು ವರ್ಷಗಳ ಸಾಮಾನ್ಯ ಶಿಕ್ಷಣದ ಪಠ್ಯಕ್ರಮದಲ್ಲಿಯ ಕಲಾ ವಿಷಯದ ಪುಸ್ತಕಗಳನ್ನು ನೋಡಿ ತಿಳಿದವರಿಗೆ ಈ ವಿಷಯ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ.

ಕೇವಲ ಭಾಷಾಜ್ಞಾನ ಉಳ್ಳವನು ಯಾವ ರೀತಿ ಸಾಹಿತಿ ಆಗಲಾರನೋ ಅದೇ ರೀತಿ ಕೇವಲ ಕಲಾಜ್ಞಾನ ಉಳ್ಳವನು ಕಲಾವಿದನಾಗುತ್ತಾನೆ ಎಂದೇನೂ ಅಲ್ಲ. ಆದರೆ ಒಂದು ಸಾಹಿತ್ಯ ಕೃತಿಯನ್ನು ಓದಿ ಅದನ್ನು ಮೆಚ್ಚಿಕೊಳ್ಳುವ ಅದರಲ್ಲಿಯ ಗುಣಗಳನ್ನು ತಿಳಿದುಕೊಳ್ಳುವ ಸಹಜ ಪ್ರವೃತ್ತಿ ಅಂಥವರಲ್ಲಿ ಬೆಳೆಯುತ್ತದೆ ಎಂದು ಹೇಳಬಹುದು. ಅದೇ ರೀತಿ ಒಂದಷ್ಟು ವಿವರವಾದ ಕಲಾ ಜ್ಞಾನ ಉಳ್ಳವನಿಗೆ ಒಂದು ಚಿತ್ರವನ್ನು ನೋಡಿ ಆನಂದಿಸುವ ಅನುಭವಿಸುವ ಅರ್ಥೈಸುವ ಮಜಲನ್ನು ಹೊಂದಲು ಸಹಕಾರಿ ಆಗುತ್ತದೆ ಎಂದು ಮಾತ್ರ ಹೇಳಬಹುದು. ಇಂಥ ಸಾಮಾಜಿಕ ಪರಿಸರ ಹಾಗೂ ಶೈಕ್ಷಣಿಕ ಹಿನ್ನೆಲೆ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಯೋಜನ ಪಡೆದುಕೊಳ್ಳುತ್ತದೆ.

ನಮ್ಮ ಪರಿಸರವನ್ನು ಒಂದಷ್ಟು ಹೊರಳಿ ನೋಡಿದಾಗ ನಮ್ಮ ಪ್ರೈಮರಿ ಹೈಯರ್ ಪ್ರೈಮರಿ ಶಾಲೆಗಳು, ಹೈಸ್ಕೂಲುಗಳು ಹಾಗೂ ಪದವಿ ಪೂರ್ವ ಕಾಲೇಜು ಸೇರಿ ನಮ್ಮ ಹನ್ನೆರಡು ವರ್ಷಗಳ ಶಿಕ್ಷಣದಲ್ಲಿ ಕಲೆಯ ಸ್ಥಾನ ಏನಿದೆ ಎಂದು ನೋಡಿದರೆ ಆಶ್ಚರ್ಯವೆನಿಸುತ್ತದೆ. ಉಳಿದ ವಿಷಯಗಳ ಜ್ಞಾನದ ಜೊತೆಗೆ ಕಲಾಜ್ಞಾನದ ಮಟ್ಟವನ್ನು ಹೋಲಿಸಿ ನೋಡಿದಾಗ ಪರಿಸ್ಥಿತಿಯ ಪೂರ್ಣ ಅರ್ಥ ಆಗಬಹುದು. ಕಲಾವಿದರಾಗಲಿ ಕಲಾಶಿಕ್ಷಣ ತಜ್ಞರಾಗಲಿ ಈ ದಿಶೆಯಲ್ಲಿ ಹೆಚ್ಚಿನ ಪ್ರಯತ್ನ ಮಾಡದೇ ಇರುವುದು ಶೋಚನೀಯ. ಈ ವರ್ತುಳದ ಅಪೂರ್ಣತೆಯ ಪ್ರಾರಂಭ ಇಲ್ಲಿಂದಲೇ ಎನ್ನಬಹುದು.

ಇನ್ನು ಕಲಾ ಶಿಕ್ಷಣ ಮುಗಿಸಿದ ನಂತರ ಕಸಬು ಕಲಾವಿದರು. ಉದ್ಯಮಗಳಲ್ಲಿರುವ ಕಲಾವಿದರು ಸಾಂಸ್ಕೃತಿಕ ಕಲಾ ಸಂಸ್ಥೆಗಳು, ಕಲಾ ಶಿಕ್ಷಣ ಸಂಸ್ಥೆಗಳು ಸೇರಿ ಒಟ್ಟಾಗಿ ಜನರಲ್ಲಿ ಕಲೆಯನ್ನು ಪರಿಚಯಿಸಲು ಕಲಾಭಿರುಚಿಯನ್ನು ಬೆಳೆಸಲು ಸೃಜನಾತ್ಮಕವಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡದ್ದು ಅಷ್ಟಾಗಿ ಕಂಡುಬರುವುದಿಲ್ಲ. ಸಮಾಜದ ಬೇರೆ ಬೇರೆ ಉದ್ಯಮಗಳಲ್ಲಿರುವ ಕಲಾಸಕ್ತರಿಗಾಗಿ ಕಲೆಯ ವಿಷಯವಾಗಿ ತಿಳಿದುಕೊಳ್ಳಲು ಹಾಗೂ ಕಲೆಯನ್ನು ರೂಢಿಸಿಕೊಂಡು ಬೆಳೆಸಿಕೊಳ್ಳಲು ಅನುಕೂಲವಾಗುವಂಥ ಪರಿಸರವನ್ನು ಬೆಳೆಸುವಲ್ಲಿ ಮುಂದಾಗಿರುವ ಹೇಳಿಕೊಳ್ಳುವಂಥ ಸನ್ನಿವೇಶಗಳೂ ಇಲ್ಲದಿರುವುದು ವಿಷಾದಕರ. ಈ ಎಲ್ಲ ಕೊರತೆಗಳನ್ನು ಸರ್ಕಾರವಾಗಲಿ ಶಿಕ್ಷಣ ತಜ್ಞರಾಗಲಿ ಗಮನಿಸಿದಂತೆ ಕಾಣುವುದಿಲ್ಲ.

ಊರೂರಿಗೂ ಇರುವ ಆರ್ಟ ಗ್ಯಾಲರಿಗಳು, ಕಲಾ ಸಂಸ್ಥೆಗಳು, ಸಾಂಸ್ಕೃತಿಕ ಸಂಘಗಳು ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚು ಚುರುಕಾಗಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಅಲ್ಲಿ ಅವರು ಕಲೆಯನ್ನು ಜನರಿಗೆ ಪರಿಚಯಿಸುವ ಅನೇಕ ಬಗೆಯ ಕಾರ್ಯಕ್ರಮಗಳನ್ನು ಹೊಂದಿರುವುದನ್ನು ನಾವು ನೋಡಬಹುದಾಗಿದೆ. ಉದಾಹರಣೆಗೆ – ಅಲ್ಲಿಯ ಆರ್ಟ ಗ್ಯಾಲರಿಗಳು ತಮ್ಮ ಸಂಗ್ರಹದಲ್ಲಿದ್ದ ಕಲಾಕೃತಿಗಳ ಹಾಗೂ ಅವುಗಳ ರಚನಾಕಾರರಾದ ಕಲಾವಿದರನ್ನು ಪರಿಚಯಿಸುವ, ತನ್ಮೂಲಕ ಸ್ಥೂಲವಾಗಿ ಕಲೆಯನ್ನು ಕಲೆಯ ಪ್ರಕಾರಗಳನ್ನು, ತಂತ್ರ, ಮಾಧ್ಯಮ ಹಾಗೂ ಶೈಲಿಗಳನ್ನು ಪರಿಚಯಿಸುವ ಕೆಲಸಗಳನ್ನು ವ್ಯವಸ್ಥಿತ ರೀತಿಯಲ್ಲಿ ಮಾಡುತ್ತವೆ. ಇಂಥ ಪರಿಚಯವನ್ನು ನೀಡಬಲ್ಲ ಪುಸ್ತಕಗಳನ್ನು ಪ್ರಕಟಿಸುತ್ತಾರೆ. ಕಲಾ ಸಾಮಗ್ರಿಗಳ ತಯಾರಕರು ಹಾಗೂ ವಿತರಕರು, ಫ್ರೇಮ ಅಂಗಡಿಯವರೂ ಚಿತ್ರ ಕಲೆಯ ಪುಸ್ತಕಗಳನ್ನು ಪ್ರಕಟಿಸುವದನ್ನು ನಾವು ನೋಡಬಹುದಾಗಿದೆ.

ಇಂಥ ಒಂದು ಪರಿಸರ ನಿರ್ಮಾಣವಾದಾಗ ಅಲ್ಲಿಯ ಜನಸಾಮಾನ್ಯರಲ್ಲಿ ಬೇರೆ ಬೇರೆ ಕಲೆಯನ್ನು ವಿಂಗಡಿಸಿ ನೋಡುವ, ಮಾಧ್ಯಮ ಹಾಗೂ ಶೈಲಿಯನ್ನು

ಗುರುತಿಸುವ, ಅಷ್ಟೇ ಅಲ್ಲದೆ ಅಲ್ಲಿ ಬಳಸಿದ ಬಣ್ಣ ಹಾಗೂ ರೇಖೆಗಳ ಹಾಗೂ ತನ್ಮೂಲಕ ಮಾಡಿಬರುವ ಸಂಯೋಜನೆ ಹಾಗೂ ವಿಷಯಗಳ ಬಗ್ಗೆಯೂ ಚರ್ಚಿಸುವ ಸಹಜ ಪ್ರವೃತ್ತಿ ಬೆಳೆಯುತ್ತದೆ. ಇಂಥ ಕಲಾನುಭವ ಹೊಂದಿರುವ ಸಮಾಜದಲ್ಲಿ ಕಲಾವಿದನಿಗಿಂತ ಜನರೇ ಕಲೆಯ ಬಗ್ಗೆ ವಿಸ್ತಾರವಾಗಿ ಮಾತನಾಡಬಲ್ಲವರಾಗಿರುತ್ತಾರೆ. ಚಿತ್ರ ಮಾತನಾಡಬೇಕು ಕಲಾವಿದನಲ್ಲ ಎಂಬ ಮಾತು ಇಂಥಲ್ಲಿ ಸಮಂಜಸ ಎನಿಸಬಹುದು.

ಕಲಾಸಾಹಿತ್ಯವೇ ಬೆಳೆಯದ ನಮ್ಮ ದೇಶದಲ್ಲಿ ಕಲೆಯನ್ನು ಜನರಿಗೆ ಪರಿಚಯಿಸಲು ಸಾಧ್ಯವಾಗದೇ ಇರುವ ನಮ್ಮ ಸನ್ನಿವೇಶದಲ್ಲಿ ಅದಕ್ಕೂ ಹೆಚ್ಚಾಗಿ ನಮ್ಮ ರಾಜ್ಯದ ಕನ್ನಡದ ಪರಿಸರದಲ್ಲಿ ನಾವು ನಿಂತು ನೋಡಿದಾಗ ನಿಜಸ್ಥಿತಿಯ ಅರಿವು ಆಗುವದು. ನೇರ ಸಂವಹನದ ಸಾಧ್ಯತೆ ಇರುವ ಸಾಹಿತ್ಯವೇ ಜನರನ್ನು ಸಾಕಷ್ಟು ರೀತಿಯಲ್ಲಿ ತಲುಪಿಲ್ಲ ಎನ್ನುವ ಕೊರಗನ್ನು ನಾವು ಸಾಹಿತಿಗಳಲ್ಲಿ ಕೇಳುವಾಗ ದೃಶ್ಯ ಮಾಧ್ಯಮದ ಚಿತ್ರ ಹಾಗೂ ಕಲೆಯ ಬಗ್ಗೆ ನಾವು ಕಾಣುವ ಸಂದಿಗ್ಧತೆ ಎಂಥದ್ದು ಎಂದು ಊಹಿಸಬಹುದಾಗಿದೆ. ಜನರು ಕಲೆಯ ಬಗ್ಗೆ ಮಾತನಾಡುವಂತಾಗುವವರೆಗೆ ನಮ್ಮ ಕಲೆಯ ಮಾತನಾಡುವ ಮಟ್ಟದ್ದಾಗುವವರೆಗೆ ನಮ್ಮ ಕಲಾವಿದರು ತಮ್ಮ ಕಲೆಯ ಬಗ್ಗೆ ಮಾತನಾಡಬೇಕು. ಕಲಾ ವಿಮರ್ಶಕರೂ ಮಾತನಾಡಬೇಕು.

ಕಲೆಯನ್ನು ಕಲಾವಿದರನ್ನು ಪರಿಚಯಿಸುವ, ಮೂಲ ಚಿತ್ರಗಳು ಯಥಾವತ್ತಾಗಿ ಕಾಣಲು ಸಿಗುವಂತೆ ಬಣ್ಣಗಳಲ್ಲಿ ಅಚ್ಚಾದ ಚಿತ್ರಗಳೊಂದಿಗೆ ಪುಸ್ತಕಗಳು ಪ್ರಕಾಶನ ಕಾಣಬೇಕು. ಈ ರೀತಿಯ ಕಲಾ ಸಾಹಿತ್ಯ ಮನೆ ಮನೆಗೆ ತಲುಪಿದಾಗ ರಸಿಕ ವೀಕ್ಷಕ ಕಲೆಯೊಂದಿಗೆ ಮಾತನಾಡುವ ಸ್ಥಿತಿ ತಲುಪಿದಾಗ ಕಲೆ ಮಾತನಾಡುತ್ತದೆ. ಕಲಾವಿದ ಮಾತನಾಡಬೇಕಾದದ್ದನ್ನೆಲ್ಲಾ ಕಲಾ ಸಾಹಿತ್ಯ ಒಳಗೊಂಡಾಗ ಕಲಾವಿದ ನೇರವಾಗಿ ಮಾತನಾಡುವದು ಬೇಕಾಗಲಿಕ್ಕಿಲ್ಲ ಅಷ್ಟೆ. ಕಲಾವಿದನಾಗಲಿ ಕಲಾ ವಿಮರ್ಶಕರಾಗಲಿ ಕಲೆಯ ಬಗ್ಗೆ ಚಿತ್ರಿತವಾಗಿ ವಿಶ್ಲೇಷಿಸಿ ಮಾತನಾಡದೇ ಉಳಿದಿರುವುದರಿಂದಲೇ ಸಂವಹನದ ಸಮಸ್ಯೆಗಳು ಉದ್ಭವಿಸಿ ಕಲೆ ಜನರನ್ನು ತಲುಪದೇ ಉಳಿದಿದೆ ಎಂದು ಹೇಳಬಹುದು.

ಪಿ. ಲಂಕೇಶರ ಎರಡು ಕಥೆಗಳನ್ನು ಕುರಿತು
'ವಾಮನ' ; ಒಂದು ಟಿಪ್ಪಣಿ

○○

● ವಾಸುದೇವ ನಾಡಿಗ್

ಸಂವೇದನಾಪೂರ್ಣ ಬರಹಗಾರರೆಲ್ಲ ಎದುರಿಸಲೇಬೇಕಾದ ಸವಾಲು ಎಂದರೆ 'ವೈಯಕ್ತಿಕ ತೀವ್ರತೆ', ಕಾವ್ಯವೋ, ಕತೆಯೋ ಸೃಜನಶೀಲ ಬರಹದ ಸಂದರ್ಭದಲ್ಲೆಲ್ಲಾ ಲೇಖಕನ ಅವನದ್ದೆ (ಳದ್ದೆ) ಆದ ಅನುಭವದ ಅಭಿವ್ಯಕ್ತಿ ಹೆಡೆ ಎತ್ತಿ ನಿಲ್ಲುತ್ತದೆ. ಇಂತಹದ್ದರಿಂದ ಬಿಡಿಸಿಕೊಂಡು ತಾನೇ ಬೇರೆಯಾಗಿ ನಿಂತೂ, ತನ್ನ ಅನುಭವ, ವೈಯಕ್ತಿಕ ಸಂವೇದನೆಗಳಿಗೂ ತನ್ನಿಂದ ರಚಿತಗೊಂಡ ಕೃತಿ ಜಗತ್ತಿಗೂ 'ಸಂಬಂಧ'ವೊಂದನ್ನು ಸೂಕ್ಷ್ಮಗೊಳಿಸಬೇಕಾಗುತ್ತದೆ. ಇಂತಹ ವೈಯಕ್ತಿಕ ತೀವ್ರತೆಯಿಂದ ಮುಕ್ತಗೊಂಡ ಕೃತಿಜಗತ್ತಿನ ಅನಾವರಣ ಕಷ್ಟದ ಕೆಲಸವೇ. ಆದರೆ 'ಬರಹ' ಎಂಬ ಸಂವೇದನಾ ಮಾಧ್ಯಮದಲ್ಲಿ ಈ ಬಗ್ಗೆ ಸಾಧಿಸಲು ನಿರಂತರ ಅಭ್ಯಾಸ ಮಾತ್ರ ಅಗತ್ಯ.

ಲೇಖಕ ಅಥವಾ ಲೇಖಕಿಯ ಆರಂಭದ ಬರಹದ ಸಂದರ್ಭದಲ್ಲಿ ಇಂತಹ ವೈಯಕ್ತಿಕ ಮುಖವಾಣಿ– ಅನುಭವ ದೃಷ್ಟಿಯಿಂದ ಬಿಡಿಸಿಕೊಳ್ಳುವುದು ಕಷ್ಟವೇ! **"ನಾನು ಏನು ಬರೆದರೂ ನನ್ನೊಳಗಿನ – ಹತ್ತಿರದ ಅನುಭವವನ್ನೇ ಅನಾವರಣ ಮಾಡುತ್ತಿರುವೆನಲ್ಲ! ಇಲ್ಲ, ನಾನೇ ಬೇರೆ ಮುಖ, ನನ್ನ ಬರಹದ ಜಗತ್ತೇ ಇನ್ನೊಂದು ಮುಖ ಎಂದು ಕೂಗಿ ಹೇಳಬೇಕು ಎನ್ನಿಸುತ್ತದೆ. ಹಾಗೆ ನನ್ನ ಕೃತಿಗಳನ್ನು ಅರ್ಥಮಾಡಿಕೊಳ್ಳಬೇಕು ಎಂದರೆ ನನ್ನನ್ನು ಅರ್ಥಮಾಡಿಕೊಳ್ಳಬೇಕು. ನನ್ನ ವೈಯಕ್ತಿಕ ಬದುಕನ್ನು ಅರ್ಥಮಾಡಿಕೊಳ್ಳಬೇಕು ಎಂದು ವಿನಂತಿಸಿಕೊಳ್ಳಬೇಕಾಗುತ್ತದೆ. ಯಾರಾದರೂ 'ಕೃತಿ' ಓದಿದ ನಂತರ ಇದಕ್ಕೆ 'ಸ್ಫೂರ್ತಿ' ಏನು ಎಂದು ಪ್ರಶ್ನಿಸಿದರೆ ಗಂಟೆಗಟ್ಟಲೆ ನನ್ನ ವೈಯಕ್ತಿಕ 'ಗುಟ್ಟು' ಗಳನ್ನೇ ರಟ್ಟು ಮಾಡಿಕೊಳ್ಳುವ ಸಾಹಸಕ್ಕೆ ಕೈ ಹಾಕಬೇಕಾಗುತ್ತದೆ. ಹೀಗೆ ನನಗೆ ನಾನೇ ಬಯಲು ಮಾಡಿಕೊಳ್ಳುವುದರಲ್ಲಿ ಸುಖವಿದ್ದರೂ ಅಪಾಯವೂ ಇದೆಯಲ್ಲ! ಅಂತ ಅನ್ನಿಸಿ ಹೆದರಿಕೆ ಶುರುವಾಗುತ್ತದೆ. ತನ್ನ ಓದುಗ ತನ್ನನ್ನು ಗಮನಿಸುವ (ನೋಟ) 'ಶೈಲಿ'ಯ ಬಗ್ಗೆ ಕುತೂಹಲ ಉಂಟಾಗುತ್ತದೆ. ಒಂದು ಕಡೆ ನನ್ನ ಕೃತಿಗಳೇ ಈ ಓದುಗರಿಗೆ ಅರ್ಥವಾಗುತ್ತಿಲ್ಲ ಏಕೆ? ಎಂಬ ಬೇಸರಪ್ರಶ್ನೆ ಮೂಡಿದರೆ ಇನ್ನೊಂದು ಕಡೆ ಅರೆ! ಅರ್ಥವಾಗುವುದೆಂದರೆ ಏನು? ಅರ್ಥವಾಗಬೇಕೆ? ಲೇಖಕನಾ(ಳಾ)ಗಿ**

ಗುಪ್ತ–ಗಾಂಭೀರ್ಯ–ರಹಸ್ಯಗಳಲ್ಲಿಯೇ ಉಳಿದು ಬಿಟ್ಟರಾಯಿತು! ಎನಿಸುತ್ತದೆ." ಈ ಮಾತುಗಳಲ್ಲಿ 'ಬರಹ'ದ ಹಿಂದಿನ ಪ್ರತಿಯೊಬ್ಬ ಬರಹಗಾರನ ಸ್ವಗತಗಳು. ಅಲ್ಲವೆ?

ಇಂತಹ ಯೋಚನೆಗಳಿಗೆ ಹಚ್ಚುವ ಕತೆ ಲಂಕೇಶರ 'ವಾಮನ' ಈ ಮೇಲೆ ಹೇಳಿದ ಮಾತುಗಳೆಲ್ಲವೂ ಈ ಕತೆಯೊಳಗೆ ಸುಪ್ತವಾಗಿದೆ. ಇಲ್ಲಿನ 'ನಿರೂಪಕ'ನ ದೊಡ್ಡ ಸಮಸ್ಯೆ ಇಂಥದೇ 'ಯಾರೊಬ್ಬರಿಗೂ ನಾನು ಅರ್ಥವಾಗಿಲ್ಲ' 'ಬರೆಯುವುದೆಂದರೆ ಒಳಗಿನದೆಲ್ಲಾ ಹೊರಗೆಡಹುವ ಕೆಲಸ' ಎಂದೆ ನಂಬಿಕೊಂಡು ಕೊರಗುವ ನಿರೂಪಕ ಬರಹಗಾರರ ಪ್ರತಿನಿಧಿಯಾಗಿ ಬಿಡುತ್ತಾನೆ ಹಾಗೇ ಓದುಗ ಜಗತ್ತಿನ ಕುತೂಹಲದ ಪ್ರತಿನಿಧಿಯಾಗಿ ಸಂಜೀವಯ್ಯ ಬೆಳೆಯುತ್ತಾನೆ. ನಡುವೆ 'ಮೇಣದ ಬತ್ತಿ' 'ಪಕಾಂಗಿ' ಯಂತಹ ಕೃತಿಗಳ ನಿಜದ ಬದುಕು ಇದೆ.

ಓದುಗನ ಬಗ್ಗೆ ಲೇಖಕ ಇಟ್ಟುಕೊಂಡ ಕುತೂಹಲ: ಲೇಖಕನ ಬಗ್ಗೆ ಓದುಗನಿಗೆ ಇರುವ 'ಗೌರವ'; ಲೇಖಕನ ವೈಯಕ್ತಿಕ ಜಗತ್ತು ಮತ್ತು ಕೃತಿ; ಲೇಖಕ ಮತ್ತು ಓದುಗ: ಲೇಖಕ, ಓದುಗ, ಕೃತಿ ಹಾಗೂ ಅಭಿವ್ಯಕ್ತಗೊಂಡ ಅನುಭವಗಳ ಸ್ವರೂಪ; ಇವುಗಳ ಮಧ್ಯದ ಸಂಬಂಧ; ಉಳಿಸಿಕೊಳ್ಳಬಹುದಾದ ಸ್ವಾರಸ್ಯ, ಅಂತರಗಳ ಬಗ್ಗೆ ಸೂಕ್ಷ್ಮ ವಿವೇಚನೆ 'ವಾಮನ' ಕತೆಯದು. ನಿರೂಪಕನ ಕೃತಿಯ ಹಿಂದಿನ 'ರಹಸ್ಯ' ಎಲ್ಲವೂ ಅರ್ಥವಾಗಿ 'ಅಯ್ಯೋ ಇಷ್ಟೇನಾ' ಎಂದುಕೊಳ್ಳುವ. ಸಂಜೀವಯ್ಯ ವಾಮನನಾಗಿ ಬಂದು 'ಬೆಳೆದು' ನಿಲ್ಲುವ ರೀತಿ ತೀವ್ರತೆಯನ್ನು ಉಳಿಸಿಕೊಂಡಿದೆ. 'ಎಲ್ಲವನ್ನು' ಹೇಳಿಕೊಂಡು (ಖಾಲಿ) ಬರಿದಾಗಬೇಕೆನ್ನುವ ನಿರೂಪಕನ ಬಯಕೆ ಸಂಜೀವಯ್ಯನ ಎದುರಿಗೆ ಈಡೇರಿದಾಗ, ನಿರೂಪಕ ತನ್ನೊಳಗೇ, ತನ್ನ ಸೃಜನಶೀಲತೆಯ ಮೂಲದ ಬಗ್ಗೆ ಏನೊಂದೂ ರಹಸ್ಯ, ಗಾಂಭೀರ್ಯವನ್ನು ಉಳಿಸಿಕೊಳ್ಳದೇ 'ಸರಳ' ನಾಗುತ್ತಾನೆ. ('ನವ್ಯ' ಸಂದರ್ಭದ 'ವ್ಯಕ್ತಿ' Complex ಹೊತ್ತವನು! ಅಷ್ಟು ಸರಳನಲ್ಲ!) ಸಂಜೀವಯ್ಯ ತನ್ನ ಬಗ್ಗೆ ಇಟ್ಟುಕೊಂಡಿದ್ದ 'ಗೌರವ' 'ಸಂಬಂಧ ಸ್ವರೂಪ' ಹಾಗೂ ಕೃತಿ ಹಾಗೂ ತನ್ನ ಬದುಕಿನ ಮಧ್ಯದ Distance ಎಲ್ಲವೂ ಅರ್ಥ ಕಳೆದುಕೊಳ್ಳುತ್ತದೆ.

ಸದ್ಯದ, ಸಂವೇದನಾಶೀಲ-ಬರಹಗಾರರಾಗಿ ಲಂಕೇಶ್ ಒಬ್ಬ 'ಜೀನಿಯಸ್'. 'ವಾಮನ' ಕತೆಯ ಮೂಲಕ 'ಸೃಜನಶೀಲ ಬರಹ'ದ ಬಗೆಗೆ ಚಿಂತಿಸಿ, ಒಂದು ಸಮಸ್ಯೆಯನ್ನು ಮುಂದಿಟ್ಟುಬಿಟ್ಟಿದ್ದಾರೆ. ಲೇಖಕ ತನ್ನ ವೈಯಕ್ತಿಕತೆಗಳನ್ನು ಮೀರಿ ಕೃತಿ ಶರೀರದ ಅರ್ಥವಂತಿಕೆಗಾಗಿ ಹೆಣಗಾಡಬೇಕಾದ, ಸೋತುಗೆಲ್ಲಬೇಕಾದ 'ತೀವ್ರತೆ'ಯನ್ನು 'ವಾಮನ'ದಲ್ಲಿ ದಾಖಲಿಸಿರುವ ರೀತಿ ಇದು.

'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ'

(ಒಂದು ಓದು ಹಾಗೂ ಚರ್ಚೆ)

○○

● ಪಿ. ಮಂಜುನಾಥ್

'ಅಕ್ಕ' ಕಾದಂಬರಿಯನ್ನು ವಿಮರ್ಶಿಸುತ್ತಾ ವಿಮರ್ಶಕರೊಬ್ಬರು 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ' ಕತೆಯಲ್ಲಿ ಗ್ರಾಮೀಣ ಬದುಕಿನಲ್ಲಿ ಅಕ್ಕ–ತಮ್ಮ ಸಂಬಂಧವನ್ನು ಲಂಕೇಶರು ಶೋಧನೆಗೆ ಒಡ್ಡುತ್ತಾರೆ ಎಂದು ಬರೆದಿದ್ದಾರೆ. ಅವರು ಲಂಕೇಶರ 'ಅಕ್ಕ–ತಮ್ಮ' ಕವಿತೆಯನ್ನು ಮುಂದಿಟ್ಟುಕೊಂಡು ಬರೆದಿದ್ದರಿಂದ. ನಾನು, ಹೌದು ಅಷ್ಟೆ ಎಂದುಕೊಂಡಿದ್ದೆ. ಮತ್ತೊಮ್ಮೆ '... ಸ್ಕಾಲರ್‌ಷಿಪ್ ಯಾತ್ರೆ' ಓದಿದಾಗ 'ಅಕ್ಕ–ತಮ್ಮ'ರ ಸಂಬಂಧವನಷ್ಟೇ ಹುಡುಕಾಡಿಲ್ಲ. ಅದೊಂದು ಅಂಶವಾಗಿದ್ದು ಮತ್ತಷ್ಟು ಸಂಕೀರ್ಣತೆಯೊಂದಿಗೆ ಕತೆ ಹಿಗ್ಗಿದೆ ಎನಿಸಿತು.

ಲಂಕೇಶರ ಬಹುಪಾಲು ಕತೆ, ಕಾದಂಬರಿ ಹಾಗೂ ಕವಿತೆಯಲ್ಲಿ ಬಹು ಮುಖ್ಯ ವಸ್ತುವಾಗಿರುವವಳು ಹೆಣ್ಣು ಹಾಗೂ ಅವಳು ಪಡೆದುಕೊಳ್ಳುವ ಹೊಸ ಆಯಾಮ. ಇವರ ಸೃಜನಶೀಲ ಬರಹಗಳಲ್ಲಿ 'ಹೆಣ್ಣು' ತನ್ನೆಲ್ಲಾ ಮಿತಿಗಳನ್ನು ಮೀರಿ ವ್ಯಕ್ತವಾಗುತ್ತಾಳೆ. ಇತ್ತೀಚಿನ 'ಪತ್ರಿಕೆ'ಯ 'ಟೀಕೆ–ಟಿಪ್ಪಣಿ'ಯಲ್ಲಿ ಬರೆದ 'ಬೆಳದಿಂಗಳ ದಾಹ' ಕತೆಯಲ್ಲಿನ ನಾಯಕಿ ಸಂಪ್ರದಾಯಿಕ ಹೆಣ್ಣಾಗಿ ಪೂಜೆ, ಭಕ್ತಿ ಎಲ್ಲವನ್ನು ನಿವೇದಿಸುತ್ತಲೇ ಕೊನೆಯಲ್ಲಿ ತನಗೆ ಕಡಿಮೆಯಾಗಿದ್ದನ್ನ ಪಡೆಯಲು ಎಲ್ಲವನ್ನು ಮೀರಿ ಮತ್ತೊಂದು ಆಯಾಮಕ್ಕೆ ಸ್ವಇಚ್ಛೆಯಿಂದ ಜಿಗಿಯುತ್ತಾಳೆ. ಹಾಗೆಯೇ 'ಕಲ್ಲು ಕರಗುವ ಸಮಯ.....'ದಲ್ಲಿನ ನಾಯಕಿಯರು ಕೂಡ. 'ಮುಸ್ಸಂಜೆ ಕಥಾ ಪ್ರಸಂಗ'ದ ಬಡ್ಡಿರಂಗವ್ವ, ಸಾವಂತ್ರಿಯರಂತೆ ತಮ್ಮೆಲ್ಲಾ ಮಿತಿಯನ್ನು ಮೀರಿ ದಿಟ್ಟತನದಿಂದ ತಮಗೆ ಬೇಕಾದ್ದನ್ನು ದಕ್ಕಿಸಿಕೊಳ್ಳುತ್ತಾರೆ.

'ಸ್ಕಾಲರ್‌ಷಿಪ್ ಯಾತ್ರೆ' ಹುಂಜ ಮತ್ತು ಹೆಣ್ಣುಕೋಳಿಯ ಸಂಬಂಧವನ್ನು ಹೈಸ್ಕೂಲ್ ಹುಡುಗ ಉಮಾಪತಿಯ ಕಣ್ಣಿನಲ್ಲಿ ನೋಡುವುದರ ಮೂಲಕ ಕತೆ ಪ್ರಾರಂಭವಾಗುತ್ತದೆ. "ಹುಂಜನ ಸುತ್ತ ಓಡಾಡುವ 'ಕೋಳಿಗೆ ನಾಚಿಕೆಯಿರಬಹುದು; ಬೇಸರವಿರಬಹುದು ಅಥವಾ ಯಾರಿಗೂ ಹೇಳದಂಥ ಆಶೆಯಿರಬಹುದು. ಹುಂಜ ತನ್ನ ಗತ್ತು ಗೈರತ್ತನೆಲ್ಲಾ ಬಳಸಿ ಬಂದೊಡನೆ, ವಿಲಕ್ಷಣ ಸದ್ದು ಮಾಡುತ್ತ ಹಿಂಜರಿಯುತ್ತಿತ್ತು. ಓಡಿ ಹೋಗುತ್ತಿತ್ತು. ಹುಂಜಕ್ಕೆ ಅದರ ಹಿಂಜರಿಕೆ ಗೊತ್ತಿರಬೇಕು – ಅದರ ಹಿಂದೆಯೇ ಓಡಿ ಅದರ ಬೆನ್ನಿಗೆ ಹಾರಿ ಕೊಂಡಿಕಾಲುಗಳಿಂದ ಬೆನ್ನನ್ನು ಹಿಡಿದು ಅಮುಕುತ್ತಿತ್ತು. ಚೇರಿ ಕೊಳ್ಳುವವರೆಗೆ." ಇಂಥಹ ವಿಲಕ್ಷಣ ಸಂಬಂಧವನ್ನು

ಮನುಷ್ಯನಲ್ಲಿಯೂ ಹುಡುಕಲೆತ್ನಿಸುತ್ತಾರೆ. ಆಚೆ ಮನೆಯ ರಾಮ–ಸಿದ್ದಿಯ ಪ್ರಸಂಗದಲ್ಲಿ ಕಾಣುತ್ತದೆ.

"ದರಿದ್ರದ ಸಿದ್ದಿ ರಾಮನ ಜೊತೆ ಹರಟುತಿದ್ದಳು. 'ಅವಳು ಇವಳು ಅನ್ನಕೇನು ಹವಳ ಕಟ್ಟಿ ಹಾಕಿ ಬಿಟ್ಟಿದಿಯೇನ್ಲಾ– ಹಾಟಗಳ್ಳ....' ರಾಮ ಹೆದರಲಿಲ್ಲ. ಮುಂದುವರಿದು ತೋಳು ಮುಟ್ಟಿ 'ಯಾಕೆ ಹರದೈತೆತೀ ನಿನ ಜಾಕೀಟು' ಅಂದ. ಮೊಲೆವರೆಗೂ ಹೋಗಿರಬೇಕು ಬೆರಳು." ಕತೆಯ ಕೊನೆಯಲ್ಲಿ ಈ ಪ್ರಾರಂಭದ ಪ್ರಸಂಗಗಳಿಗೆ ಹೋಲಿಸಬಹುದಾದ ಉಮಾಪತಿಯ ಅಕ್ಕ ಲಿಂಗಿ, ಶೇಖರಪ್ಪ ಹಾಗೂ ಹುಸೇನಿಯರ ಸನ್ನಿವೇಶವಿದೆ.

"ಲಿಂಗಿ ನಾಚುತ್ತ ನಿಂತಿದ್ದಳು. (ನೆನಪಿಸಿಕೊಳ್ಳಿ; ಕೋಳಿಗೆ ನಾಚಿಕೆಯಿರಬಹುದು) ಅವಳನ್ನು ಅಲ್ಲಿಂದ ಬೇಗ ಕರೆದುಕೊಂಡು ಹೋಗಬೇಕೆನಿಸಿತ್ತು. ಆದರೆ ಅವಸರ ಮಾಡಲು ನಾಚಿಕೆ. ನಾನು ಹೇಗಾದರೂ ಮಾಡಿ ಲಿಂಗಿಯನ್ನು ಅಲ್ಲಿಂದ ಕರೆದೊಯ್ಯದಿದ್ದರೆ ಪೇಟೆ ಮತ್ತು ಊರಲ್ಲಿ ಉಸಿರಾಡುವುದು ಸಾಧ್ಯವಿರಲಿಲ್ಲ. 'ಹೋಗಾನ ಲಿಂಗಕ್ಕ, ಯಾಕೆ ನಿಂತಿದಿ?' ಅಂದೆ. ಅವಳು ಬಿಸಿಲಿಗೆ ಅಡ್ಡವಾಗಿ ಕೈಹಿಡಿದುಕೊಂಡು ನೋಡುತ್ತಾ 'ರಣಬಿಸಿಲು – ಒಂಚೂರು ತಡಿಯೊ' ಅಂದಳು. ಅಪ್ಪನ ಜೊತೆ ಆಕೆ ಹೋಗಿರಲಿಲ್ಲ; ಅದು ಅಸಹಜ. ನನ್ನೊಂದಿಗೆ ಹೇಳಲು ಇಷ್ಟಪಡದ ಸಂಗತಿ ಅವಳಲ್ಲಿದ್ದಂತಿತ್ತು. (ಕೋಳಿಯಲ್ಲಿಯು ಇಂಥಹದ್ದೆ ಹೇಳಲಾರದಂಥ ಆಶೆ!) ಗೇಟಿನ ಹತ್ತಿರ ನಿಂತು 'ಬಾ!' ಅಂದೆ. ಶೇಖರಪ್ಪ ಜಗುಲಿಯ ಮೇಲೆ ನಿಂತು ನೋಡುತ್ತಿದ್ದರು. ಹುಸೇನಿ ಗಿಡಕ್ಕೆ ನೀರುಹಾಕುತ್ತಲೇ ನನ್ನನ್ನೂ ಲಿಂಗಿಯನ್ನು ಕಣ್ಣ ಕೊನೆಯಿಂದ ನೋಡುತ್ತಿದ್ದ ಲಿಂಗಿ ಅಪ್ಪ ಬಿಟ್ಟುಹೋಗಿದ್ದ ಚಿಕ್ಕ ಬುಟ್ಟಿಯ ಹತ್ತಿರ ಹೋಗಿ ತಲೆಗೆ ಎತ್ತಿಕೊಳ್ಳುವುದೋ ಎಂದು ಅನಿಶ್ಚಯತೆ ಮುತ್ತಿ ನಿಂತಳು" ಈ ಮೇಲಿನ ಸಾಲುಗಳ ಪಕ್ಕಕ್ಕಿಟ್ಟು ಹುಂಜನ ಪಕ್ಕದಲ್ಲಿಯೇ ಸುತ್ತುವ ಕೋಳಿಯ ನಾಚಿಕೆ, ಬೇಸರ, ಆಶೆಯನ್ನು ಲಿಂಗಿಯಲ್ಲಿ ನೋಡಿ. ಪ್ರಾಣಿ–ಪಕ್ಷಿಯ ಸಹಜ ಕ್ರಿಯೆಯನ್ನು ಮನುಷ್ಯನ ಮೂಲಭೂತ ಗುಣದಲ್ಲಿ ಹುಡುಕುವ ಯತ್ನವಿದು.

ಈ ಮೇಲಿನ ಸನ್ನಿವೇಶದಲ್ಲಿ ಲಿಂಗಿಯ 'ತಮ್ಮ' ಉಮಾಪತಿಯ ತಳಮಳ ಸಂದಿಗ್ಧ, ಒತ್ತಡದ ಮನಸ್ಥಿತಿ; ಇಂಡಿಯಾದ ಗ್ರಾಮೀಣ ಬದುಕಿನಲ್ಲಿನ ಪ್ರತಿಯೊಬ್ಬ 'ತಮ್ಮ'ನ ಮನಸ್ಥಿತಿಯ ಪ್ರತಿಬಿಂಬವು ಆಗಿದೆ.

ಅಪ್ಪ ಮತ್ತು ಊರ ನಿಂಗಪ್ಪಗೌಡನ ಸಂಬಂಧವನ್ನು ಅಪ್ಪನಿಲ್ಲದ (ಗಂಡಸರೆ ಇಲ್ಲದ) ಕುಟುಂಬದಲ್ಲಿ ಉಮಾಪತಿ ಸಹಜ ಸಂಶಯ ಕಣ್ಣುಗಳಲ್ಲಿಯೇ ನೋಡುತ್ತಾನೆ. ಇದು 'ಊಹೆ' ಅಥವಾ 'ನಿಜ'ವೆಂಬುದು ಖಚಿತಗೊಳ್ಳುವ ಪ್ರಸಂಗದಲ್ಲಿ ಪ್ರಯತ್ನಪೂರ್ವಕವಾಗಿಯೇ ತಪ್ಪಿಸಿಕೊಳ್ಳಲು ಯತ್ನಿಸುತ್ತಾನೆ.

"ನಾನಿನ್ನು ಬರ್ತನಿ' ಎಂದು ಎದ್ದೆ. ಶೇಖರಪ್ಪ ನನಗೆ ಕೇವಲ ಸಂದೇಹವಾಗಿ ಉಳಿದಿದ್ದ ಸಂಗತಿಗಳನ್ನೆತ್ತಿಕೊಂಡು ತನ್ನದೆ ಆದ ರೀತಿಯಲ್ಲಿ ವಿವರಿಸುತ್ತ ಖಚಿತಗೊಳಿಸತೊಡಗಿದ್ದ. ಅವನ ಮಾತು ಕೂಡ ಊಹೆಯಾಗುವುದು ಅಥವಾ ತೀರ ನಿಜವಾಗುವುದು ಸಾಧ್ಯವಿತ್ತು.' ಎರೆಡು ನನಗೆ ಬೇಕಿರಲಿಲ್ಲ."

ಪರಿಸ್ಥಿತಿಯ ಒತ್ತಡದಲ್ಲಿ, ಬದುಕಲೆತ್ನಿಸುವ ತೀವ್ರತೆಯಲ್ಲಿ ಈರವ್ವ ನಿಂಗಪ್ಪಗೌಡನೊಟ್ಟಿಗೆ ತನ್ನ ಅನುಕೂಲಕ್ಕಾಗುವಂತೆ ಸಂಬಂಧ ಕುದುರಿಸಿಕೊಂಡಿದ್ದರೂ ಸ್ವಾಭಿಮಾನ ಪ್ರಶ್ನೆ ಬಂದಾಗ ಎಲ್ಲವನ್ನು ಮೀರಿ ಸಾಮಾನ್ಯ ಹೆಂಗಸಾಗಬಹುದಿದ್ದ ಈರವ್ವ ಅಸಮಾನ್ಯ ಹೆಂಗಸಾಗಿ ಬಿಡುತ್ತಾಳೆ. "ಬಾಡ್ಯಾ ಮುಂಡೇ ಮಗನೆ. ನನ್ನ ಕಳ್ಳಿ ಅಂತಿಯೇನೋ ಎಂದು ಅವ್ವ ನಮ್ಮೆಲ್ಲರ ಹಾಜರಿಯಿಂದ ಧೈರ್ಯ ಮಾಡಿ ಇನ್ನು ಹೆಚ್ಚಾಗಿ ಬೈಯುತ್ತ ಹುಸೇನಿಯ ಅಂಗಿ ಹಿಡಿದು ನಾಲ್ಕು ಕೊಟ್ಟಳು." "ನಿಂಗೇಗೌಡರು ಪಂಚಾಯಿತಿ ಮಾಡುವ ಧ್ವನಿಯಲ್ಲಿ 'ಈರವ್ವ ಯಜಮಾನಿ' ಎಂದು ಶುರು ಮಾಡಿದೊಡನೆ 'ನೀ ಮುಚ್ಕೊಂಡಿರೋ ಗೌಡ' ಎಂದಳು.

"ನಿಂಗೇಗೌಡ ಕೂಡ ಅವಮಾನದಿಂಲೋ ಯಾಕೋ ತಲೆ ಮರೆಸಿಕೊಂಡು ಹೊರಟು ಹೋಗಿದ್ದರು. ಶೇಖರಪ್ಪ ಸುಮ್ಮನೆ ನಿಂತಿದ್ದರು."

ಇಂಥ ಸ್ವಾಭಿಮಾನದ ಪ್ರಸಂಗದಲ್ಲಿ ಈರವ್ವ ತನ್ನ ಮಿತಿಗಳನ್ನೆಲ್ಲಾ ಕಳಚಿ ಹಾಕಿ ಮತ್ತೊಂದು ಆಯಾಮ ಪಡೆದುಕೊಂಡು ಬಿಡುತ್ತಾಳೆ. ನಿಂಗಪ್ಪಗೌಡನ ಸಂಬಂಧ ಅವಳಿಗೆ ಅಡ್ಡವಾಗುವುದಿಲ್ಲ. ದಿಟ್ಟತನ ತೋರಿ ಮೀರುತ್ತಾಳೆ. 'ಈರವ್ವ'ನನ್ನು '... ಕಥಾ ಪ್ರಸಂಗ' 'ಕಲ್ಲುಕರುಗುವ ಸಮಯ'.... ಹಾಗೂ 'ಅವ್ವ' ಕವಿತೆಯಲ್ಲಿನ ನಾಯಕಿಯರೊಟ್ಟಿಗೆ ಚರ್ಚಿಸಬಹುದಾಗಿದೆ.

ಲಂಕೇಶರು ತಮ್ಮ ಶಕ್ತಿ' ಯನ್ನು ಇಂಥ 'ಹೆಣ್ಣು' ಪಾತ್ರಗಳ ಸೃಷ್ಟಿಯಲ್ಲಿಯೇ ದುಡಿಸಿಕೊಳ್ಳುತ್ತಾ ಬಂದಿದ್ದಾರೆ. 'ಮಾತೃ ಸಂಸ್ಕೃತಿ' ಪ್ರಧಾನ ಬೇರಿನ ಹುಡುಕಾಟ ಕೂಡ ಇದು ಇರಬಹುದು.

'....ಸ್ಕಾಲರ್‌ಷಿಪ್ ಯಾತ್ರೆ' ಯಲ್ಲಿ ಇದೆಲ್ಲದರೊಟ್ಟಿಗೆ ಓದುಗನನ್ನು ತಟ್ಟುವುದು ಉಮಾಪತಿಯ ತಳಮಳ, ಸಂದಿಗ್ಧ ಹಾಗೂ ಸಹಪಾಠಿ ಸಂಧ್ಯಾಳ ನಿರ್ಲಿಪ್ತತೆ.

ಆರ್ಥಿಕ ಉದಾರೀಕರಣವೆಂಬ ಕೈಗೆಟುಕದ ಮಾಯಾಮೃಗ

○○

● ಮಾಧವ ಐತಾಳ್

"ಬರಿಯ ಅರ್ಥಶಾಸ್ತ್ರ ಓದಿಕೊಂಡಿರುವ ಅರ್ಥಶಾಸ್ತ್ರಜ್ಞ ಒಂದು ಸುಂದರ, ಬಡ ಮೀನಿದ್ದಂತೆ" – ಒಂದು ಸಾಮಿತಿ.

ಜಾಗತೀಕರಣ ಕಳೆದ ಐವತ್ತು ವರ್ಷಗಳಿಂದ ನಡೆದುಬಂದು ಕ್ರಿಯಾ ಸರಪಳಿ. 80ರ ದಶಕದಲ್ಲಿ ಅದಕ್ಕೆ ಹೆಚ್ಚಿನ ಚಾಲನೆ ಸಿಕ್ಕಿತು. ತೃತೀಯ ಜಗತ್ತಿನಲ್ಲಿನ ಸಾಲದ ಪರಿಸ್ಥಿತಿ, ಯುರೋಪಿಯನ್ ವ್ಯಾಪಾರ ಸಂಘಟನೆಯ ಸ್ಥಾಪನೆ, ಅಮೆರಿಕಾ ಯುರೋಪ್ ಮತ್ತು ನಂತರ ಜಪಾನ್‌ನಲ್ಲಿ ತಲೆಯೆತ್ತಿದ ಹಣದುಬ್ಬರ, ಹೆಚ್ಚಿದ ಅಂತರಾಷ್ಟ್ರೀಯ ಬಂಡವಾಳ ಮತ್ತು ಹೆಚ್ಚಿದ ಬಹುರಾಷ್ಟ್ರೀಯ ಸಂಸ್ಥೆಗಳ ತೋಳ್ಬಲ – ಇವೆಲ್ಲ ಅದಕ್ಕೆ ಕಾರಣವಾದ ಬಹುಮುಖ್ಯ ಅಂಶಗಳು. 'ಇಕನಾಮಿಸ್ಟ್' ಪತ್ರಿಕೆಯ ಪ್ರಕಾರ – '80ರ ದಶಕದಲ್ಲಿ ಅಂತರಾಷ್ಟ್ರೀಯ ಬಂಡವಾಳ ಮೂರು ಪಟ್ಟು ಹೆಚ್ಚಿತು. 1990ರ ಹೊತ್ತಿಗೆ ಅದು 1.5 ಟ್ರಿಲ್ಲಿಯನ್ ಡಾಲರ್ ಸಮೀಪಿಸಿತ್ತು'. ಬಹುರಾಷ್ಟ್ರೀಯ ಸಂಸ್ಥೆಗಳ ತೋಳ್ಬಲ ಹೆಚ್ಚುತ್ತಾ ಹೋಯಿತು. ಇಂದು ನೂರು ಅಂತಹ ಸಂಸ್ಥೆಗಳು ವಿಶ್ವದ ಒಟ್ಟು ಉತ್ಪಾದನೆಯ 1/6 ರಷ್ಟು ಉತ್ಪಾದನಾ ಆಸ್ತಿಯನ್ನು ಹೊಂದಿವೆ. 'ದೇವ್ತಗಳು ನುಗ್ಗಲು ಹೆದರುವೆಡೆ ಮೂರ್ಖ ನುಗ್ಗಿದಂತೆ' ಭಾರತವೂ ಜಾಗತೀಕರಣದೆಡೆಗೆ ನುಗ್ಗಿತು. '91ರಲ್ಲಿ ಪ್ರಾರಂಭವಾದ ಈ ಉದಾರೀಕರಣದ ಪ್ರಕ್ರಿಯೆ ಐದು ವರ್ಷ ಕಂಡಿದೆ. ಒಂದೊಂದೇ ಕ್ಷೇತ್ರವನ್ನು ವಿದೇಶೀ ಸಂಸ್ಥೆಗಳಿಗೆ ತೆರೆಯುತ್ತಾ ಬಂದ ಸರ್ಕಾರ, ಗ್ಯಾಟ್‌ನಂತಹ ಒಪ್ಪಂದಕ್ಕೆ ಸಹಿಹಾಕಿ, ವಿಶ್ವವ್ಯಾಪಾರಿ ಸಂಸ್ಥೆ (WTO) ಯಿಂದ ತನಗೆ ನ್ಯಾಯ ಸಿಗುತ್ತದೆ ಎಂದು ಸುಳ್ಳು ಭರವಸೆ ಹೊಂದಿತ್ತು. "ACTION AID ಕಾರ್ಯನಿರ್ವಾಹಕ ನಿರ್ದೇಶಕ ಡಾ. ಅಮಿತಾವ್ ಮುಖರ್ಜಿ ಪ್ರಕಾರ – 'TRIMS ಗೆ ಸೇರಿಸಲು ಇಚ್ಛಿಸಿರುವ ಬಂಡವಾಳ ಹೂಡಿಕೆ ರಕ್ಷಣಾ ನಿಯಮ ವಿಶ್ವವ್ಯಾಪಾರ ಸಂಸ್ಥೆಯ ಮೂಲಸಂವಿಧಾನವನ್ನೇ ಬದಲಿಸುತ್ತದೆ. ಈ ನಿಯಮ ವಿಶ್ವವ್ಯಾಪಾರ ಸಂಸ್ಥೆಯ ಯಾವುದೇ ನೆಲಬಲ್ಲಾಗಲಿ ಸ್ಥಳೀಯ ಸಂಸ್ಥೆಗಳಿಗೆ ಸಿಗುವ ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ವ್ಯಾಪಾರ ಮಾಡುವ ಅಧಿಕಾರ ನೀಡುತ್ತದೆ. ಲ್ಯಾಟಿನ್ ಅಮೆರಿಕಾದಲ್ಲಿ ಆದಂತೆ ಅವು ಸರ್ಕಾರದ ಕಾರ್ಯನೀತಿಗಳನ್ನು ಬದಲಿಸುತ್ತವೆ. ಇದು ಸಂವಿಧಾನ ವಿರೋಧಿ. ವಿದೇಶಿ ಸಂಸ್ಥೆಗಳ ಮೇಲೆ ನಿಯಂತ್ರಣವೇ ಇಲ್ಲದಂತಾಗುತ್ತವೆ. ವಿಶ್ವವ್ಯಾಪಾರಿ ಸಂಸ್ಥೆ ಬಹುರಾಷ್ಟ್ರೀಯ ಸಂಸ್ಥೆಗಳ ಕೈಗೂಸು, ಆದರಿಂದ ಯಾವುದೇ ಉಪಯೋಗ ಭಾರತದಂತಹ ದೇಶಗಳಿಗಿಲ್ಲ. ರಶಿಯಾದ ಪತನದ ನಂತರ, ಬಹುರಾಷ್ಟ್ರೀಯ

ಸಂಸ್ಥೆಗಳ ಒಕ್ಕೂಟವೊಂದು ಸ್ಥಾಪನೆಯಾದಂತಿದೆ. ಜಾಗತೀಕರಣ, ಆರ್ಥಿಕ ಉದಾರೀಕರಣ ಭಾರತದಲ್ಲಿ ಯಶಸ್ವಿಯಾಗದು. ಬಂಡವಾಳ ಹೂಡಿಕೆಯ ಮೇಲೆ ನಿಯಂತ್ರಣವನ್ನು ತೆಗೆದುಹಾಕಿದರೆ, ವಸಾಹತುಶಾಹಿಯಿಂದ ಹೊರಬಂದ ದೇಶಗಳು ತಮ್ಮ ಸ್ವತಂತ್ರ ಆರ್ಥಿಕ ವ್ಯವಸ್ಥೆಯನ್ನು ಕಟ್ಟುವುದು ಅಸಾಧ್ಯ."

ಅಂಕ್ಟಾಡ್ (UNCTAD) ನ ವಿಶ್ವಬಂಡವಾಳ ಹೂಡಿಕೆ ವರದಿಯ ಪ್ರಕಾರ –ಭಾರತ ನಿರೀಕ್ಷಿಸಿದ ನೇರ ಬಂಡವಾಳ ಹೂಡಿಕೆಯು ಮಾತ್ರ ಅಸಗತ್ಯ ಆಶಾವಾದಿತನದ್ದು. ಈ ಪ್ರದೇಶದಲ್ಲಿ ಹೂಡಲಾದ ಬಂಡವಾಳ 235 ಬಿಲಿಯನ್‌ಡಾಲರ್, ಇದರಲ್ಲಿ ಶೇ 37ರಷ್ಟು (ಸುಮಾರು 86 ಬಿಲಿಯನ್ ಡಾಲರ್) ತೃತೀಯ ಜಗತ್ತಿನಲ್ಲಿ. ಸರ್ಕಾರದ ಅಂಕಿ ಸಂಖ್ಯೆಯಂತೆ ಇಲ್ಲಿ ಹೂಡಲ್ಪಟ್ಟ ಬಂಡವಾಳ 1 ಬಿಲಿಯನ್ ಡಾಲರ್. ಇದು ಮೊದಲಿಗಿಂತ ಉತ್ತಮವಿರಬಹುದು, ಆದರೆ ಆಶಾದಾಯಕವಲ್ಲ. ಆದರೆ ಚೀನಾದಲ್ಲಿ ಹೂಡಲಾಗುವ ವಾರ್ಷಿಕ ಬಂಡವಾಳ 20 ರಿಂದ 40 ಬಿ.ಡಾ. ಅಲ್ಲಿನ ಆರ್ಥಿಕ ಬೆಳವಣಿಗೆಯ ಪ್ರಮಾಣ ಶೇ 14ರಷ್ಟಿದ್ದು, ರಾಷ್ಟ್ರೀಯ ಉಳಿತಾಯ ಶೇ 55 ರಷ್ಟಿದೆ.

ಬಗ್ಗುತ್ತಲೇ ಹೋದ ಭಾರತಕ್ಕೆ ಕೊನೆಗೂ 'ಹೆಚ್ಚು ಅನುಗ್ರಹಿತ ದೇಶ' (MFN) ಎಂಬ ಹಣೆಪಟ್ಟಿ ಸಿಗಲಿಲ್ಲ. ವಿಶ್ವಸಂಸ್ಥೆಯ ರಕ್ಷಣಾ ಸಮಿತಿಯಲ್ಲಿ ಖಾಯಂ ಸದಸ್ಯತ್ವವೂ ದಕ್ಕಲಿಲ್ಲ. WTO ನ ವಿವಾದ ಪರಿಹಾರ ಸಮಿತಿಯಲ್ಲಿಯೂ ಭಾರತಕ್ಕೆ ಸದಸ್ಯತ್ವದ ನಿರಾಕರಣೆ. ನೇಮಿಸಲಾದ ಸಮಿತಿಯಲ್ಲಿರುವ 115 ಜನ ನಿರ್ಣಾಯಕರು ಮತ್ತು 7 ಸದಸ್ಯರ ಸಮಿತಿಯಲ್ಲಿರುವವರೆಲ್ಲ ಶಕ್ತರೇ. ವಿಶ್ವವ್ಯಾಪಾರ ಸಂಸ್ಥೆ ಒಟ್ಟು 20 ಒಪ್ಪಂದಗಳನ್ನು ನಿರ್ವಹಿಸಬೇಕಿದೆ. ವಿವಾದಗಳನ್ನು ಪರಿಹರಿಸುವ ಒಡಂಬಡಿಕೆಯಲ್ಲಿ ಭಾರತದಂತಹ ದೇಶಗಳು ಮುಯ್ಯಿ ತೀರಿಸಿಕೊಳ್ಳಲು ಸಾಧ್ಯವಿಲ್ಲ. ಶಕ್ತರ ಮಾರುಕಟ್ಟೆಗಳು ಅಭಿವೃದ್ಧಿಶೀಲರಿಗೆ ತೆರೆಯಲ್ಪಟ್ಟಿಲ್ಲ. ರಫ್ತಿಗಿಂತ ಆಮದೇ ಹೆಚ್ಚು. ಅಭಿವೃದ್ಧಿಶೀಲ ದೇಶಗಳಿಂದ ರಫ್ತಾಗುವ ಉತ್ಪನ್ನಗಳಿಗೆ ವಿಧಿಸುವ ಸುಂಕ ಹೆಚ್ಚು, ಅಲ್ಲದೆ ಅವು ಕಡಿಮೆ ಕಾರ್ಮಿಕ ವೆಚ್ಚವಿರುವ ದೇಶಗಳ ಪೈಪೋಟಿಯನ್ನು ಎದುರಿಸಬೇಕು.

ಐದು ವರ್ಷಗಳ ಜಾಗತೀಕರಣದಿಂದ ಹಿಂದೆ ಸರಿದದ್ದೇ ಹೆಚ್ಚು. ಪ್ರಜೆಗಳ ವಾರ್ಷಿಕ ತಲಾದಾಯದಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಸಾಕಷ್ಟು ಬಂಡವಾಳವಿಲ್ಲದ್ದರಿಂದ 8ನೇ ಯೋಜನೆ ನೆಲಕ್ಕೆ ಕುಸಿದಿದೆ. ಯೋಜನಾ ಆಯೋಗದ ಮಧ್ಯಂತರ ವರದಿ ಆರ್ಥಿಕ ಸುಧಾರಣೆಯನ್ನು ಖಂಡಿಸಿದೆ. ರಫ್ತಿನಿಂದ ಬರುವ ಲಾಭದ ಮೊತ್ತ ಬರಿಯ ಮೋಸ. ವಿಶ್ವಬ್ಯಾಂಕ್‌ನ ಅಧ್ಯಯನದ ಪ್ರಕಾರ ಸಿಗಬಹುದಾದ 53 ಬಿ. ಡಾ. ಗಳಿಕೆಯಲ್ಲಿ G. 7 ದೇಶಗಳು 43 ಬಿ. ಡಾ. ಗಳನ್ನು

ಸುಂಗಿವರೆ, ಉಳಿದ ಹತ್ತು ಬಿ. ಡಾ. ಗಳನ್ನು ಪ್ರಪಂಚದ ಎಲ್ಲ ದೇಶಗಳೂ ಸೇರಿ ಹಂಚಿಕೊಳ್ಳಬೇಕು. ಬಡತನದ ಸಂಖ್ಯೆ ಶೇ 41ಕ್ಕೆ ಏರಿದರೆ, ಶೇ 70 ರಷ್ಟಿರುವ ಮಧ್ಯಮ ವರ್ಗದವರ ಕೊಳ್ಳುವ ಶಕ್ತಿ ಕುಸಿದಿದೆ. ನಿವ್ವಳ ರಾಷ್ಟ್ರೀಯ ಉತ್ಪನ್ನ ಶೇ 5–6ಕ್ಕೆ, ಕೃಷಿ ಉತ್ಪಾದನೆ ಶೇ 3 ರಿಂದ 4.5 ಕ್ಕೇರಿದೆ ಆದರೆ ರಾಷ್ಟ್ರೀಯ ಉಳಿತಾಯ ಶೇ 24 ರಿಂದ 20ಕ್ಕೆ, ಬಂಡವಾಳ ಹೂಡಿಕೆ ಶೇ 27.1 ರಿಂದ ಶೇ 21.1 ಕ್ಕಿಳಿದಿದೆ. ವಿದೇಶಿ ಸಾಲ 71 ಬಿ. ಡಾ. ನಿಂದ 99 ಕ್ಕೇರಿದೆ.

ಸಾಲಕ್ಕೆ ತೆರಬೇಕಾದ ಬಡ್ಡಿ ಶೇ 20.4 ರಿಂದ 27.1ಕ್ಕೆ ಏರಿದ್ದರೆ, ಒಟ್ಟು ಆಯವ್ಯಯದಲ್ಲಿನ ಆದಾಯ ಕಡಿತ 41.5 ರಿಂದ 55.9 ಕ್ಕೇರಿದೆ. ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇಕಡಾವಾರು ಬಂಡವಾಳದ ವಿರ್ಚು ಶೇ 5.3 ರಿಂದ 4.3 ಕ್ಕೆ ಇಳಿದಿದೆ. ವಾರ್ಷಿಕ ಉದ್ಯೋಗ ಸೃಷ್ಟಿ 200 ಲಕ್ಷ ಇರಬೇಕಿತ್ತು, ಅದು ಸಾಧ್ಯವಾಗದ್ದರಿಂದ ನಿರುದ್ಯೋಗ ಹೆಚ್ಚಿದೆ. 1991ರಲ್ಲಿ ಶೇ 60ರಷ್ಟು ಆಮದಿಗೆ ಹಣ ಒದಗಿಸಬೇಕಾಗಿದ್ದು, ಅದು 95ರಲ್ಲಿ ಶೇ 90ಕ್ಕೆ ಏರಿದೆ. ಆಯವ್ಯಯದಲ್ಲಿ ಬಳಕೆದಾರನಿಗೆ ನೀಡಲಾಗಿದ್ದ ವಿನಾಯಿತಿಯಲ್ಲಿ ಶೇ 47 ಮಾತ್ರ ಆತನಿಗೆ ತಲುಪಿದ್ದು, ಉಳಿದದ್ದು ರಫ್ತುದಾರನ ಹೊಟ್ಟೆ ಸೇರಿದೆ. 94–95ರಲ್ಲಿ ಆಮದಿಗೆ ನೀಡಲಾದ ವಿನಾಯಿತಿ ರೂ. 17,000 ಕೋಟಿ ಇತ್ತು. ಅದೇ ಸಮಯದಲ್ಲಿ ಆದ ರಫ್ತು ರೂ 28,000 ಕೋಟಿ. 1995–96 ರಲ್ಲಿ ಮತ್ತೆ ರೂ 1700 ಕೋಟಿಯಷ್ಟು ವಿನಾಯಿತಿ ನೀಡಲಾಯ್ತು. ಕೃಷಿಗೆ ಸೂಕ್ತ ಪ್ರಾತಿನಿಧ್ಯ ನೀಡಿದ್ದಲ್ಲಿ, ಅದರಿಂದಾಗುವ ರಫ್ತಿನ ಮೌಲ್ಯ ರೂ 60,000 ಕೋಟಿ ಆಗಿ, ಅದು ಎಲ್ಲ ಕೊರತೆಗಳನ್ನು ತೊಡೆದುಹಾಕುತ್ತಿತ್ತು. ಆದರೆ ಕೃಷಿ ನಿರ್ಲಕ್ಷ್ಯಕ್ಕೊಳಗಾಗಿದೆ. ಹಣದುಬ್ಬರ ಶೇ 8.9 ರಷ್ಟಿದ್ದರೆ, ವರ್ಷದಿಂದ ವರ್ಷಕ್ಕೆ ಬಜೆಟ್ ಕೊರತೆ ಹೆಚ್ಚುತ್ತಿದೆ. ಇದು ಮತ್ತಷ್ಟು ಹಣದುಬ್ಬರ, ಬೆಲೆ ಏರಿಕೆಗೆ ಕಾರಣವಾಗಿದೆ. ತಲಾವಾರು ಧಾನ್ಯದದ ಲಭ್ಯತೆ 510 ಗ್ರಾಂಗೆ, ಬೇಳೆಕಾಳುಗಳ ಲಭ್ಯತೆ 465 ಗ್ರಾಂಗೆ ಇಳಿದಿದೆ. ನಾಗರೀಕತೆಯ ಪ್ರಮುಖ ಚಾಲಕ ವಿದ್ಯುತ್ ಉತ್ಪಾದನೆಯಲ್ಲಿ ಒಂದೇ ಒಂದು ಮೆಗಾವಾಟ್ ಹೆಚ್ಚಳವಾಗಿಲ್ಲ.

ಚುನಾವಣೆಯಲ್ಲಿ ಸೋತುಹೋದ ಕಾಂಗ್ರೆಸ್‌ನ ಫ್ಯಾಕ್ಟ್‌ಶೀಟ್ ಇದು. 'ಜಾತ್ಯಾತೀತತೆ ಮತ್ತು ಆರ್ಥಿಕ ಸುಧಾರೀಕರಣ'ವನ್ನು ಮುಂದಿಟ್ಟುಕೊಂಡು ಚುನಾವಣೆಯಲ್ಲಿ ಮಣ್ಣು ಮುಕ್ಕಿದ ನಂತರ, ಕಾಂಗ್ರೆಸ್ ತನ್ನೆಲ್ಲ– ಆರ್ಥಿಕ ಕಾರ್ಯಕ್ರಮಗಳನ್ನು ಮುಂದುವರಿಸಬೇಕೆಂಬ ಶರತ್ತು ಹೂಡಿ ಸಂಯುಕ್ತ ರಂಗ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿದೆ. ಚಿದಂಬರಂ ತಮ್ಮ ಮೊದಲಿನ ಬಜೆಟ್ ಮಂಡಿಸಿದ್ದಾರೆ. ಸರ್ಕಾರದ ಪ್ರಥಮ ಬಜೆಟ್ ಆದ್ದರಿಂದ ಅದು 'ಮೆದು'ವಾಗಿ ಹೊರಬಂದಿದೆ. ಬಜೆಟ್‌ಗೆ ಕೆಲದಿನಗಳ ಮುಂದೆ ಪೆಟ್ರೋಲಿಯಂ

ಉತ್ಪನ್ನಗಳ ಬೆಲೆ ಶೇ 25 ರಷ್ಟು ಹೆಚ್ಚಿಸಲಾಗಿದೆ. ಇದು ಎಲ್ಲ ಪದಾರ್ಥಗಳ ಬೆಲೆಯನ್ನು ತನ್ನಿಂದ ತಾನಾಗೇ ಗಗನಕ್ಕೇರಿಸುತ್ತದೆ.

ಗುರು ಕನಪ್ಯೂಷಿಯಸ್ ಬರಪೀಡಿತ ಪ್ರದೇಶಕ್ಕೆ ಶಿಷ್ಯನೊಂದಿಗೆ ಹೋಗಿದ್ದ ಅಲ್ಲಿ ಹುಲಿಯ ಕಾಟ ಬೇರೆ ಇತ್ತು. ಇಡೀ ಊರಿನಲ್ಲಿ ಉಳಿದಿದ್ದು ಒಂದೇ ಕುಟುಂಬ. ಆ ಕುಟುಂಬದ ಹೆಣ್ಣುಮಗಳನ್ನು ಕನ್‌ಫ್ಯೂಷಿಯಸ್ ಕೇಳಿದ – 'ಬರ ಇದೆ, ಹುಲಿಕಾಟವಿದೆ, ಆದರೂ ನೀನು ಇಲ್ಲೇಕೆ ಉಳಿದಿದ್ದಿ?' ಆ ಹೆಣ್ಣು ಹೇಳಿದಳು – 'ಬರ ಇದೆ, ಹುಲಿ ಇದೆ, ಆದರೂ ನಾನು ಹೋಗಲಾರೆ. ಏಕೆಂದರೆ ಪಕ್ಕದ ರಾಜ್ಯದ ರಾಜ ದುಷ್ಟನಿದ್ದಾನೆ!.. ಕನ್‌ಫ್ಯೂಷಿಯಸ್ ಶಿಷ್ಯನೆಡೆಗೆ ತಿರುಗಿ ಹೇಳಿದ– 'ರಾಜ ದುಷ್ಟನಿರಬಾರದು. ಅದು ಎಲ್ಲಕ್ಕಿಂತ ಕೆಡುಕಿನದ್ದು.'

ಉದಾರೀಕರಣವೆಂಬುದು ಜನರಿಗೆ ಏನನ್ನೂ ಕೊಡದಿದ್ದಲ್ಲಿ, ಅದು ಯಾರಿಗೆ ಬೇಕು, ನಾವೇಕೆ ಅದನ್ನು ಸಹಿಸಬೇಕು? ಇದೊಂದು ವಿಷವೃತ್ತ. ನಮ್ಮದು ಚಕ್ರವ್ಯೂಹದಲ್ಲಿ ಸಿಕ್ಕಿದ ಅಭಿಮನ್ಯುವಿನ ವ್ಯರ್ಥ ಹೋರಾಟ.

ಅಪರಿಮಿತದ ಕತ್ತಲೆಯೊಳಗೆ
ವಿಪರೀತದ ಬೆಳಗನಿಕ್ಕಿದವರಾರೋ?
ಬೆಳಗೂ ಅದೆ! ಕತ್ತಲೆಯೂ ಅದೆ!!
ಇದೇನು ಚೋದ್ಯವೊ?
ಒಂದಕ್ಕೊಂದಂಜದು
ಆನೆಯೂ ಸಿಂಹವೂ ಒಂದಾಗಿ ಉಂಬುದ ಕಂಡು
ಬೆರಗಾದೆನು ಕಾಣಾ ಗುಹೇಶ್ವರ

ಅಲ್ಲಮಪ್ರಭು

ಕೊಟ್ಟಿಗೆಯ ಕಂಬಕ್ಕೊರಗಿ ನಿಂತವಳು

● ●

ಸುಧಾಶರ್ಮ ಚವತ್ತಿ

ಹಲವರು ಒಟ್ಟಿಗೆ ಸೇರಿರುವಾಗ ಆ ಗುಂಪಲ್ಲಿ ಪ್ರತಿ ವ್ಯಕ್ತಿಯ ಚಲನವಲನ ಸ್ವಭಾವ, ಕೂಡ್ರುವ, ನಿಲ್ಲುವ ಮಾತಾಡುವ ರೀತಿಗಳನ್ನು ಅವಲೋಕಿಸಿದರೆ ಮನುಷ್ಯ ಬದುಕಿನ ಒಳಸಂಕೀರ್ಣಗಳಲಿ ತೆರೆಯುತ್ತ ಪ್ರತಿ ವರ್ತನೆಯೂ ಸಂಸ್ಕಾರದ ಬೇರೆ ಬೇರೆ ಮುಖಗಳಾಗಿ ಗೋಚರವಾಗುತ್ತದೆ.

ಇವತ್ತಿಗೂ ಸಾಮಾನ್ಯವಾಗಿ ಹಳ್ಳಿಯಲ್ಲಿ ಹೆಂಗಸರು ಜಗುಲಿಗೆ ಬಂದು ಕೂತು ಗಂಡಸರೊಂದಿಗೆ ಸರಿಸಮನಾಗಿ ಮಾತಿಗಿಳಿಯುವುದಿಲ್ಲ. ಜಗುಲಿಯಲ್ಲಿ ಎಲೆ ಅಡಿಕೆ ಮೆಲ್ಲುವ, ರಾಜಕೀಯದಿಂದ ಹಿಡಿದು ಮಾರುಕಟ್ಟೆಯವರೆಗೆ ಪಟ್ಟಾಂಗ ಕೊಚ್ಚುವವರು ಗಂಡಸರು.

ಅಡುಗೆ ಮನೆಗೆ ಹೊಂದಿಕೊಂಡೇ ಇರುವ ಇಳಿದ ಮಾಡಿನ ಹಿತ್ತಲಕಡೆಯಲ್ಲಿ ಕೂತು ಹೆಂಗಸರು ಅವತ್ತಿನ ಅಡುಗೆಯ ಬಗೆಗೆ, ಯಾರದ್ದೋ ಮದುವೆ, ಇನ್ಯಾರದ್ದೋ ಬಾಣಂತನ ಇಲ್ಲವಾದರೆ ಅವರಿವರ ಕಷ್ಟ ಸುಖಗಳ ಬಗೆಗೆ ಲೊಚಗುಡುತ್ತಾರೆ.

ಹಳ್ಳಿಯ ಇಂತಹ ಸಾಮಾಜಿಕ ಸನ್ನಿವೇಶ ನನಗೆ ನಗರ ಬದುಕಿನ 'ಪಾರ್ಟಿ'ಗಳಲ್ಲಿ ಮತ್ತೆ ಮತ್ತೆ ನೆನಪಾಗಿ ಕಿರಿಕಿರಿ ಹುಟ್ಟಿಸಿದ್ದಿದೆ. ನಗರಗಳಲ್ಲಿ ವ್ಯವಸ್ಥೆಯಾಗುವ 'ಔತಣಕೂಟ'ದ ಹೆಸರಿನ ಸಮಾರಂಭಗಳಲ್ಲಿ ಗಂಡ ಹೆಂಡತಿ ಒಟ್ಟಾಗಿಯೇ ಹೋಗುತ್ತಾರೆ ಅಲ್ಲಿ ಬರುವವರೆಲ್ಲರ ಉಡುಪು, ಆಭರಣ ವರ್ತನೆಗಳೆಲ್ಲ ಅವರ ಶ್ರೀಮಂತಿಕೆಯ ಪ್ರದರ್ಶನವಾಗಿದ್ದು, ಎಲ್ಲರ ಮುಖದಲ್ಲೂ ಆಗಷ್ಟೇ ಅರಳಿದಂತೆ ಇದ್ದ ಫ್ರೆಶ್ ಎನ್ನಿಸುವ ಹಳಸಲು ನಗು. ಪ್ರತಿಯೊಬ್ಬರ ಮಾತುಕತೆಗಳಲ್ಲಿ ಒಂದಿಂಚೂ ಅಲ್ಲಾಡದ ಔಪಚಾರಿಕತೆ. ಆರ್ದ್ರವಾಗದ ಭಾವ, ಯಾಕೋ ಒಂದೇ ಫ್ಯಾಕ್ಟರಿಯ ಚಲಿಸುವ ಗೊಂಬೆಗಳ ಹಾಗೇ ಗೋಚರಿಸುತ್ತದೆ.

ತನ್ನ ವರ್ತನೆಗಳ ಬಗೆಗೆ ಮನುಷ್ಯ ಹೆಚ್ಚು ಹೆಚ್ಚು ಕಾಳಜಿವಹಿಸುತ್ತ ಬಂದ ಹಾಗೆ ಅವನು ಹೆಚ್ಚು ಹೆಚ್ಚಾಗಿ ಕೃತಕವಾಗುತ್ತಾನೆ. ಅವನ ವರ್ತನೆಗಳೆಲ್ಲ ತೋರುಗಾಣಿಕೆಯಾಗುತ್ತದೆ. ಎಷ್ಟೋ ಸಾರಿ ಮನುಷ್ಯರು ಒಳ್ಳೆಯವರಾಗಿರಬೇಕಾದ ಅಗತ್ಯ ಇಲ್ಲವೇ ಇಲ್ಲ. ಬುದ್ಧಿವಂತರಾದರೆ ಸಾಕು. ಎದುರಿನ ಮನುಷ್ಯನ

ನಾಡಿಮಿಡಿತ ಅಳೆಯುವ ಚಾಣಾಕ್ಷತನ ಇದ್ದರೆ ಸಾಕು ಒಳ್ಳೆಯವರೆನಿಸಿಕೊಳ್ಳಲು ಕಷ್ಟಪಡಬೇಕಾಗಿಲ್ಲ.

ಮನುಷ್ಯ ವರ್ತನೆಯ ಮೂಲ ಆತ್ಮವಿಶ್ವಾಸದಲ್ಲಿದೆ. ಆತ್ಮವಿಶ್ವಾಸವನ್ನು ಅಳೆಯುವುದು ಕಷ್ಟ. ಹಣ, ಅಧಿಕಾರ, ಸೌಂದರ್ಯ ಎಲ್ಲ ಇದ್ದರೂ ಆತ್ಮವಿಶ್ವಾಸ ಇರಲೇಬೇಕೆಂದಲ್ಲ. ಎಷ್ಟೋ ಸಾರಿ ಒಬ್ಬರ ಆತ್ಮವಿಶ್ವಾಸ ಇನ್ನೊಬ್ಬರಿಗೆ ಅಹಂಕಾರ ಎನ್ನಿಸಬಹುದು. ಆತ್ಮವಿಶ್ವಾಸಕ್ಕೂ ಅಹಂಕಾರಕ್ಕೂ ಕೂದಲೆಳೆಯಷ್ಟೇ ಅಂತರ.

“ವಿಶ್ವಸುಂದರಿಯಾಗಿ ಆಯ್ಕೆಗೊಂಡ ನಂತರ ಸುಶ್ಮಿತಾ ಸೇನಳ ಪ್ರತಿಕ್ರಿಯೆ ಇದು ನನ್ನಲ್ಲಿ ಆತ್ಮವಿಶ್ವಾಸ ಮೂಡಿಸಿತು” ಎಲ್ಲವೂ ಇರುವ ಆ ೧೯ ರ ಹುಡುಗಿಗೆ ಆತ್ಮವಿಶ್ವಾಸದ ಕೊರತೆಯೇ? ಯಾರಿಗೆ ಗೊತ್ತು.

ಆತ್ಮವಿಶ್ವಾಸಕ್ಕೆ ವಯಸ್ಸಿನ ಬೇಧಭಾವವೂ ಇಲ್ಲ. ಆತ್ಮವಿಶ್ವಾಸವನ್ನು ಮನಸ್ಸು ಹೋಲಿಕೆ ಇಲ್ಲದೆ ಯೋಚಿಸುವಾಗ ಮಾತ್ರ ಬೆಳೆಸಿಕೊಳ್ಳಬಹುದು.

ಮೊದಲಬಾರಿ ನಾನವನನ್ನು ಅವನ ಹಾಸ್ಟೇಲಲ್ಲಿ ಭೆಟ್ಟಿಯಾದೆ. ನೋಡಿದ್ದೇ ಅಳತೊಡಗಿದ. ಹಳ್ಳಿಯಲ್ಲಿ ಹೈಸ್ಕೂಲುವರೆಗೂ ಓದಿದ ಎಸ್.ಎಸ್.ಎಲ್.ಸಿ ಯಲ್ಲಿ ಕೆಲವೇ ಅಂಕಗಳ ಅಂತರದಿಂದ ರ್‍ಯಾಂಕ್ ತಪ್ಪಿಸಿಕೊಂಡ ಊರಲ್ಲೆಲ್ಲ ಹೀರೋ ಆದ ಹುಡುಗ. ನಗರದ ಕಾಲೇಜಲ್ಲಿ ಕಾಲಿಟ್ಟಾಗ ಎದುರಿಸಿದ ಮೊದಲ ಸಮಸ್ಯೆಯೇ ಭಾಷೆಯದು. ಇಡೀ ಕ್ಲಾಸಿನಲ್ಲಿ ಅವನೊಬ್ಬನಿಗೇ ಇಂಗ್ಲೀಷ್ ಅರ್ಥವಾಗುವುದಿಲ್ಲ. ಮಾತಾಡಲು ಬರುವುದಿಲ್ಲ. ನಾನು ಮುಖ್ಯ ಪ್ರವಾಹದಲ್ಲಿ ನಿಂತಿದ್ದೇನೆಂಬುದು ಕೊಡುವ ವಿಶ್ವಾಸದ ಅಗಾಧತೆಗೆ ಶಬ್ದವಿಲ್ಲ. ತೀರಾ ಮಾತನಾಡುವುದು ಅಂದವಾಗಿ ಕಾಣಬೇಕೆಂದು ಹಂಬಲಿಸುವುದು ಬುದ್ಧಿವಂತಿಕೆಯನ್ನು ಪ್ರದರ್ಶಿಸುವುದೆಲ್ಲ ಆತ್ಮವಿಶ್ವಾಸದ ಕೊರತೆಯ ಸ್ವರೂಪಗಳು. ತನ್ನ ಬಗ್ಗೆ ತಾನೇ ಕೊಚ್ಚಿಕೊಳ್ಳುವುದು. ಇತರರು ತನ್ನನ್ನು ಪ್ರಶಂಸಿಸುತ್ತಾರೆಂದು ಭ್ರಮಿಸುವವರು ಎಂದೂ ತಮ್ಮೊಳಗಿನ ತಮ್ಮನ್ನು ಶೋಧಿಸಿಕೊಂಡವರಲ್ಲ.

ಕೊಟ್ಟಿಗೆಯ ಕಂಬದ ಹಿಂದೆ ಹೋಗಿ ನಿಂತು ಅಳುವ, ಜಗುಲಿಯ ಮೂಲೆಯಲ್ಲಿ ನಿಲ್ಲುವ ಸಾರು ಸ್ವಲ್ಪ ಉಪ್ಪಾದರೂ ಗಂಡ ಬೈವಾನೆಂದು ಭೀತಿಪಡುವ, ಪಾತ್ರೆ ಉಜ್ಜುತ್ತ ರೋಷವನ್ನೆಲ್ಲ ಕಾರಿಕೊಳ್ಳುವ ಸ್ವಂತ ಮನೆಯಲ್ಲಿ ಸ್ವಂತದ್ದಾಗಿ ಬದುಕುವ ಧೈರ್ಯವಿರದ ಎಷ್ಟೋ ಹೆಂಗಸರ ಎದೆಯಲ್ಲೂ ಆತ್ಮವಿಶ್ವಾಸ ಪ್ರಜ್ವಲಿಸಿದರೆ ಹೇಗಿದ್ದೀತು?

ಹಿತ್ತಲ ಕಟ್ಟೆಯ ಮೇಲೆ ಕೂತು ಆಡುವ ಮಾತುಕತೆಗಳು ಹೊಸಸೀರೆ, ಸಾಸಿವೆ ಡಬ್ಬ, ಗೌರಿಹಬ್ಬದ ಹೋಳಿಗೆಗಳನ್ನು ಹಿಂದೆ ಬಿಟ್ಟು ಜಗುಲಿಗೆ ಬಂದು ಎಲ್ಲರೊಂದಿಗೆ ಎಲ್ಲರಂತೆ ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು.

ಪುಸ್ತಕ ಪರಿಚಯ

• •

ಡಿ. ಎ. ಪ್ರಹ್ಲಾದ್

★ **ಅಮೃತ ಬಳ್ಳಿ ಕಷಾಯ:** ಕಥೆಗಳು : ಲೇ: ಜಯಂತ ಕಾಯ್ಕಿಣಿ
ಪ್ರ. ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ, ಬೆಲೆ ರೂ. 60/-

ಒಂದು ಚೆನ್ನಾಗಿರುವ ಕಥೆಯೊಂದರ ಪುಸ್ತಕ ಓದಿದಾಗ ಅದನ್ನು ಕುರಿತು ನೀವು ಏನಂತ ಹೇಳಬಹುದು? ಚೆನ್ನಾಗಿದೆ ಅಂತಷ್ಟೆ! ನಿಮ್ಮ ಮಾತುಗಳ ಯಾವ ಬಳಕೆಯೂ ಅದರ ಚೆನ್ನವನ್ನ ಇನ್ನೊಬ್ಬರಿಗೆ ಆ ಪುಸ್ತಕ ಓದಿದ ಹಾಗೆ ಮುಟ್ಟಿಸಲಾರದು

ಈ ಸಂಕಲನದ ಕಥೆಯೊಂದಿದೆ 'ಮೋಗ್ರಿಯ ಸತ್ಯಂಗ' ಎಂದು, ಅದರಲ್ಲಿ ಬರುವ ಪಾತ್ರವೊಂದು, "ಆ ಬಾಗಿಲನ್ನ ಒಂದು ಪೇಂಟಿಂಗ್ ಅಂತ ತಿಳಕೊಳ್ಳಿ ಆಗ ಎಂಥಾ ಅದ್ಭುತ ದೃಶ್ಯ ಕಾಣ್ತದೆ ನೋಡಿ" ಎಂದು ಮೋಗ್ರಿಗೆ ಮುಂಬಯಿಯ ಜೀವಂತ ಚಿತ್ರಣವನ್ನು ತೋರಿಸುತ್ತದೆ. ಹಾಗೆ ಈ ಕಥೆಗಳೆಂಬೋ ಚೌಕಟ್ಟಿನೊಳಕ್ಕೆ ನಗರದಲ್ಲಿ ಬದುಕುವ ವಿಧವಿಧವಾದ ಮನುಷ್ಯ ಜೀವಿಗಳ ಹಂಬಲ ತುಡಿತ ದುರಂತ ಪ್ರೇಮ-ಕಾಮ ಹೀಗೆ ಬದುಕಿನ ಅನೇಕ ಘಟ್ಟಗಳಲ್ಲಿ ಪಕ್ವಾಗುವುದು ಮಾಗುವುದು ಕಂಡುಬರುತ್ತದೆ.

ಹಾಲಿನ ಮೀಸೆಯ ಪುಂಡು, ಕುಶಿಕಾಕಿಯ ಮೌನ ದುರಂತಕ್ಕೆ ಸಾಕ್ಷಿಯಾಗುವ ತನ್ಮಯಿ, ಸೈಕಲ್ ಕಲಿಯುವಲ್ಲಿ ಕಲಿಸುವಲ್ಲಿ ಅವರಿಬ್ಬರೂ ಪಡೆಯುವ ಬಿಡುಗಡೆ, ದೂರದ ಅಸ್ಪಷ್ಟತೆಯ ಬೆನ್ನುಹತ್ತಿ ಮನುಷ್ಯ ಪ್ರೀತಿಯ ಮೂಲಕ ಚಂದ್ರಕಾಂತ ಪಮ್ಮೇಚರು ಪಡೆಯುವ ಬಿಡುಗಡೆ ನಿರಾಳತೆ ಇವೆಲ್ಲ ನಾವೇ ಆಗಿಬಿಡುವಷ್ಟು- ನಮ್ಮದೇ ಬಿಡುಗಡೆ - ನೋವು ನಿರಾಸೆಗಳಾಗುತ್ತವೆ.

ಈ ಎಲ್ಲ ಕಥೆಗಳೂ ಜೀವಂತ ತುಣುಕುಗಳಾಗಿ ನಗರ ಜಗತ್ತಿನ ಹತ್ತಿರಕ್ಕೆ ಫೋಕಸ್ ಮಾಡಿದ ಚಲಿಸುವ ಚಿತ್ರಗಳು, ನಗರ ಬದುಕಿನ ಅನಿವಾರ್ಯವಾದ ಕ್ರೌರ್ಯ, ಸಂಬಂಧಗಳ ಕ್ಷಣಿಕತೆ, ಮನುಷ್ಯರೆಲ್ಲರ ಬದುಕಿನ ವೈವಿಧ್ಯಗಳನ್ನ ನುಂಗಿ ಹಾಕುತ್ತಾ ನಿಲ್ಲಲಾರದ ನಿರಂತರ ಓಟವನ್ನು ವಿವಿಧ ಕೋನ-ದಿಕ್ಕುಗಳಲ್ಲಿ ವಿವಿಧ ಪಾತ್ರಗಳ ಮೂಲಕ ಸೆರೆಹಿಡಿಯುತ್ತವೆ. ಇಲ್ಲಿನ ಕಥೆಗಳು ಈ ಕಥೆಗಳ ಎಲ್ಲ ಮನುಷ್ಯರೂ ತಾವು ಇರುವ ಸ್ಥಿತಿಯಿಂದ ಬದುಕಿನ ಬಗ್ಗೆ ಇನ್ನಷ್ಟು ಹೊಸ ಹುರುಪು

ರೂಢಿಸಿಕೊಂಡು ಉತ್ಸುಕತೆಯಿಂದ ಈ ಕಥೆಯು ಘಟಿಸಿದ ನಂತರವೂ ತಂತಮ್ಮ ದಿಕ್ಕುಗಳಿಗೆ ಮರುಳುವುದನ್ನು ಅನುಭವಿಸಬಹುದು. ಇಲ್ಲಿನ ಪ್ರತಿ ಕಥೆಯ ನಂತರವೂ ಹೊಸ ಇನ್ನಿಂಗ್ಸನ್ನು ಆರಂಭಿಸುವ ಹುರುಪು ಹುಟ್ಟಿದರೆ ಅದು ಅವರವರ ಭಾವಕ್ಕೆ ಅವರವರ ಬದುಕಿನ ಭಕುತಿಗೆ ಬಿಟ್ಟದ್ದೆನಿಸುತ್ತದೆ.

ಗಾಳಿಯ ದೈವಿಕ ಹಾದಿಗಳು:
ಸಂ: ಕಾರಿನ್‌ಕುಮಾರ್, ಎಲ್ಸಿ ನಾಗರಾಜು,
ಕ್ರಿಸೋಲೋಗೋ ಸುರೇಶ್ ಜಯರಾಂ. ಕನ್ನಡ ಅನು: ಎಲ್ಸಿ ನಾಗರಾಜು
ಪ್ರ: ಸ್ತ್ರೀ ಲೇಖ 15/55 ಜೀವನ್‌ಕೇಂದ್ರ ಲೇಔಟ್ ಕೇಂಬ್ರಿಡ್ಜ್ ರಸ್ತೆ ಬೆಂಗಳೂರು–8,
ಬೆಲೆ ರೂ.150/–

ಮನುಷ್ಯ ಸಮುದಾಯದ ವಿವೇಕ ನಮ್ಮ ಅಭಿವೃದ್ಧಿಯ ಅಬ್ಬರದಲ್ಲಿ ಇಲ್ಲವಾಗುತ್ತಿರುವ ಈ ಭೂಮಿಯನ್ನು ಕುರಿತ ತನ್ನ ಕಾಳಜಿ ಬಹು ಮುಖ್ಯವಾಗಿ ತೋರುತ್ತಿದೆ. ಗಾಳಿಯ ದೈವಿಕ ಹಾದಿಗಳು ಈ ಲೋಕದ ಅಸಂಖ್ಯ ಸಮುದಾಯಗಳು ಹತ್ತಾರು ಕವಿಗಳು ತಮ್ಮ ಭಾಷೆಗಳಲ್ಲಿ ಹಾಡಿದ್ದನ್ನ ಪ್ರಕೃತಿಯ ಬಗ್ಗೆ ವ್ಯಕ್ತಪಡಿಸಿದ ಪ್ರೀತಿ ಕಾಳಜಿಗಳನ್ನು ನಮ್ಮ ನುಡಿಯಲ್ಲಿ ತೆರೆದಿಟ್ಟು ತೋರುತ್ತದೆ. ಇಷ್ಟೊಂದು ಜನಾಂಗ ವಿಭಿನ್ನ ಭಾಷೆಗಳ ಅನುಭವಗಳನ್ನ ನಮ್ಮ ಭಾಷೆಯಲ್ಲಿ ತೆರೆದಿಟ್ಟು ತೋರುವುದೇ ಒಂದು ಮುಖ್ಯ ಅಂಶ. ಈ ಪುಸ್ತಕದ ಕಾಳಜಿ ಅದೇ ಆಗಿದೆ, ಹರಿಯುತ್ತಿರುವ ನದಿಯಿಂದ ಬೊಗಸೆ ನೀರನ್ನು ಕೈಗೆತ್ತಿಕೊಂಡಾಗ ಅದು ಉಳಿದದ್ದಕ್ಕಿಂತ ಭಿನ್ನವಾಗುವುದಿಲ್ಲ ಹಾಗೆ ಪುಟ ಸಂಖ್ಯೆಗಳಿಲ್ಲದ (ಉದ್ದೇಶಪೂರ್ವಕವಾಗಿ ಕೈ ಬಿಡಲಾಗಿದೆ) ಈ ಪುಸ್ತಕವನ್ನು ಯಾವ ಪುಟದಿಂದಲಾದರೂ ಓದಲಾರಂಭಿಸಬಹುದು ನದಿಯ ನೀರಿನ ಹಾಗೆ.

ಮುನ್ನುಡಿ ಬರೆದಿರುವ ಕೆ. ವಿ. ನಾರಾಯಣ ಅವರು ನಮ್ಮ ಕಾಲದ ಕೆಲವು ಮುಖ್ಯ ಪ್ರಶ್ನೆಗಳನ್ನೇ ಚರ್ಚಿಸಿದ್ದಾರೆ. ಎಲ್ಲದರಲ್ಲೂ ಅರ್ಥ ಹುಡುಕುವ ರ್‍ಯಾಷನಲ್ ಭಂಜಕ ಮನೋಭಾವ, ಪುರಾಣಗಳನ್ನ ನಿರಾಕರಿಸುವ, ಚಂದ್ರನನ್ನು ಬಿಟ್ಟು ತೋರುಬೆರಳನ್ನ ನೋಡುತ್ತಾ ಅರ್ಥೈಸುವ ಆಧುನಿಕ ಪ್ರವೃತ್ತಿಗಳನ್ನ ಪ್ರಶ್ನಿಸುತ್ತಾ ಹೊಸದಾದ ಪುರಾಣಗಳಿಲ್ಲದ ಪಾವಿತ್ರ್ಯದ ಸಾನ್ನಿಧ್ಯ ಮಂಡಿಸುತ್ತಾರೆ. ಈ ಪಾವಿತ್ರ್ಯದ ಪುನರ್ ನಿರೂಪಣೆ ಈ ಕ್ಷಣದ ಜರೂರತ್ತೆನಿಸುತ್ತದೆ

ಎಲ್ಲಕ್ಕಿಂತಲೂ ಮುಖ್ಯವಾಗಿ ಕನ್ನಡದ ಮಟ್ಟಿಗೆ ಈ ರೀತಿಯ ವಿನೂತನ ಪ್ರಯೋಗ ನಡೆಸಿರುವ ಎಲ್ಸಿ ಮತ್ತು ಅವರ ಸಹೋದ್ಯೋಗಿಗಳು ಅಭಿನಂದನಾರ್ಹರು. ನಮ್ಮ ಕುಟುಕುವ ಪಂಡಿತರ ವಿಮರ್ಶೆಗಳಿಗೆ ತಲೆ ಕೆಡಿಸಿಕೊಳ್ಳದೆ ಇಂಥಾದ್ದನ್ನ

ಇನ್ನಷ್ಟು ಕನ್ನಡಕ್ಕೆ ತರುವಂತಾಗಲಿ, ಇದೇ ಪುಸ್ತಕದ ಮತ್ತೊಂದು ಆಕರ್ಷಣೆ ಅದರ ಆಕಾರ ಸುಂದರವಾದ ಮುದ್ರಣ- ವರ್ಣ ವಿನ್ಯಾಸ ಅದರ ಅಚ್ಚುಕಟ್ಟುತನ ಇವೆಲ್ಲವೂ ಕನ್ನಡ ಪುಸ್ತಕಗಳ ಮಟ್ಟಿಗೆ ಹೊಸದೆನ್ನಬಹುದು. ಒಟ್ಟಾರೆ ಒಂದೇ ಮಾತಿನಲ್ಲಿ ಹೇಳಬಹುದಾದರೆ ಅಭಿರುಚಿವಂತರೆಲ್ಲರ ಸಂಗ್ರಹಕ್ಕೆ ಈ ಪುಸ್ತಕ ಅಗತ್ಯ. ಇದು ಬರೀ ಪುಸ್ತಕದ ಪರಿಚಯವಾದ್ದರಿಂದ ಹೊರಗಿನ ಆವರಣಕ್ಕೆ ಮೀಸಲಾಗಿದೆ. ಒಳಗಿನ ಹೂರಣಕ್ಕೆ ನೀವು ಮೊರೆ ಹೋಗಬೇಕಾಗಿರುವುದು ಪುಸ್ತಕಕ್ಕೆ ಅದರ ಓದಿನಿಂದ ನೀವು ಗುಣಿಸುವ ಅನುಭವಕ್ಕೇ.

ಒಂದು ಅನುರಾಗಕ್ಕಾಗಿ ಎಷ್ಟೆಲ್ಲ : (ಕವಿತೆಗಳು) ಕೆ. ಪಿ. ಮೃತ್ಯುಂಜಯ
ಪ್ರ : ಅಭಿನವ, ಬೆಂಗಳೂರು ಬೆಲೆ: 20/- ರೂ.

ಕವಿತೆಯೊಂದನ್ನು ಅಪ್ಪಟ ಕವಿತೆ ಅಂತಲೇ ಕರೆಯಬೇಕು. ಜಾಮೂನೊಂದನ್ನು ಜಾಮೂನು ಅಂತಲೇ. ತೀವ್ರವಾದ ತಾರುಣ್ಯದ ಪ್ರೇಮ ಕಾಮಗಳು ಮೃತ್ಯುಂಜಯ ಅವರ ಕವಿತೆಗಳನ್ನು ಕಾಡುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಇಲ್ಲಿನ ಕವಿತೆಗಳಲ್ಲಿ ಒಂದು ಗುಣ ಇದೆ ನೀವು ಪೇಜಿನಿಂದ ಪೇಜಿಗೆ ತಿರುಗುವ ಸಮಯ ಇದೆಯಲ್ಲ ಆ ಕ್ಷಣದಲ್ಲಿ ನಿಮ್ಮ ಮುಖದಲ್ಲಿ ಹುಟ್ಟುವ ಮುಗುಳ್ನಗುವೋ ಕಣ್ಣಲ್ಲಿ ನಿಲ್ಲುವ ವಿಷಾದವೋ ಆ ಕವಿತೆಯ ವಿಮರ್ಶೆ ಆಗಿಬಿಡುತ್ತೆ. ಅವನ್ನ ವಿಮರ್ಶೆ ಅಂತ ಭಯಂಕರವಾಗಿ ಕರೆಯುವ ಬದಲು ಪ್ರತಿಕ್ರಿಯೆ ಅಂದುಬಿಡುವ ಸರಳವಾಗಿ. ಮೃತ್ಯುಂಜಯ ಅವರ ಕವಿತೆಗಳಿಗೆ ಬೆನ್ನುಡಿ ಬರೆದ ರಶೀದರು ಹೇಳುವ ಕವಿತೆಯ ಮೂಲಕ ಸತ್ಯ ಹುಡುಕುವ - ಕವಿತೆಗಳನ್ನು ಇಟ್ಟುಕೊಂಡು ಇತಿಹಾಸ ಜಾತಕ ಪುರುಷರ ನಿರ್ಮಿತಿ ನಮ್ಮ ಓರಗೆಯ ಇತರ ಕವಿಗಳ ಹಾಗೆ ಅದೇನೂ ಢಾಳಾಗಿ ಕಾಣಬರುವ ಕೆಲಸವಾಗಿಲ್ಲ. ಹಾಗಂತ ಇವೆಲ್ಲವೂ (ಸಮಾಜ-ಸತ್ಯ) ಕಾಡದ ಕವಿತೆಗಳು ಬರೀ ಸಪೋಟ ಬಿಚ್ಚುವ ಆಟವಾಗಿ ಬಿಟ್ಟರೂ ಸಾಲದೆನಿಸುತ್ತದೆ. ಒಂದು ಶುದ್ಧ ಅಳು, ಒಂದೇ ಒಂದು ಅನುರಾಗಕ್ಕಾಗಿ ಎಷ್ಟೆಲ್ಲ; ಮೃತ್ಯುಂಜಯ ಕವಿತೆಯನ್ನೊಂದು ಗಂಭೀರವಾದ ದೇವರು ದೆವ್ವ ಎಲ್ಲವೂ ಆಗಿ ಸ್ವೀಕರಿಸಿರುವುದಕ್ಕೆ ಸಾಕ್ಷಿ. ಬೆನ್ನುಡಿಯಲ್ಲಿ ಸಹೃದಯನಿಗೆ ಸಂತೋಷ ನೀಡದ ಕೆಲವು ಕವಿತೆಗಳನ್ನು ಉದಾಹರಿಸಲಾಗಿದೆ. ಇವುಗಳು ಮೇಲೆ ಹೇಳಿದ ಪುಟದಿಂದ ಪುಟದ ನಡುವಿನ ನಂತರದ ಕ್ಷಣಕ್ಕೆ ನೀಡುವ ಖುಷಿಯ ಕ್ಲಿಕ್ಕಾಗುವುದನ್ನು ನಿರಾಕರಿಸಲಾಗುವುದಿಲ್ಲ.

ಮತ್ತೊಂದು ವಿಷಯ; ಈ 'ಒಂದು ಅನುರಾಗಕ್ಕಾಗಿ ಎಷ್ಟೆಲ್ಲ' ಕವಿತೆಗೆ ೯೪ರ ಸಂಚಯದ ಸಾಹಿತ್ಯ ಸ್ಪರ್ಧೆ ಬಹುಮಾನ ಬಂದಿತ್ತೆನ್ನುವುದು ಈ ಪರಿಚಯಿಸುವ ಖುಷಿಗೆ ಮತ್ತೊಂದು ಸೇರ್ಪಡೆ.

ಆಸ್ಪತ್ರೆಯಲ್ಲಿ ಹತ್ತು ವರ್ಷ : ಟಿ. ಎಂ. ಷಡಕ್ಷರಿ
ಚಿನ್ಮಯಿ ಪ್ರಕಾಶನ, ಬೆಳಗೆರೆ, ಚಳ್ಳಕೆರೆ ತಾ|| ಚಿತ್ರದುರ್ಗ ಜಿಲ್ಲೆ.

ಮನುಷ್ಯನೊಬ್ಬ ಜೀವಂತವಾಗಿ (ನಿಜವಾದ ಅರ್ಥದಲ್ಲಿ!) ಹತ್ತುವರ್ಷ. ಆಸ್ಪತ್ರೆಯಲ್ಲಿ ಉಳಿದಿದ್ದ ಎನ್ನುವುದೇ ಪವಾಡದ ಹಾಗೆ ನಮ್ಮಂಥವರಿಗೆ ಕಾಣುತ್ತದೆ. ಟಿ. ಎಂ. ಷಡಾಕ್ಷರಿ ತಾನು ಬದುಕಿದ್ದಾಗಲೇ 'ಮೌನಗೀತೆ' 'ಮೌನ ಸ್ಪಂದನ' ಎಂಬ ಎರಡು ಕವನ ಸಂಕಲನ ಪ್ರಕಟಿಸಿದ್ದರು. ಎಂಭತ್ತನಾಲ್ಕು ಪುಟಗಳ ಮಿತಿಯೊಳಗೆ ತಾನು ಆಸ್ಪತ್ರೆಯಲ್ಲಿ ಬದುಕಿದ ಕಂಡ ಅನುಭವಿಸಿದ ಅನೇಕ ಸಂಗತಿಗಳನ್ನು ಹಂಚಿಕೊಂಡಿದ್ದಾರೆ, ಸಂಪೂರ್ಣ ಅಂಗವಿಕಲರಾಗಿದ್ದ ಷಡಾಕ್ಷರಿಗೆ ಸಂತೋಷಕ್ಕೋ ದುಃಖಕ್ಕೋ ಕಣ್ಣೀರು ಬಂದಾಗ ಒರೆಸಿಕೊಳ್ಳಲು ಸಾಧ್ಯವಾಗುತ್ತಿದ್ದುದು ಪಕ್ಕದಲ್ಲಿರುತ್ತಿದ್ದ ಸ್ಕೇಲಿನಿಂದ ಬೆರಳಿನಿಂದಲ್ಲ! ಕೈಯ ಕೆಲವೇ ಬೆರಳು ಮಾತ್ರ ಸಕ್ರಿಯವಾದ ಷಡಾಕ್ಷರಿಯ ದೇಹ ಜಡವಾಗಿದ್ದರೂ ಮನಸ್ಸು ಮಾತ್ರ ಜಗತ್ತಿನ ಎಲ್ಲಾ ವಿಷಯಗಳನ್ನ ಅಪ್ಪಿಕೊಂಡಿತ್ತು. ಹೇಗೋ ಓದುವ ಸಾಹಿತ್ಯದ ಗೀಳು ಹತ್ತಿಸಿಕೊಂಡ ಷಡಾಕ್ಷರಿ ಅಸಂಖ್ಯಾತ ಜನಗಳ ಸ್ನೇಹ ಗಳಿಸಿದ್ದರು. ಈ ಪುಸ್ತಕದ ಒಟ್ಟು ನಿರೂಪಣೆ ತುಂಬಾ ಸರಳವಾಗಿ ಕಣ್ಣಿಗೆ ಕಂಡದ್ದು ಅನುಭವಿಸಿದ ನೋವು ಒಂಟಿತನ ಅಸಹಾಯಕತೆಯ ದುಃಖ ಇವುಗಳೆಲ್ಲರ ಹಿನ್ನೆಲೆಯೊಂದಿಗೆ ಕಥಿಸತೊಡಗುತ್ತವೆ. ಮಂಚದ ಮೇಲೆ ತನ್ನ ಜೀವನದ ಅರ್ಧದಷ್ಟು ಆಯುಸ್ಸು ಸವೆಸಿದ ಷಡಾಕ್ಷರಿ ಕಂಡ ಜಗತ್ತು ನಮ್ಮ ಸಮಾಜದ ವ್ಯಾಖ್ಯೆ. ನಾವು ಅಂಗವಿಕಲರ ಬದುಕನ್ನು ಎಷ್ಟರ ಮಟ್ಟಿಗೆ ಸಹನೀಯ ಗೊಳಿಸಿದ್ದೇವೆ ಎನ್ನುವುದರ ದಾಖಲೆ. ಅದೃಷ್ಟವಶಾತ್ ಷಡಾಕ್ಷರಿಗೆ ಮಾತಾಡುವ ಬಾಯಿ ಬರೆಯುವ ಅವಕಾಶ ಸಿಕ್ಕಿತು ಆದರೆ ಮಾತು ಕಳಕೊಂಡ ಅಸಂಖ್ಯ ಷಡಾಕ್ಷರಿಗಳು ಹೇಗೆ ಹೇಳಿಕೊಂಡಾರು ತಮ್ಮ ದುಃಖಗಳನ್ನ.

ಸಮುದ್ರ ನೋಡಿದ್ದು, ಜಗದ್ಗುರುಗಳ ಆಶೀರ್ವಾದ, ವಿಚಾರ ಸಂಕಿರಣವೊಂದರಲ್ಲಿ ಸಾಹಿತಿಗಳ ಸಂಗ, ತಾನು ಪಡಕೊಂಡ ಗೆಳೆಯರು ತನ್ನ ಹೆಸರನ್ನ ಬಳಸಿಕೊಂಡು ಗೌರವ ಸಂಪಾದಕನನ್ನಾಗಿಸಿದ ಪತ್ರಿಕೆಯ ಜನ, ಕ್ಯಾಸೆಟ್ಟಿನ ಮಂದಿ ಹೀಗೆ ಅನೇಕರ ಜೊತೆಗಿನ ಪ್ರೇಮ ಸುಖ ದುಃಖಗಳನ್ನು ತೆರೆದಿಡಲಾಗಿದೆ ಅಂಗವಿಕಲತೆಯಿಂದಾಗಿ ಬದುಕು ಭಾರವೆನಿಸಿ ನಿರಾಸೆ ಹೊತ್ತು ಕುಗ್ಗುವ ಬದಲು ಷಡಾಕ್ಷರಿಗೆ ಕಾಣುವುದು ಜೀವನ ಬಗೆಗಿನ ಪ್ರೀತಿ ಅಖಂಡ ಪ್ರೀತಿ ಮಗುವಿನ ಬೆರಗು.

ಕೆ. ಸತ್ಯನಾರಾಯಣ ಅವರು ತಮ್ಮ ಮುನ್ನುಡಿಯಲ್ಲಿ ಗುರುತಿಸಿರುವ ಹಾಗೆ ನಮ್ಮ ಈ ಬರಹ ನಾಗರೀಕ. ಸಮಾಜದ ವಿರುದ್ಧ ಬರೆದ ಪ್ರತಿಭಟನೆ ನಮ್ಮ ಬಗ್ಗೆ ನಾವು ನಾಚಿಕೆ ಪಟ್ಟುಕೊಳ್ಳುವುದು, ಇದಕ್ಕೆ ಸೂಕ್ತ ಪ್ರತಿಕ್ರಿಯೆ, ಷಡಾಕ್ಷರಿ ಸಂಚಯದ

ಗೆಳೆಯರಾಗಿದ್ದರು ಈ ಎಲ್ಲ ಚಟುವಟಿಕೆ ಬೇಸರ ತರಿಸಿ ನಿಲ್ಲಿಸಿಬಿಡಬೇಕೆನ್ನುವ ಒಂದು ದಿನ ಅವರು ಕಳಿಸಿದ 20 ರೂಪಾಯಿ (ಆ ಕಾಲಕ್ಕೆ ಚಂದಾ ಹಣ) ಉಳಿದ ಐದು ರೂಪಾಯಿ ಆಮೇಲೆ ಕಳುಹಿಸುತ್ತೇನೆನ್ನುವ ಪ್ರಾಮಾಣಿಕ ಕಾಳಜಿ ನನ್ನನ್ನು ಬೆರಗುಗೊಳಿಸಿತ್ತು, ಮತ್ತೆ ಹುರುಪು ತುಂಬಿತ್ತು. ನಿರಂತರ ಪತ್ರ ವ್ಯವಹಾರದ ಮೂಲಕ ಸಂಚಯದ ಹತ್ತಿರದ ಗೆಳೆಯರಾಗಿದ್ದ ಷಡಾಕ್ಷರಿಯ ಪುಸ್ತಕದ ಪರಿಚಯ ಖಂಡಿತಾ ಇದಾಗಿಲ್ಲ. ಸ್ನೇಹವೊಂದರ ನಿರೂಪಣೆಯಾಗಿದ್ದರೆ ನೀವೂ ಒಪ್ಪುತ್ತೀರಲ್ಲ? ಷಡಾಕ್ಷರಿ ಬದುಕಿದ್ದಾಗಲೇ ಈ ಪುಸ್ತಕ ಹೊರಬಂದಿದ್ದರೆ ಇನ್ನಷ್ಟು ಸಂತೋಷ ಪಡುತ್ತಿದ್ದರೇನೋ. ಹಿರಿಯರಾದ ಬೆಳಗೆರೆ ಕೃಷ್ಣಶಾಸ್ತ್ರಿಗಳು ಈ ಪುಸ್ತಕ ಪ್ರಕಟಿಸುವ ಮೂಲಕ ಷಡಾಕ್ಷರಿಯ ಸೆನಪಿಗೆ, ನಮ್ಮೆಲ್ಲರ ಅಭಿನಂದನೆಗೆ ಕಾರಣವಾಗಿದ್ದಾರೆ.

ಸಂಚಯ ಸುದ್ದಿ

ಕರ್ನಾಟಕದ ಸಮಕಾಲೀನ ಕಲೆಯನ್ನು ಕುರಿತು ವಿಚಾರ ಸಂಕಿರಣವೊಂದನ್ನು ಸಂಚಯ ಬಳಗವು ತನ್ನ ಹತ್ತನೇ ವರ್ಷದ ಸಂಭ್ರಮದ ಭಾಗವಾಗಿ ಆಗಸ್ಟ್ ೧೮ರಂದು ಬೆಂಗಳೂರಿನ ಗಾಂಧಿ ಸಾಹಿತ್ಯ ಸಂಘದಲ್ಲಿ ಯೋಜಿಸಲಾಗಿತ್ತು. ಕರ್ನಾಟಕ ಲಲಿತಾ ಕಲಾ ಅಕಾಡೆಮಿ ಅಧ್ಯಕ್ಷ ಸಿ. ಚಂದ್ರಶೇಖರ್ ವಿಚಾರ ಸಂಕಿರಣ ಉದ್ಘಾಟಿಸಿದರು. ಕರ್ನಾಟಕದ ಸಮಕಾಲೀನ ಕಲೆಯ ನೆಲೆಗಳನ್ನು ಕುರಿತು ಚಿ. ಸು. ಕೃಷ್ಣಸೆಟ್ಟಿ ಮತ್ತು ಸಂವೇದನೆಯ ನೆಲೆಗಳ ಬಗ್ಗೆ ಕೆ. ವಿ. ಸುಬ್ರಮಣ್ಯಂ ಮಾತನಾಡಿದರೆ ಅಭಿವ್ಯಕ್ತಿಯ ವಸ್ತು ತಂತ್ರರ ವಿವಿಧ ರೂಪಗಳ ಬಗ್ಗೆ ರಮೇಶ್‌ಚಂದ್ರ, ಕಲಾ ವಿಮರ್ಶೆಯ ಬಗ್ಗೆ ಹೆಚ್. ಎ. ಅನಿಲ್, ಕಲಾ ಶಿಕ್ಷಣದ ಬಗ್ಗೆ ಎಂ. ಎಸ್. ಮೂರ್ತಿ ಪ್ರಬಂಧ ಮಂಡಿಸಿದರು, ಅನೇಕ ಆಸಕ್ತರು ಭಾಗವಹಿಸಿದ್ದ ಈ ಸಂಕಿರಣ ಮೊದಲ ಬಾರಿಗೆ ಸಮಕಾಲೀನ ಕಲೆಯ ಬಗೆಗಿನ ಚರ್ಚೆಯೊಂದರ ಆರಂಭ ಬಿಂದುವಾಗಿತ್ತು. ಎಸ್. ಜಿ. ವಾಸುದೇವ್ ಮತ್ತು ಅನೇಕ ಕಲಾವಿದರು ಕಲಾಸಕ್ತರು ಈ ಸಂಕಿರಣದಲ್ಲಿ ಭಾಗವಹಿಸಿದ್ದರು.

ಸಂಕ್ಷಿಪ್ತ

ವಿ.ಸೀ. ಸಂಪದ

ಕನ್ನಡದ ಮಟ್ಟಿಗೆ ಹೆಚ್ಚು ಪ್ರಸಿದ್ಧಿಗೆ ಬಂದ ಸಮರ್ಥ ಲೇಖಕರೆಷ್ಟೋ ಅಷ್ಟೇ ಜನ ಕತ್ತಲಲ್ಲಿ ಉಳಿದ ಉತ್ತಮ ಬರಹಗಾರರಿದ್ದಾರೆ. ವಿ. ಸೀತಾರಾಮಯ್ಯನವರು ತಮ್ಮ ವಿದ್ವತ್ತು ಬಹುಮುಖೀ ಆಸಕ್ತಿ ಹಾಗೂ ಸ್ನೇಹ ಸೌಹಾರ್ದಕ್ಕೆ ಹೆಸರಾಗಿದ್ದವರು. ಅವರು ಕೆಲವು ಶಿಷ್ಯರು ಹಿತೈಷಿಗಳು ಕೂಡಿಕೊಂಡು ೧೯೯೦ರಿಂದ ವಿ.ಸೀ. ಸಂಪದದ ಅಡಿಯಲ್ಲಿ ಅವರ ಸಮಸ್ತ ಸಾಹಿತ್ಯವನ್ನ ಹತ್ತು ಹನ್ನೆರಡು ಸಂಪುಟಗಳಲ್ಲಿ ಪ್ರಕಟಿಸಲು ಮುಂದಾಗಿದ್ದಾರೆ. ಈಗಾಗಲೇ ಅವರ ಸಾಮಗ್ರ ಕಾವ್ಯ, ಪ್ರಬಂಧಗಳು ನಾಟಕಗಳ ಸಂಪುಟ ಪ್ರಕಟಗೊಂಡಿದ್ದು ಇತ್ತೀಚೆಗೆ ಶಿವರಾಮ ಕಾರಂತರು ಅವರ ಸಮಗ್ರ ವ್ಯಕ್ತಿಚಿತ್ರ ಸಂಪುಟವನ್ನು ಬಿಡುಗಡೆ ಮಾಡಿದರು. ವಿ. ಸೀ.ಯವರ ಹಾಗೇ ಇವತ್ತಿನ ಝಗಮಗಿಸುವ ತಾರೆಗಳ ನಡುವೆ ನನೆಪಾಗದೇ ಉಳಿದ ಕೆ. ವಿ. ಅಯ್ಯರ್, ಶ್ರೀರಂಗ, ರಾಳ್ಳಪಳ್ಳಿ ಅನಂತಶರ್ಮರಂಥಾ ಹಿರಿಯರ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಇದರ ಜೊತೆಗೆ ವಿ.ಸೀ. ಸಂಸ್ಮರಣ ಉಪನ್ಯಾಸ ಏರ್ಪಡಿಸಿ ಅವುಗಳ ಪ್ರಕಟಣೆ ನಡೆದು ಬರುತ್ತಿದೆ. ಹಳೆಯ ತಲೆಮಾರಿನವರ ನೆನಪು ಜೊತೆಗೆ ಉತ್ತಮ ಅಭಿರುಚಿಗೆ ಅಚ್ಚುಕಟ್ಟುತನಕ್ಕೆ ಹೆಸರಾಗಿದ್ದ ವಿ.ಸೀ. ಅವರ ನೆನಪು ಸ್ಥಿರವಾಗುವ ಹಾಗೆ ಉತ್ತಮಮಟ್ಟದ ಪ್ರಕಟಣೆ ಅದನ್ನೊಂದು ಕಲೆಯ ಹಾಗೆ ರೂಢಿಸಿಕೊಳ್ಳಲಾಗಿದೆ. ವಿ.ಸೀ. ಸಂಪದ ಹಳೆಯತಲೆಮಾರಿನ ಮರೆತ ಹಿರಿಯರನ್ನ ಹೊಸ ಸಮಯಕ್ಕೆ ಜೋಡಿಸುವ ಕೊಂಡಿಯಾಗಿದೆ.

ಅರವತ್ತರ ಹಡಪದ್ ಮಾಸ್ತರ್

ಕರ್ನಾಟಕದ ಕಲೆಯ ಸಂದರ್ಭದಲ್ಲಿ ಕೆನ್ ಕಲಾ ಶಾಲೆ ಕೊಟ್ಟ ಕೊಡುಗೆ ಮಹತ್ತರವಾದದ್ದು. ಭಿನ್ನವಾದ ಆಲೋಚನೆಯನ್ನ ತನ್ನ ವಿದ್ಯಾರ್ಥಿಗಳಲ್ಲಿ ರೂಢಿಸಿ, ಅನೇಕ ಕಲಾವಿದರನ್ನು ಕಲಾ ಶಿಕ್ಷಕರನ್ನು ರೂಪಿಸಿದ ಈ ಕಲಾ ಶಾಲೆಯನ್ನ ಪ್ರಾರಂಭಿಸಿದ ಹಿರಿಮೆ ಆರ್. ಎಂ. ಪಡಪದ್ ಅವರದ್ದು. ಮೂಲತಃ ಬಾದಾಮಿಯವರಾದ ಹಡಪದ್ ಮಾಸ್ತರು ತಾವು ಬೆಳೆದದಕ್ಕಿಂತಲೂ ತಮ್ಮ ಸುತ್ತಲ ವಿದ್ಯಾರ್ಥಿಗಳ ಬೆಳವಣಿಗೆಯನ್ನು ಮುಖ್ಯವೆಂದು ಭಾವಿಸಿದರು. ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದವರು. ಆರ್ಥಿಕ ಲಾಭನಷ್ಟಗಳನ್ನು ಗಮನಿಸದೆ ಒಂದು ಉತ್ತಮ ಕಲಾ ಶಾಲೆ ರೂಪಿಸಿದ ಹಿರಿಮೆ ಅವರದ್ದು. ಇದರ ಜೊತೆಗೆ ಕೆನ್ ಕಲಾ ಶಾಲೆ ಒಂದು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದೆ. ಯಾವುದೇ ಪ್ರಗತಿಪರ ಸಾಹಿತ್ಯಿಕ ವೈಚಾರಿಕ ಚಟುವಟಿಕೆಗಳಿಗೆ ಕಾರ್ಯಕ್ರಮಗಳಿಗೆ ಕೆನ್ ಸ್ಕೂಲಿನ ಸಹಕಾರ ಇದ್ದೇ ಇರುತ್ತೆ. ಬಾಗಿಲು ಗೇಟುಗಳಿಲ್ಲದ ಈ ಮುಕ್ತ ಪರಿಸರದಲ್ಲಿ ಸರಳತೆಯ ಸಹೃದಯತೆಯ ಹಡಪದ್ ಮಾಸ್ತರ ಮಾತುಗಾರಿಕೆ 'ಬರ್ರೀS' ಎಂದು ಚಹಾಸಮಾರಾಧನೆ ಚರ್ಚೆ ನಡೆಸುವುದೆದೆಯಲ್ಲ ಬಹಳ ಉಪಯುಕ್ತವಾದದ್ದು. ಕೆನ್ ಕಲಾಶಾಲೆ ಬೆಳೆಯಲಿ ಹಡಪದ್ ಅವರ ಸರಳತೆ ಕಲೆಯ ಜೊತೆಗೇ ಮನುಷ್ಯ ಪ್ರೀತಿ ನಿರಂತರವಾಗಲಿ ಎಂದು ಹಾರೈಸೋಣ.

ಈ ಸಂಚಯದ ಲೇಖಕರು

ಜಿ. ಕೆ. ರವೀಂದ್ರಕುಮಾರ್
ಕಾರ್ಯಕ್ರಮ ನಿರ್ವಾಹಕ
ಆಕಾಶವಾಣಿ
ಕಾರವಾರ
ಉತ್ತರಕನ್ನಡ–581 301

ಸರಸ್ವತಿ ಗಂಗೊಳ್ಳಿ ಬಿ. ಕೆ.
67, ರಾಜಧಾನಿ ಕಾಲನಿ
ಗೋಕುಲ ರಸ್ತೆ
ಹುಬ್ಬಳ್ಳಿ–580 030

ಬಿ. ಆರ್. ಪೋಲೀಸ್‌ಪಾಟೀಲ
'ವಾತ್ಸಲ್ಯ' ಸೋಮವಾರಪೇಟೆ
ಬನಹಟ್ಟಿ (ವಿಜಾಪುರ)
587311

ಕೆ. ಆರ್. ಗಣೇಶ್
42, ಎನ್.ಹೆಚ್.ಸಿ.ಎಸ್. ಲೇಔಟ್
Plan II
ಪ್ರಶಾಂತನಗರ ಬೆಂಗಳೂರು.

ಬಿ.ಜಿ. ಕೃಷ್ಣಮೂರ್ತಿ
C/o. ಅನ್ನಪೂರ್ಣೇಶ್ವರಿ ಮೆಸ್
ಭಾರತೀಬೀದಿ
ಶೃಂಗೇರಿ–577 139

ಎಂ. ಆರ್. ಭಗವತಿ
'ಹೇಮಕುಂಜ' 6ನೇ ಕ್ರಾಸ್
ವಿಶ್ವೇಶ್ವರಯ್ಯ ಬಡಾವಣೆ
SIT ರಸ್ತೆ, ತುಮಕೂರು–572 102

ಎನ್. ಎಸ್. ಶ್ರೀಧರಮೂರ್ತಿ
ನಂ. 14/1, ಗ್ರೋವೆಲ್ ಹೌಸ್
ಕ್ರೆಸೆಂಟ್ ರಸ್ತೆ
ಬೆಂಗಳೂರು–560 001

ವಾಸುದೇವ ನಾಡಿಗ್
5ನೇ ಕ್ರಾಸ್, ರವೀಂದ್ರನಗರ
ಶಿವಮೊಗ್ಗ–577 201

ಪಿ. ಮಂಜುನಾಥ್
C/o. ಉಗಮಶ್ರೀನಿವಾಸ್
5ನೇ ಮೇನ್
ಕೆ. ಆರ್. ಬಡಾವಣೆ
ತಿಪಟೂರು–572 202

ಶಂಕರ ಪಾಟೀಲ
ಕಲಾಭವನ
ವಿದ್ಯಾನಗರ
ದಾವಣಗೆರೆ–577005.

ಮಾಧವ ಐತಾಳ್
ನಂ. 4235, 4ನೇ ಮೇನ್
ಅಂಬೇಕರ್ ಕಟ್ಟಡ
ಸುಬ್ರಹ್ಮಣ್ಯನಗರ
ಬೆಂಗಳೂರು–560 021

ಸುಧಾಶರ್ಮ ಚವತ್ತಿ
ಉಪಸಂಪಾದಕಿ ಸಂಯುಕ್ತ ಕರ್ನಾಟಕ
ರೆಸಿಡೆನ್ಸಿ ರಸ್ತೆ
ಬೆಂಗಳೂರು–560 001

ಈ ಸಂಚಯದಲ್ಲಿ...

SANCHAYA Edited, Printed & Published by D. V. Prahlad
24/D 17th Main Muneshwara Block, GEF P.O. Bangalore-26